01 April 2026 Wednesday
SINCE 1957
ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ
ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಪ್ರತಿಯೊಂದು ವಸ್ತುವಿನ ಬೆಲೆ ತಿಳಿಯುವುದು ಗಳಿಸುವ ಮೊದಲು ಹಾಗು ಕಳೆದುಕೊಂಡ ನಂತರ!

-ಸ್ನೇಹಾ ಆನಂದ್

info.varthaman@gmail.com



21ಕ್ಕೆ ಗುಂಡ್ಲುಪೇಟೆಗೆ ಸಿಎಂ: 600 ಕೋಟಿ ರೂ. ಕಾಮಗಾರಿಗಳಿಗೆ ಚಾಲನೆ — ಪುಟ ಸಂ. 2



ಜ.ತಿಮ್ಮಯ್ಯ ಸಾಹಸ, ಸಾಧನೆ ಅಪಾರ: ಶಾಸಕ ಪೊನ್ನಣ್ಣ ಅಭಿಮತ — ಪುಟ ಸಂ. 3



ಜಗತ್ತಿಗೆ ಶಾಂತಿಯ ತತ್ವ ಬೋಧಿಸಿದ ಮಹಾವೀರರ ಸಂದೇಶಗಳು ಅಗತ್ಯವಿದೆ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್
VARTHAMAN Volume: 69 Issue: 136 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

# 'ಸೌದೆ ಒಲೆ ಭಾಗ್ಯ' ಯೋಜನೆ ಜಾರಿ!

## ಕೇಂದ್ರ ಸರ್ಕಾರದ ವಿರುದ್ಧ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ವಾಗ್ದಾಳಿ

**ಬೆಂಗಳೂರು:** ಕೇಂದ್ರ ಬಿಜೆಪಿ ಸರ್ಕಾರ ಜನರಿಗೆ ಉಜ್ವಲ ಗ್ಯಾಸ್ ಬದಲಿಗೆ ಸೌದೆ ಒಲೆ ಯೋಜನೆ ನೀಡಿದೆ. ಅಚ್ಛೇ ದಿನ ಏನಾಯ್ತು? ಈಗ ಕಚ್ಚಾ ದಿನ ಎಂದು ಹೇಳಬೇಕೆ? ಎಂದು ಕೇಂದ್ರ ಸರ್ಕಾರದ ವಿರುದ್ಧ ಡಿಸಿಎಂ ಡಿ.ಕೆ.ಶಿವಕುಮಾರ್ ವಾಗ್ದಾಳಿ ನಡೆಸಿದರು.

ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಪಂಚರಾಜ್ಯ ಚುನಾವಣೆ ನಡೆಯುತ್ತಿದೆ. ಜನರು ಪರದಾಡುತ್ತಿದ್ದಾರೆ. ಹೊಟೇಲ್ ಗಳು ಬಂದ್ ಆಗುತ್ತಿವೆ. ಜನ ವಿದ್ಯುತ್ ಒಲೆ ಬಳಸುವ ಅನಿವಾರ್ಯತೆ ಎದುರಾಗಿದೆ. ಕಳೆದ 15 ದಿನಗಳಿಂದ ರಾಜ್ಯದಲ್ಲಿ ವಿದ್ಯುತ್ ಬಳಕೆ ಪ್ರಮಾಣ ಶೇ.10ರಷ್ಟು ಏರಿಕೆಯಾಗಿದೆ. ಕೇಂದ್ರ ಸರ್ಕಾರ ಜನರಿಗೆ ಸೌದೆ ಭಾಗ್ಯ ನೀಡಿದ್ದು, ಎಲ್ಲಿಂದ ಸೌದೆ ಒದಗಿಸುವುದು? ಎಂದು ಲೇವಡಿ ಮಾಡಿದರು.



ಕೇಂದ್ರ ಸರ್ಕಾರದ ತಪ್ಪು ನಿರ್ಧಾರ, ನೀತಿಗಳಿಂದ ಇಂದು ದೇಶದ ಜನ ಬೆಲೆ ಏರಿಕೆಯಿಂದ ನರಳುತ್ತಿದ್ದಾರೆ. ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆ ಮಾತ್ರವಲ್ಲ, ಟೋಲ್ ಶುಲ್ಕ, ರೈಲ್ವೇ ಟಿಕೆಟ್ ದರ ಎಲ್ಲವೂ ಹೆಚ್ಚಾಗಿದೆ. ಕೆಲವು ಅನಿವಾರ್ಯ ಪರಿಸ್ಥಿತಿಯಲ್ಲಿ ರಾಜ್ಯ ಸರ್ಕಾರ ಬೆಲೆ ಏರಿಕೆ ತೀರ್ಮಾನ ಮಾಡಿದಾಗ ಟೀಕೆ ಮಾಡುತ್ತಿದ್ದ ಬಿಜೆಪಿ ಸರ್ಕಾರ ಸಾಮಾನ್ಯ ಜನರ ಮೇಲೆ ಬೆಲೆ ಏರಿಕೆ ಯುದ್ಧ ಮಾಡುತ್ತಿದೆ ಎಂದು ಟೀಕಿಸಿದರು.

ಕಬ್ಬಿಣದ ಬೆಲೆ 47 ಸಾವಿರದಿಂದ 59 ಸಾವಿರಕ್ಕೆ ಹೆಚ್ಚಳವಾಗಿದೆ. ಹೀಗಾದರೆ ಜನಸಾಮಾನ್ಯ ಮನೆ ಕಟ್ಟುವುದು ಹೇಗೆ. ಇದರಿಂದ ಸರ್ಕಾರದ ಕಾಮಗಾರಿಗಳಿಗೂ ಹಿನ್ನಡೆಯಾಗುತ್ತಿದೆ. ಇದ್ದಕ್ಕಿದ್ದಂತೆ ವಿಮಾನ ಪ್ರಯಾಣದರವನ್ನ ಶೇ.18 ರಷ್ಟು ಏರಿಕೆ ಮಾಡಲಾಗಿದೆ ಎಂದು ಹೇಳಿದರು.

ಅರಣ್ಯಗಳಿಗೆ ಜನರು ಹೋಗಬಾರದು ಎಂದು ಹೇಳಿರುವ ಕಾರಣಕ್ಕೆ ಸೌದೆ ಅಭಾವ ಹೆಚ್ಚಾಗಲಿದೆ. ಹಳ್ಳಿಗಳಲ್ಲೂ ಸಹ ಗ್ಯಾಸ್ ಬಳಕೆ ಹೆಚ್ಚಾಗಿ ಜನರು ಸೌದೆ ಬಳಸುತ್ತಿಲ್ಲ. ಒಮ್ಮೆಲೆ ಬಳಕೆ ಹೆಚ್ಚಾದರೆ ಅಭಾವ ಉಂಟಾಗಲಿದೆ. ಬ್ಲಾಕ್ ಮಾರ್ಕೆಟ್ ಕೆಲಸ ಮಾಡುತ್ತಿದೆ. 2 ಸಾವಿರದವರೆಗೆ ಗೃಹ ಬಳಕೆ ಗ್ಯಾಸ್, 4 ಸಾವಿರದವರೆಗೆ

ಪುಟ 2ಕ್ಕೆ



### 900 ಔಷಧಗಳ ದರ ಏರಿಕೆ

900 ಔಷಧಗಳ ದರ ಏರಿಕೆ ಮಾಡಲಾಗಿದೆ. ಶೇ.12 ಜಿಎಸ್‌ಟಿ ವಿಧಿಸಲಾಗಿದೆ. ಬೆಲೆ ಏರಿಕೆ ಮಾಡಿ ಇವುಗಳಿಗೆ ಶೇ.10.7ರಷ್ಟು ಇದ್ದ ತೆರಿಗೆಯನ್ನು ಶೇ 12ಕ್ಕೆ ಏರಿಕೆ ಮಾಡ ಲಾಗಿದೆ. ಪ್ಲಾಸ್ಟಿಕ್ ಪೈಪ್ ಸೇರಿದಂತೆ ಇತರೇ ವಸ್ತುಗಳ ಬೆಲೆಯನ್ನು ಟನ್ ಗೆ 7 ಸಾವಿರ ಹೆಚ್ಚಳ ಮಾಡಲಾಗಿದೆ. ಈಗಾಗಲೇ ಲೋಕೋಪಯೋಗಿ ಇಲಾಖೆಯಿಂದ ಬಿಟು ಮಿನ್ ಹಾಕಲು ಟೆಂಡರ್ ಕರೆಯಲಾಗಿದೆ. ಈಗಾಗಲೇ ಕೆಲಸ ಪ್ರಾರಂಭ ಮಾಡಲಾಗಿದೆ. ಸಿಮೆಂಟ್ ಬೆಲೆ ಸಹ 50ರಿಂದ 100 ರೂ.ವರೆಗೆ ಹೆಚ್ಚಳವಾಗಿದೆ. ಇದರ ಹಿಂದೆ ದೊಡ್ಡ ಸಿಮೆಂಟ್ ಮಾಫಿಯಾವೇ ಇದೆ. ಇದನ್ನು ಯಾರು ನಿಯಂತ್ರಣ ಮಾಡುತ್ತಿದ್ದಾರೆ ಎಂಬುದು ಎಲ್ಲರಿಗೂ ಗೊತ್ತಿದೆ ಎಂದು ಡಿಕೆಶಿ ಕಿಡಿಕಾರಿದರು.

### ಜನಜೀವನ ಕಸಿದ ಕೇಂದ್ರ: ಸುರ್ಜೆವಾಲಾ ಆಕ್ರೋಶ

**ಬೆಂಗಳೂರು:** ಕೇಂದ್ರ ಸರ್ಕಾರ ಏಪ್ರಿಲ್ 1ರಿಂದ ಟೋಲ್, ಔಷಧ ಸೇರಿದಂತೆ ದಿನಬಳಕೆ ವಸ್ತುಗಳ ಬೆಲೆ ಏರಿಕೆ ಮಾಡಿದೆ. ಕೇಂದ್ರದ ಬಿಜೆಪಿ ಸರ್ಕಾರ ಜನರನ್ನು ಲೂಟಿ ಮಾಡಲು ಹೊರಟಿದೆ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೆವಾಲಾ ವಾಗ್ದಾಳಿ ನಡೆಸಿದರು.



ಕೆಪಿಸಿಸಿ ಕಚೇರಿಯಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರ ಬೆಲೆ ಏರಿಕೆ ಮಾಡಿ ಜನರ ಜೀವನ ಕಸಿಯಲಿದೆ. ಏಪ್ರಿಲ್ 1ರಿಂದ ಶೇ 5ರಷ್ಟು ಟೋಲ್ ದರ ಹೆಚ್ಚಳವಾಗಲಿದೆ. ಹೆದ್ದಾರಿ ನಿರ್ಮಾಣಕ್ಕೂ ಮೊದಲೇ ಕೆಲವು ಕಡೆ ಟೋಲ್ ಸಂಗ್ರಹಿಸಲಾಗುತ್ತಿದೆ. ಬೆಂಗಳೂರು– ಮೈಸೂರು ಹೆದ್ದಾರಿಯಲ್ಲಿ 900 ಕೋಟಿ ಟೋಲ್ ಸಂಗ್ರಹಿಸಲಾಗಿದೆ ಎಂದರು.

ಅಲ್ಲದೆ, ಏಪ್ರಿಲ್ 1ರಿಂದ 900 ಅಗತ್ಯ ಔಷಧಿಗಳ ಬೆಲೆ ಶೇ 12.12ರಷ್ಟು ಹೆಚ್ಚಾಗುತ್ತಿದೆ. ಇದು ರೋಗಿಗಳಿಗೆ ನೋವು ನೀಡುವ ಮತ್ತೊಂದು ಬೆಲೆ ಏರಿಕೆ. ಬಿಪಿ ಶುಗರ್ ಮಾತ್ರೆಗಳ ದರವೂ ಏರಿಕೆ ಆಗುತ್ತಿದೆ. ಡಯಾಬಿಟಿಸ್, ಬಿಪಿಗೆ ಬೇಕಾದ 31 ಹೊಸ ಔಷಧಗಳ ಬೆಲೆ ಏರಿಕೆ ಆಗುತ್ತಿದೆ. ದುಃಖದ ವಿಷಯವೆಂದರೆ ಹೃದಯಕ್ಕೆ ಅಳವಡಿಸುವ ಸ್ಟಂಟ್ ಬೆಲೆ ಕೂಡ ಹೆಚ್ಚಾಗುತ್ತಿದೆ ಎಂದು ಟೀಕಿಸಿದರು.

## ಯತ್ನಾಳ್ ಪ್ರಚಾರ ಕಾರ್ಯಕ್ಕೆ ಯಡಿಯೂರಪ್ಪ ಗ್ರೀನ್‌ಸಿಗ್ನಲ್



**ಬೆಂಗಳೂರು:** ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ವೀರಣ್ಣ ಚರಂತಿಮಠ ಪರ ಬಿಜೆಪಿ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಪ್ರಚಾರಕ್ಕೆ ಬರಲಿದ್ದಾರೆ. ಯತ್ನಾಳ್ ಪ್ರಚಾರಕ್ಕೆ ಮಾಜಿ ಸಿಎಂ ಯಡಿಯೂರಪ್ಪ ಗ್ರೀನ್‌ಸಿಗ್ನಲ್ ಕೊಟ್ಟಿದ್ದಾರೆ.

ಬೆಂಗಳೂರಿನಲ್ಲಿ ಮಾತಾಡಿದ ಯಡಿಯೂರಪ್ಪ ಅವರು, ಯಾರೇ ಬಂದರೂ ಪ್ರಚಾರ ನಡೆಸಲು ಅವಕಾಶ ಇದೆ. ಅವರು ಪ್ರಚಾರಕ್ಕೆ ಬರಲಿ, ಸ್ವಾಗತ ಮಾಡುತ್ತೇವೆ ಎಂದರು.

ಈ ವೇಳೆ ರಾಜ್ಯ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಇಡೀ ಸರ್ಕಾರವೇ ಉಪ ಚುನಾವಣೆ ಪ್ರಚಾರದಲ್ಲಿದೆ. ಸ್ವತಃ ಸಿಎಂ ಅವರೇ ನಾಲ್ಕೈದು ದಿನದಿಂದ ಅಲ್ಲಿ ಹೋಗಿ ಕೂತಿದ್ದಾರೆ. ಅದರರ್ಥ ಚುನಾವಣಾ ಸೋಲಿನ ಭಯ ಅವರಿಗೆ ಕಾಡುತ್ತಿದೆ ಎನ್ನುವುದು ಸ್ಪಷ್ಟ ಎಂದು ಹೇಳಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ಸಿದ್ದರಾಮಯ್ಯ ಜನಹಿತ ಮರೆತು ತುಘಲಕ್ ದರ್ಬಾರ್ ನಡೆಸ್ತಿದ್ದಾರೆ. ಅಜೀರ್ಣವಾಗುವಷ್ಟು ಬಹುಮತ ಕಾಂಗ್ರೆಸ್ ಗೆ ಈಗಾಗಲೇ ಇದೆ. ಮತ್ತೊಮ್ಮೆ ಚುನಾವಣೆ ಗೆದ್ದರೆ ಅಧಿಕಾರ ಮದದಿಂದ ಇನ್ನೂ ಹೆಚ್ಚು ಭ್ರಷ್ಟಾಚಾರಕ್ಕೆ ಅವಕಾಶ ಕೊಟ್ಟಂತೆ ಆಗುತ್ತದೆ ಅಂತ ಕಿಡಿಕಾರಿದರು. ಇಂದಿನಿಂದ ನಾನು ಪ್ರಚಾರ ನಡೆಸುತ್ತೇನೆ. ಎರಡೂ ಕ್ಷೇತ್ರಗಳಲ್ಲಿ ನಮ್ಮ ಅಭ್ಯರ್ಥಿಗಳು ದೊಡ್ಡ ಅಂತರದಿಂದ ಗೆಲ್ಲುತ್ತಾರೆ ಎಂದು ಅವರು ಹೇಳಿದರು.

## ಮುಂಗಳಮುಖಿಯರಿಬ್ಬರ ಮೇಲೆ ಯುವಕರಿಂದ ಹಲ್ಲೆ



**ಮೈಸೂರು:** ಖರ್ಚಿಗೆ ಹಣ ನೀಡಿಲ್ಲವೆಂದು ಇಬ್ಬರು ಮಂಗಳಮುಖಿಯರ ಮೇಲೆ ಹಲ್ಲೆ ನಡೆಸಿದ ಯುವಕರು, ಚಾಕುವಿನಿಂದ ಇರಿದು ಕೊಲೆಗೆ ಯತ್ನಿಸಿರುವ ಘಟನೆ ನಗರದಲ್ಲಿ ಬೆಳಕಿಗೆ ಬಂದಿದೆ.

ಸಾತಗಳ್ಳಿ ಸಮೀಪದ ಅಮೃತ ಬಡಾವಣೆಯಲ್ಲಿ ಭಾನುವಾರ ರಾತ್ರಿ ಈ ಘಟನೆ ನಡೆದಿದೆ. ಮಂಗಳಮುಖಿಯರಾದ ಪಾರಿ ಮತ್ತು ಆನಮ್ ಹಲ್ಲೆಗೆ ಒಳಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಾದವರಾಗಿದ್ದಾರೆ. ಅಮೃತ ಬಡಾವಣೆಯ ನಿವಾಸಿಯಾದ ಆನಮ್ ಬಳಿ ಯುವಕರು ಖರ್ಚಿಗೆ ಹಣ ಕೇಳಿದ್ದಾರೆ. ಇದಕ್ಕೆ ಆನಮ್ ನಿರಾಕರಿಸಿದಾಗ, ಯುವಕರು ಗಲಾಟೆ ತೆಗೆದಿದ್ದಾರೆ. ಆಗ ಸ್ನೇಹಿತೆಯಾದ ಪಾರಿಯನ್ನು ಆನಮ್ ಕರೆ ಮಾಡಿ ಕರೆಸಿಕೊಂಡಿದ್ದು, ಪಾರಿ ಸ್ಥಳಕ್ಕೆ ಬಂದು ಯುವಕರನ್ನು ಪ್ರಶ್ನಿಸಿದ್ದಾರೆ. ಇದರಿಂದ ಕೋಪಗೊಂಡ ಯುವಕರು ಇಬ್ಬರ ಮೇಲೂ ಹಲ್ಲೆ ನಡೆಸಿ ಆನಮ್‌ಗೆ ಚಾಕುವಿನಿಂದ ಇರಿದಿದ್ದಾರೆ. ಹಲ್ಲೆಗೆ ಒಳಗಾದ ಇಬ್ಬರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಆನಮ್ ನೀಡಿದ ದೂರಿನ ಮೇರೆಗೆ ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಹಲ್ಲೆ ನಡೆಸಿದ ಯುವಕರ ಬಂಧನಕ್ಕೆ ಶೋಧ ಕಾರ್ಯ ನಡೆಯುತ್ತಿದೆ.

## ಪ್ರಚಾರದಿಂದ ದೂರ ಉಳಿದ ಜಮೀರ್

### ಮುಸ್ಲಿಮರಿಗೆ ದಾವಣಗೆರೆ ಕ್ಷೇತ್ರದ ಟಿಕೆಟ್ ನಿರಾಕರಿಸಿದ್ದಕ್ಕೆ ಮುನಿಸು

**ಬೆಂಗಳೂರು:** ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಮರ್ಥ ಶಾಮನೂರು ಪರ ಪ್ರಚಾರ ಕಾರ್ಯದಲ್ಲಿ ಸಚಿವ ಜಮೀರ್ ಅಹ್ಮದ್ ಪ್ರಚಾರ ನಡೆಸಲು ಇನ್ನೂ ಮುಂದಾಗಿಲ್ಲ. ಜಮೀರ್ ಪ್ರಚಾರದಲ್ಲಿ ಭಾಗವಹಿಸುವ ಸಾಧ್ಯತೆ ಕಡಿಮೆ ಎನ್ನಲಾಗಿದೆ.



ದಾವಣಗೆರೆ ದಕ್ಷಿಣ ಮತ್ತು ಬಾಗಲಕೋಟೆ ವಿಧಾನಸಭಾ ಉಪ ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಮುಸ್ಲಿಂ ಮತಗಳನ್ನು ಗಳಿಸುವ ಪ್ರಮಾಣ ಕಡಿಮೆಯಾಗುವ ಸಾಧ್ಯತೆಯಿದೆ. ದಾವಣಗೆರೆ ದಕ್ಷಿಣದಿಂದ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಪುತ್ರ ಸಮರ್ಥ್ ಶಾಮನೂರು ಕಣದಲ್ಲಿದ್ದಾರೆ. ಕ್ಷೇತ್ರದಲ್ಲಿ ಪ್ರಚಾರಕ್ಕೆ ಜಮೀರ್ ಬಾರದೇ ಇದ್ದರೂ ನಡೆಯುತ್ತದೆ ಎಂದು ಮಲ್ಲಿಕಾರ್ಜುನ್ ಹೇಳಿಕೆ ನೀಡಿದ್ದರು. ಈ ಬಗ್ಗೆ ಸಿದ್ದರಾಮಯ್ಯ ಜತೆ ಮಾತನಾಡಿರುವ ಜಮೀರ್, ನನ್ನ ಸ್ವಾಭಿಮಾನಕ್ಕೆ ಧಕ್ಕೆಯಾಗಿದೆ. ಅಲ್ಲಿಗೆ ಪ್ರಚಾರಕ್ಕೆ ಹೋಗಬೇಕೇ ಎಂದು ಪ್ರಶ್ನಿಸಿದ್ದಾರೆಂದು ತಿಳಿದು ಬಂದಿದೆ.

ಮಲ್ಲಿಕಾರ್ಜುನ ಅವರಿಗೆ ಬೇಡವಾದರೆ ದಾವಣಗೆರೆ ದಕ್ಷಿಣಕ್ಕೆ ಹೋಗುವುದಿಲ್ಲ ಎಂದು ಜಮೀರ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಹೇಳಿದ್ದಾರೆ. ತಮ್ಮ ಸಮುದಾಯದ ಸದಸ್ಯರಿಗೆ ಟಿಕೆಟ್ ನಿರಾಕರಿಸಿದ್ದರಿಂದ

ಪುಟ 2ಕ್ಕೆ

### ಸಚಿವರಿಗೆ ಬೇರೆ ಕಡೆ ಜವಾಬ್ದಾರಿ ಕೊಟ್ಟಿದ್ದಾರೆ

**ಬೆಂಗಳೂರು:** ಸಚಿವ ಜಮೀರ್ ಅಹಮದ್ ಅವರಿಗೆ ಬೇರೆ ಕಡೆ ಜವಾಬ್ದಾರಿ ಕೊಟ್ಟಿದ್ದಾರೆ. ಅದನ್ನು ಮುಗಿಸಿಕೊಂಡು ಪ್ರಚಾರಕ್ಕೆ ಬರುತ್ತಾರೆ ಎಂದು ಡಿಸಿಎಂ ಶಿವಕುಮಾರ್ ತಿಳಿಸಿದ್ದಾರೆ. ದಾವಣಗೆರೆ ದಕ್ಷಿಣದಲ್ಲಿ ಕ್ಷೇತ್ರದಲ್ಲಿ ಸಚಿವ ಜಮೀರ್ ಅಹಮದ್ ಚುನಾವಣಾ ಪ್ರಚಾರದಿಂದ ದೂರ ಉಳಿದಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಅವರು ಪ್ರತಿಕ್ರಿಯೆ ನೀಡಿದರು.

## ಹಾಲಿನ ಬೆಲೆ ಹೆಚ್ಚಳ: ಡಿ.ಕೆ.ಸುರೇಶ್ ಮಾಹಿತಿ


**ಬೆಂಗಳೂರು:** ಮಧ್ಯಪ್ರಾಚ್ಯ ಯುದ್ಧ ಪರಿಣಾಮದಿಂದ ಅಡುಗೆ ಅನಿಲ ಬಳಕೆ ಮೇಲೆ ಕೇಂದ್ರ ಸರ್ಕಾರ ಕಡಿವಾಣ ಹಾಕಿದೆ. ಗ್ಯಾಸ್ ಸಮಸ್ಯೆಯಿಂದ ಸಹಜವಾಗಿ ಹಾಲು ಹಾಗೂ ನಂದಿನಿ ಉತ್ಪನ್ನಗಳ ಬೆಲೆ ಏರಿಕೆ ಮಾಡಬೇಕಾಗಬಹುದು ಎಂದು ಬೆಂಗಳೂರು ಹಾಲು ಉತ್ಪಾದಕರ ಒಕ್ಕೂಟದ ಅಧ್ಯಕ್ಷ ಡಿ.ಕೆ.ಸುರೇಶ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸದ್ಯಕ್ಕೆ ತೈಲ ಸರಬರಾಜಿನಲ್ಲಿ ಸಮಸ್ಯೆಯಿಲ್ಲ. ಆದರೆ ಅಡುಗೆ ಅನಿಲವನ್ನು ಶೇ.55ರಷ್ಟು ಮಾತ್ರ ಬಳಕೆ ಮಾಡಬೇಕು ಎಂಬ ನಿರ್ದೇಶನವಿದೆ. ಶೇಕಡಾ ನೂರರಷ್ಟು ಅಡುಗೆ ಅನಿಲ ಬಳಕೆ ಮಾಡಬೇಕಾದರೆ ಶೇ.35ರಷ್ಟು ಹೆಚ್ಚುವರಿ ಶುಲ್ಕ ಪಾವತಿಸುವಂತೆ ಸೂಚನೆ ನೀಡಲಾಗಿದೆ. ಈ ರೀತಿ ಹೆಚ್ಚುವರಿ ಆರ್ಥಿಕ ಹೊರೆಯಾದಾಗ ಈ ಹೊರೆ ಗ್ರಾಹಕರ ಮೇಲೆ ಬೀಳುತ್ತದೆ ಎಂದು ಹೇಳಿದರು.

ಕೇಂದ್ರ ಸರ್ಕಾರ ಸೂಚ್ಯವಾಗಿ ಅಡುಗೆ ಅನಿಲ ಸಿಲಿಂಡರ್ ದರ ಏರಿಕೆಯ ನಿರ್ದೇಶನ ನೀಡಿದೆ.


ಪುಟ 2ಕ್ಕೆ





## ಸಿಡಿಲು ಬಡಿದು ರೈತ ಸಾವು





**ಬೀದರ್:** ಕೃಷಿ ಕೆಲಸಕ್ಕೆ ಜಮೀನಿಗೆ ಹೋಗಿದ್ದಾಗ ಸಿಡಿಲು ಬಡಿದು ಯುವರೈತ ಸಾವನ್ನಪ್ಪಿದ ಘಟನೆ ಬೀದರ್ ಜಿಲ್ಲೆಯ ಔರಾದ್ ತಾಲೂಕಿನ ಬಾದಲಗಾಂವ ಗ್ರಾಮದಲ್ಲಿ ನಡೆದಿದೆ. ರಾಹುಲ್ ಭಾಸ್ಕರ್ (25) ಸಿಡಿಲಿಗೆ ಬಲಿಯಾದ ರೈತ.


ರಾಹುಲ್ ತಮ್ಮ ಜಮೀನಿಗೆ ತೆರಳಿದ್ದ ವೇಳೆ ಮಳೆ ಆರಂಭವಾಗಿ ಜಮೀನಿನಲ್ಲಿದ್ದ ರಾಹುಲ್‌ಗೆ ಸಿಡಿಲು ಬಡಿದು ದುರಂತ ಸಂಭವಿಸಿದೆ. ಘಟನಾ ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಬೀದರ್, ಔರಾದ್, ಭಾಲ್ಕಿ ಸೇರಿದಂತೆ ಮುಂಜಾನೆ ಹಲವೆಡೆ ಮಳೆಯಾಗಿದೆ.

## ಸಂಗ್ರಹಿಸಿದ್ದ ಪೆಟ್ರೋಲ್‌ಗೆ ಬೆಂಕಿ: ಮಹಿಳೆ ಚಿಂತಾಜನಕ

**ಧಾರವಾಡ:** ಮನೆಯಲ್ಲಿ ಸಂಗ್ರಹ ಮಾಡಿದ್ದ ಪೆಟ್ರೋಲ್ ಕ್ಯಾನ್‌ಗೆ ಬೆಂಕಿ ತಗುಲಿ ಗೃಹಿಣಿ ತೀವ್ರವಾಗಿ ಗಾಯಗೊಂಡ ಘಟನೆ ಧಾರವಾಡ ತಾಲೂಕಿನ ತಡಕೋಡ ಗ್ರಾಮದಲ್ಲಿ ಸೋಮವಾರ ರಾತ್ರಿ ನಡೆದಿದೆ.

ಪೂರ್ಣಿಮಾ ಕಲ್ಲಪ್ಪ ಹಾದಿಮನಿ (32) ತೀವ್ರವಾಗಿ ಗಾಯಗೊಂಡಿದ್ದಾರೆ. ಶೇ.80ರಷ್ಟು ದೇಹ ಸುಟ್ಟಿರುವ ಕಾರಣ ಆಕೆಯ ಸ್ಥಿತಿ ಚಿಂತಾಜನಕವಾಗಿದೆ.

ಪೆಟ್ರೋಲ್ ಅಭಾವ ಆಗಿದೆ ಎಂಬ ವದಂತಿ ಹಬ್ಬಿದ ಹಿನ್ನೆಲೆಯಲ್ಲಿ ಪೆಟ್ರೋಲ್ ಅನ್ನು ಕ್ಯಾನ್‌ನಲ್ಲಿ ಸಂಗ್ರಹಿಸಿ ಮನೆಯ ಫ್ರಿಡ್ಜ್ ಬಳಿ ಇಡಲಾಗಿತ್ತು. ಪೂರ್ಣಿಮಾ ಅಡುಗೆ ಮನೆಯಲ್ಲಿದ್ದಾಗ




ಏಕಾಏಕಿ ಕ್ಯಾನ್‌ಗೆ ಬೆಂಕಿ ಹೊತ್ತಿಕೊಂಡು ಸ್ಫೋಟಗೊಂಡಿದೆ. ಇಡೀ ಮನೆಗೆ ಬೆಂಕಿ ಆವರಿಸಿದೆ. ಅಡುಗೆ ಮನೆಯಲ್ಲಿ ಸಿಲುಕಿದ್ದ ಅತ್ತಿಗೆಯನ್ನು ಮೈದುನ ಯಲ್ಲಪ್ಪ ಕಾಪಾಡಿದ್ದಾರೆ. ಈ ವೇಳೆ ಅವನಿಗೂ ಗಾಯಗಳಾಗಿವೆ. ಆದರೆ

ಪುಟ 2ಕ್ಕೆ

## 2 ದಿನ ಮಳೆ ಸಾಧ್ಯತೆ

**ಬೆಂಗಳೂರು:** ಬೆಂಗಳೂರು, ಕೊಡಗು, ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳು ಸೇರಿದಂತೆ ರಾಜ್ಯದ ಹಲವೆಡೆ ಮುಂದಿನ ಎರಡು ದಿನ ಭಾರೀ ಮಳೆಯಾಗುವ ಸಾಧ್ಯತೆ ಇದೆ.



ರಾಜ್ಯದ ಹಲವು ಜಿಲ್ಲೆಗಳಿಗೆ ರಾಜ್ಯ ಹವಾಮಾನ ಇಲಾಖೆ ಯೆಲ್ಲೋ ಅಲರ್ಟ್ ಘೋಷಿಸಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣವಿದೆ. ಕಲಬುರಗಿ, ವಿಜಯಪುರ ಮತ್ತು ಧಾರವಾಡ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ದಕ್ಷಿಣ ಜಿಲ್ಲೆಗಳಲ್ಲಿ ಗುಡುಗು ಸಹಿತ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಉತ್ತರ ಒಳನಾಡಿನ ಕೆಲವು ಪ್ರದೇಶಗಳಲ್ಲಿ ಅಲ್ಲಲ್ಲಿ ಮಳೆಯ ಮುನ್ಸೂಚನೆ ಇದೆ. ಗಾಳಿಯ ಪ್ರಭಾವ ಹೆಚ್ಚಿದ್ದರೆ ಉಳಿದ ಭಾಗಗಳಲ್ಲಿಯೂ ಅಲ್ಲಲ್ಲಿ ತುಂತುರು ಮಳೆಯ ಸಾಧ್ಯತೆಗಳಿವೆ ಎಂದು ತಿಳಿಸಿದೆ.

## ಇಂದಿನಿಂದ 'ದುನಿಯಾ ದುಬಾರಿ': ಬೆಲೆ ಏರಿಕೆ ಬಿಸಿ

### ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಜನರ ಮೇಲೆ ತೆರಿಗೆ ಹೆಚ್ಚಳದ ಬರೆ

**ಬೆಂಗಳೂರು:** ಹೊಸ ಆರ್ಥಿಕ ವರ್ಷ ಏ.1ರಿಂದ ಅನ್ವಯ ಆಗುವಂತೆ ಜನರ ಮೇಲೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತೆರಿಗೆಯ ಹೊರೆ ಏರಲು ಸ್ಪರ್ಧೆಯಲ್ಲಿ ಮುಂದಾಗಿವೆ. ಹೊಸ ಆರ್ಥಿಕ ವರ್ಷದ ಆರಂಭವಾಗುವ ನಾಳೆಯಿಂದ ಜನ ಜೀವನವೂ ದುಬಾರಿಯಾಗಲಿದೆ.

ಹೊಸ ಆರ್ಥಿಕ ವರ್ಷದ ಮೊದಲ

ಪುಟ 2ಕ್ಕೆ

### ಕೇಂದ್ರದಿಂದ ಬದಲಾವಣೆ ಏನು?

***ಹೊಸ ಆದಾಯ ತೆರಿಗೆ ಕಾಯಿದೆ ಜಾರಿ: ಬ್ಯಾಂಕ್‌ಗಳಲ್ಲಿ ಹಣಕಾಸು ವರ್ಷದಲ್ಲಿ 10 ಲಕ್ಷ ರೂ. ಒಳಗಿನ ಹಣ ಠೇವಣಿಗೆ ಪ್ಯಾನ್ ನಮೂದಿಸುವ ಅಗತ್ಯವಿಲ್ಲ.**

- ಹೋಟೆಲ್, ರೆಸ್ಟೋರೆಂಟ್ ಸೇರಿ ಬಿಲ್ ಪಾವತಿ 1 ಲಕ್ಷ ರೂ. ದಾಟಿದರೆ ಪ್ಯಾನ್ ಕಡ್ಡಾಯ
- ರೈಲು ಹೊರಡುವ 8 ಗಂಟೆ ಮೊದಲು ಮುಂಗಡ ಟಿಕೆಟ್ ರದ್ದುಪಡಿಸಿದರೆ ರೀಫಂಡ್ ಸಿಗುವುದಿಲ್ಲ
- ಉದ್ಯೋಗಿಯ ಮೂಲ ವೇತನ ಒಟ್ಟು

ಪುಟ 2ಕ್ಕೆ


### ಹೆದ್ದಾರಿ ಟೋಲ್ ಹೆಚ್ಚಳ

**ನವದೆಹಲಿ:** ರಾಷ್ಟ್ರೀಯ ಹೆದ್ದಾರಿಗಳಲ್ಲಿ ಸಂಚರಿಸುವ ವಾಹನ ಸವಾರರಿಗೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ದರ ಏರಿಕೆ ಶಾಕ್ ಕೊಟ್ಟಿದೆ. 2026–27ನೇ ಹಣಕಾಸು ವರ್ಷದಿಂದ ಅನ್ವಯವಾಗುವಂತೆ ಫಾಸ್ಟ್ಯಾಗ್ ವಾರ್ಷಿಕ ಪಾಸ್ ದರವನ್ನು ಪರಿಷ್ಕರಿಸಲಾಗಿದೆ. ಏಪ್ರಿಲ್ 1ರಿಂದ ಹೊಸ ದರಗಳು ಜಾರಿಗೆ ಬರಲಿವೆ. ಖಾಸಗಿ ಕಾರುಗಳು, ಜೀಪ್‌ಗಳು ಮತ್ತು ವ್ಯಾನ್‌ಗಳ ಮಾಲೀಕರು ವಾರ್ಷಿಕ ಪಾಸ್‌ಗಾಗಿ ಏಪ್ರಿಲ್ 1ರಿಂದ 3,075 ರೂ. ಪಾವತಿಸಬೇಕಾಗುತ್ತದೆ. ಈ ಹಿಂದೆ ಈ ಪಾಸ್‌ನ ದರ 3,000 ರೂ. ಇತ್ತು. ಈಗಿನ ದರದಲ್ಲಿ 75 ರೂ. ಹೆಚ್ಚಳ ಮಾಡಲಾಗಿದೆ. ಫಾಸ್ಟ್ಯಾಗ್ ವಾರ್ಷಿಕ ಪಾಸ್ ಪಡೆದ 1 ವರ್ಷ ಅಥವಾ 200 ಟ್ರಿಪ್‌ಗಳಿಗೆ ಅನ್ವಯಿಸುತ್ತದೆ. ಒಂದು ಖಾಸಗಿ ಬಳಕೆಯ ಕಾರು, ಜೀಪ್ ಅಥವಾ ವ್ಯಾನ್ ಹೊಂದಿರುವವರು ಈ ಪಾಸ್ ಪಡೆಯಬಹುದು.

## ಹಾರ್ಮುಜ್ ದಾಟಲು ಸುಂಕ ಸಂಗ್ರಹ

### ಅಮೆರಿಕ–ಇಸ್ರೇಲ್ ಸೇರಿ ಶತ್ರು ದೇಶದ ಹಡಗುಗಳಿಗೆ ಇರಾನ್ ನಿಷೇಧ

**ಟೆಹ್ರಾನ್:** ಹಾರ್ಮುಜ್ ಜಲಸಂಧಿಯಲ್ಲಿ ಸುಂಕ ಸಂಗ್ರಹಿಸುವ ಹೊಸ ಯೋಜನೆಗೆ ಇರಾನ್ ಸಂಸತ್ತಿನ ಭದ್ರತಾ ಸಮಿತಿ ಅನುಮೋದನೆ ನೀಡಿದೆ. ಕೆಲವು ದೇಶಗಳ ಹಡುಗಳಿಂದ ಸುಂಕ ಸಂಗ್ರಹಿಸಲಾಗುತ್ತದೆ. ಆದರೆ, ಶತ್ರು ದೇಶಗಳ ಹಡಗುಗಳ ಮೇಲೆ ನಿರ್ಬಂಧವನ್ನು ಹೇರಲು ಇರಾನ್ ಸರ್ಕಾರ ಮುಂದಾಗಿದೆ.



ಈ ಯೋಜನೆಯು ಹಾರ್ಮುಜ್ ಜಲಸಂಧಿಯಲ್ಲಿ ಸಾಗುವ ಹಡಗುಗಳಿಗೆ ರಿಯಾಲ್ ಆಧಾರಿತ ಟೋಲ್ ವ್ಯವಸ್ಥೆಯನ್ನ ಪರಿಚಯಿಸುತ್ತದೆ. ಇದು ಕಡಲ ಭದ್ರತೆ, ಹಡಗುಗಳ ಸುರಕ್ಷತೆ, ಪರಿಸರ ಸಂರಕ್ಷಣೆ ಮತ್ತು ಜಲಸಂಧಿಯ ಮೂಲಕ ಹಡಗುಗಳ ಸಾಗಣೆಯನ್ನ ನಿಯಂತ್ರಿಸುವ ಹಣಕಾಸು ಕಾರ್ಯವಿಧಾನವಾಗಿದೆ. ಇದು ಇರಾನ್‌ನ ಮಿತ್ರರಾಷ್ಟ್ರಗಳಿಗಷ್ಟೇ ಅನ್ವಯವಾಗಲಿದೆ.



ಹಡಗುಗಳಿಂದ ಸುಂಕ ಸಂಗ್ರಹ ಯೋಜನೆಯಿಂದ ಅಮೆರಿಕ ಮತ್ತು ಇಸ್ರೇಲಿ ಹಡಗುಗಳನ್ನ ಹೊರಗಿಡಲಾಗಿದೆ. ಏಕೆಂದರೆ ಇರಾನ್ ಶತ್ರು ರಾಷ್ಟ್ರಗಳಿಗೆ ಹಾರ್ಮುಜ್ ಜಲಸಂಧಿಯನ್ನ ನಿಷೇಧಿಸಲಾಗಿದೆ. ಇರಾನ್‌ನ ಈ ಯೋಜನೆಯು ಹಾರ್ಮುಜ್ ಜಲಸಂಧಿ ನಿರ್ವಹಣೆಗೆ ಕಾನೂನು ಚೌಕಟ್ಟು ರೂಪಿಸುವ ಜೊತೆಗೆ ಅದರ

ಪುಟ 2ಕ್ಕೆ

### ಇಸ್ಫಹಾನ್‌ನಲ್ಲಿ ಸರಣಿ ಸ್ಫೋಟ

ಇರಾನ್ ವಿರುದ್ಧ ಅಮೆರಿಕ–ಇಸ್ರೇಲ್ ಪ್ರತೀಕಾರದ ದಾಳಿ ಮುಂದುವರಿಸಿವೆ. ಇರಾನ್‌ನ ಇಸ್ಫಹಾನ್ ನಗರದಲ್ಲಿರುವ ಮಿಲಿಟರಿ ಕೇಂದ್ರದ ಮೇಲೆ ಅಮೆರಿಕ–ಇಸ್ರೇಲ್ ಜಂಟಿ ದಾಳಿ ನಡೆಸಿದೆ. ಸುಮಾರು 907 ಕೆಜಿ ಬಂಕರ್ ಬಸ್ಟರ್ ಬಾಂಬ್‌ಗಳಿಂದ ದಾಳಿ ನಡೆಸಿದೆ. ಈ ಸ್ಫೋಟದ ವೀಡಿಯೊ ಅನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಂಚಿಕೊಂಡಿದ್ದಾರೆ.

ಇಸ್ಫಹಾನ್ ನಗರದಲ್ಲಿ ಮಂಗಳವಾರ ಮುಂಜಾನೆ ಈ ಸ್ಫೋಟ ಸಂಭವಿಸಿದೆ. ದೃಶ್ಯಾವಳಿಗಳಲ್ಲಿ ಸರಣಿ ಸ್ಫೋಟ ಆಗಿರುವುದು ಸೆರೆಯಾಗಿದೆ. ಮುಗಿಲೆತ್ತರಕ್ಕೆ ಚಿಮ್ಮುವ ಬೆಂಕಿಯಿಂದಲೇ ದಾಳಿ ತೀವ್ರತೆ ಗೊತ್ತಾಗುತ್ತೆ. ಬದ್ರ್ ಮಿಲಿಟರಿ ವಾಯು

## ಸ್ವಚ್ಛ ನಗರಿಗೆ ನಿಮ್ಮ ಸಹಕಾರ ಇರಲಿ: ಶೇಕ್ ತನ್ವೀರ್ ಆಸೀಫ್




ಮೈಸೂರು: ಮೈಸೂರು ನಗರ ಸ್ವಚ್ಛತೆಯಲ್ಲಿ ನಂಬರ್ ಒನ್ ಆಗಲೂ ಎಲ್ಲಾ ಹೋಟೆಲ್ ಮಾಲೀಕರ ಸಹಕಾರ, ಸಹಭಾಗಿತ್ವ ಮುಖ್ಯ ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಕ್ ತನ್ವೀರ್ ಆಸೀಫ್ ಹೇಳಿದರು.

ನಗರದ ಪ್ರೆಸಿಡೆಂಡ್ ಹೋಟೆಲ್ ನಲ್ಲಿ ಹೋಟೆಲ್ ಮಾಲೀಕರ ಸಂಘ ಮತ್ತು ಹೋಟೆಲ್ ಮಾಲೀಕರ ಸಂಘದ ಧರ್ಮದತ್ತಿ ಸಹಯೋಗದಲ್ಲಿ ಆಯೋಜಿಸಿದ್ದ ಸದಸ್ಯರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಸ್ವಚ್ಛ ನಗರಿಯಲ್ಲಿ ಮೈಸೂರು ನಂಬರ್ ಒನ್ ಆಗುವ ದಿಸೆಯಲ್ಲಿ ನಡೆಯುತ್ತಿರುವ ಸ್ವಚ್ಛ ಸರ್ವೇಕ್ಷಣೆಯಲ್ಲಿ ಹೋಟೆಲ್ ಮಾಲೀಕರು ಭಾಗವಹಿಸಬೇಕು. ಜತೆಗೆ ನಿಮ್ಮ ಹೋಟೆಲ್ ಗೆ ಬರುವ ಗ್ರಾಹಕರಿಗೂ ಸಹ ಇದರಲ್ಲಿ ಪಾಲ್ಗೊಳ್ಳುವಂತೆ ಪ್ರೇರೆಪಿಸಬೇಕಿದೆ. ಈ ದಿಸೆಯಲ್ಲಿ ಹೋಟೆಲ್ ಉದ್ಯಮಕ್ಕೆ ಪಾಲಿಕೆಯಿಂದ ಯಾವುದೇ ವಿಧವಾದ ಸಹಕಾರ ನೀಡಲು ಪಾಲಿಕೆ ಸಿದ್ದವಿದೆ ಎಂದು ಹೇಳಿದರು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ ಮಾತನಾಡಿ, ಈಗಾಗಲೇ ಪಾದಚಾರಿ ಮಾರ್ಗ ಒತ್ತುವರಿ ತೆರವು ಕಾರ್ಯ ನಡೆಯುತ್ತಿರುವುದು ಸ್ವಾಗತಾರ್ಹ. ಅಂತೆಯೇ ಅನಧಿಕೃತ ರಸ್ತೆ ಬದಿ ವ್ಯಾಪಾರಿಗಳ ತೆರವು ಕಾರ್ಯ ಆಗಬೇಕಿದೆ. ಜತೆಗೆ ಈಗಾಗಲೇ ನಗರಕ್ಕೆ ಮನೆ ಮನೆಗೆ ಅನಿಲ ವಿತರಣೆ ಪೈಪ್ ಲೈನ್ ವ್ಯವಸ್ಥೆ ಬಂದಿದೆ.ಅದನ್ನು ಇಡೀ ನಗರಕ್ಕೂ ವಿಸ್ತರಿಸುವ ಕೆಲಸ ಆಗಬೇಕಿದೆ. ಈ ದಿಸೆಯಲ್ಲಿ ಪಾಲಿಕೆ ಅನುಮೋದನೆ ನೀಡಲಿ ಎಂದು ಹೇಳಿದರು.

ಸೇಫ್ ವಿಲ್ಸ್ ಪ್ರಶಾಂತ್ ಮಾತನಾಡಿ, ಟ್ರಾವಲ್‌ಮಾರ್ಟ್ 2026 ಈ ಬಾರಿ ಆಯೋಜಿಸಲಾಗಿದೆ. ಇದನ್ನು ಯಶಸ್ವಿಗೊಳಿಸುವ ಮೂಲಕ ಸಾಂಸ್ಕೃತಿಕ ಸೌಂದರ್ಯದೊಂದಿಗೆ ಮೈಸೂರಿನ ಪ್ರವಾಸೋದ್ಯಮ ಅಭಿವೃದ್ಧಿಗೆ ಇಂತಹ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಹೇಳಿದರು. ರಾಜ್ಯ ಹೋಟೆಲ್ ಮಾಲೀಕರ ಪತ್ತಿನ ದರ್ಮಧತ್ತಿ ಅಧ್ಯಕ್ಷ ರವಿಶಾಸ್ತ್ರಿ, ಉಪಾಧ್ಯಕ್ಷ ಸುರೇಶ್, ಕಾರ್ಯದರ್ಶಿ ಸುಬ್ರಹ್ಮಣ್ಯ ತಂತ್ರಿ,

ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ ಎ.ಆರ್. ರವೀಂದ್ರ ಭಟ್, ಥೀಕ್ ಗ್ಯಾಸ್ ನ ವಲಯ ಮುಖ್ಯಸ್ಥ ಬ್ರಿಜೇಶ್ ಸಿಂಗ್, ಮೈಸೂರು ಸಂಘ ಸಂಸ್ಥೆಗಳ ಒಕ್ಕೂಟದ ಅಧ್ಯಕ್ಷ ಪ್ರಶಾಂತ್ ಇನ್ನಿತರರು ಉಪಸ್ಥಿತರಿದ್ದರು.

### 240 ಕಿ.ಮೀ. ವ್ಯಾಪ್ತಿ ಪಿಎನ್ ಜಿ ಪೈಪ್ ಲೈನ್ ಗ್ಯಾಸ್ ಸಂಪರ್ಕ

ಹೆಬ್ಬಾಳ್, ಕೂರ್ಗಳ್ಳಿ, ದಟ್ಟಗಳ್ಳಿ, ರಾಮಕೃಷ್ಣ ವೃತ್ತ ಸೇರಿ ನಗರದಲ್ಲಿ 240 ಕಿ.ಮೀ. ವ್ಯಾಪ್ತಿ ಪಿಎನ್ ಜಿ ಪೈಪ್ ಲೈನ್ ಗ್ಯಾಸ್ ಸಂಪರ್ಕ 5ಸಾವಿರ ಮನೆಗಳಿಗೆ, 100 ಮಂದಿ ಹೋಟೆಲ್ ಮಾಲೀಕರು ನೊಂದಣಿಯಾಗಿ 22 ಹೋಟೆಲ್ ಹಾಗೂ 42 ಕೈಗಾರಿಕೆಗಳು ಪೈಪ್ ಲೈನ್ ಮೂಲಕ ಕಾರ್ಯನಿರ್ವಹಿಸುತ್ತಿವೆ ಎಂದು ಪಿಎನ್ ಜಿ ಗ್ಯಾಸ್ ಕಂಪನಿ ಪ್ರೊಜೆಕ್ಸರ್ ಮ್ಯಾನೇಜರ್ ಶಂಭುಲಿಂಗ ತಿಳಿಸಿದರು.

**ಆನ್ ಲೈನ್ ನಲ್ಲಿ ವಾಣಿಜ್ಯ ಅನಿಲವನ್ನು ನೊಂದಾಯಿಸಿದರೆ ಮಾತ್ರವೇ ನಿಮಗೆ ಸಕಾಲಕ್ಕೆ ಅನಿಲ ದೊರೆಯಲಿದೆ. ಪಿ.ಎನ್.ಜಿ ಪೈಪ್ ಲೈನ್ ಸಂಪರ್ಕ ಯಾವುದೇ ಕಾಲಕ್ಕೆ ಬರಲಿ, ನೀವೂ ನೊಂದಣಿ ಮಾಡಿಕೊಳ್ಳಿ. ಆಗ ಕಾಳಸಂತೆಯಲ್ಲಿ ಅನಿಲ ಮಾರಾಟ ತಡೆಗಟ್ಟಲು ಎಲ್ಲರೂ ಸಹಕಾರ ನೀಡಿ.**

**ನಾರಾಯಣಗೌಡ** ಅಧ್ಯಕ್ಷ, ಹೋಟೆಲ್ ಮಾಲೀಕರ

ಮೊದಲ ಪುಟದಿಂದ

### 'ಸೌದೆ ಒಲೆ ಭಾಗ್ಯ' ಯೋಜನೆ ಜಾರಿ!

ಕಮರ್ಷಿಯಲ್ ಗ್ಯಾಸ್ ಬೆಲೆ ಹೆಚ್ಚಾ ಗಿದೆ. ಶೇ.34ರಷ್ಟು ಪೋಸ್ಟಲ್ ಹಾಗೂ ಪಾರ್ಸಲ್ ಚಾರ್ಜ್ ಹೆಚ್ಚಳ ಮಾಡಿ ದ್ದಾರೆ ಎಂದು ಆರೋ ಪಿಸಿದರು.

ಮೋದಿ ಸರ್ಕಾರ ಪ್ರತಿನಿತ್ಯ ಜನರ ಜೋಬಿ ನಿಂದ ಪಿಕ್ ಪಾಕೆಟ್ ಮಾಡು ತ್ತಿದೆ. ಬೆಂಗಳೂರು–ಮೈಸೂರು ಹೆದ್ದಾರಿಯಲ್ಲಿ ಕೇಂದ್ರ ಸರ್ಕಾರ 900 ಕೋಟಿ ವಸೂಲಿ ಮಾಡಿದೆ. ಕೇಂದ್ರ ಸರ್ಕಾರ ಅದೇ ಹಣ ನಮಗೆ ಕೊಟ್ಟರೆ ಗ್ರಾಮೀಣ ಭಾಗದ ರಸ್ತೆಗಳನ್ನು ಅಭಿವೃದ್ಧಿ ಮಾಡಬಹುದು. ಅಚ್ಚೇದಿನ ಏನಾಯಿತು. ಹೀಗೆ ಮುಂದುವರೆದರೆ ಜನಸಮಾನ್ಯರು ಹೇಗೆ ಬದುಕಬೇಕು. ಬೆಲೆ ಏರಿಕೆಯಿಂದ ತತ್ತರಿಸುತ್ತಿರುವ ಜನರಿಗೆ ಕೇಂದ್ರ ಸರ್ಕಾರ ನೆರವಾಗಬೇಕು ಎಂದು ಆಗ್ರಹಿಸಿದರು.

### ಇಸ್ಪಹಾನ್‌ನಲ್ಲಿ ಸರಣಿ ಸ್ಫೋಟ

ನೆಲೆಯಾಗಿರುವ ಇರಾನ್ ನಗರವಾದ ಇಸ್ಫಹಾನ್‌ನಲ್ಲಿರುವ ಪ್ರಮುಖ ಶಸ್ತಾಸ್ತ್ರ ಸಂಗ್ರಹಗಾರದ ಮೇಲೆ ದಾಳಿಯಾಗಿದೆ. ಇತ್ತ ಇಸ್ರೇಲ್‌ನ ಹೈಫಾದಲ್ಲಿರುವ ತೈಲ ಸಂಸ್ಕರಣಾಗಾರವನ್ನ ಗುರಿಯಾಗಿಸಿಕೊಂಡು ಇರಾನ್ ದಾಳಿ ನಡೆಸಿದೆ. ದಾಳಿಯಿಂದ ಸಂಸ್ಕರಣಾಗಾರಕ್ಕೆ ಬೆಂಕಿ ಹೊತ್ತಿಕೊಂಡಿತು ಮತ್ತು ಸಂಸ್ಕರಣಾಗಾರದಿಂದ ಕಪ್ಪು ಹೊಗೆ ಮುಗಿಲೆತ್ತರಕ್ಕೆ ಆವರಿಸಿದೆ.

### ಕೇಂದ್ರದಿಂದ ಬದಲಾವಣೆ ಏನು?

- **ವೇತನದಲ್ಲಿ (ಸಿಟಿಸಿ) ಕನಿಷ್ಠ ಶೇ.50ರಷ್ಟು ಆಗಿರಬೇಕು ಎಂಬ ನಿಯಮದೊಂದಿಗೆ ಹೊಸ ಕಾರ್ಮಿಕ ಸಂಹಿತೆ ಜಾರಿ.**
- **ಟೋಲ್‌ಗಳಲ್ಲಿ ನಗದು ಪಾವತಿ ಸಂಪೂರ್ಣ ಸ್ಥಗಿತ**

### ಪ್ರಚಾರದಿಂದ ದೂರ ಉಳಿದ ಜಮೀರ್

ಕಾಂಗ್ರೆಸ್ ಅಭ್ಯರ್ಥಿಯನ್ನು ಸೋಲಿಸುವಂತೆ ಮುಸ್ಲಿಂ ಧಾರ್ಮಿಕ ನಾಯಕರು ಮುದಾಯದ ಸದಸ್ಯರಿಗೆ ತಿಳಿಸಿದ್ದಾರೆ. ಹೀಗಾಗಿ ಧಾರ್ಮಿಕ ಮುಖಂಡರ ಕೋಪಕ್ಕೆ ಹೆದರಿ ಜಮೀರ್ ದಾವ ಣಗೆರೆ ಕ್ಷೇತ್ರ ಪ್ರಚಾರ ನಿರಾಕರಿಸಿದ್ದಾರೆ

ಎನ್ನಲಾಗಿದೆ. ಜಮೀರ್ ಸದ್ಯ ಕೇರಳ ವಿಧಾನಸಭಾ ಚುನಾವಣೆಯಲ್ಲಿ ಪ್ರಚಾರದಲ್ಲಿ ನಿರತರಾಗಿದ್ದಾರೆ. ಮುಸ್ಲಿಂ ಜನಸಂಖ್ಯೆ ಹೆಚ್ಚಿರುವ 33 ಕ್ಷೇತ್ರಗಳ ಜವಾಬ್ದಾರಿಯನ್ನು ಜಮೀರ್ ಅವರಿಗೆ ವಹಿಸಲಾಗಿದೆ.

ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ ಕ್ಷೇತ್ರಗಳಿಗೆ ಸಮುದಾಯದ ಸದಸ್ಯರಿಗೆ ಕಾಂಗ್ರೆಸ್ ಟಿಕೆಟ್ ನೀಡುವಂತೆ ಜಮೀರ್ ಒತ್ತಾಯಿಸಿದ್ದರು. ಕಾಂಗ್ರೆಸ್ ನಾಯಕ ಸಾದಿಕ್ ಪೈಲ್ವಾನ್ ಸ್ವತಂತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿದ್ದರು. ಆದರೆ ಶಿವಾಜಿನಗರ ಶಾಸಕ ರಿಜ್ವಾನ್ ಅರ್ಷದ್ ಮತ್ತು ಪರಿಷತ್ತಿನ ಮುಖ್ಯ ಸಚೇತಕ ಎಂಎಲ್‌ಸಿ ಸಲೀಂ ಅಹ್ಮದ್ ಸೇರಿ ಸಾದಿಕ್ ಅವರ ಮನವೊಲಿಸುವಲ್ಲಿ ಯಶಸ್ವಿಯಾದರು.

### ಹಾರ್ಮುಜ್ ದಾಟಲು ಸುಂಕ ಸಂಗ್ರಹ

ಮೇಲೆ ಹಿಡಿತ ಸಾಧಿಸಲು ಅನುವು ಮಾಡಿಕೊಡುತ್ತದೆ. ಈ ಯೋಜನೆಗೆ ಒಮನ್ ಕೂಡ ಸಹಕಾರ ನೀಡಿದೆ.

# 21ಕ್ಕೆ ಗುಂಡ್ಲುಪೇಟೆಗೆ ಸಿಎಂ: 600 ಕೋಟಿ ರೂ. ಕಾಮಗಾರಿಗಳಿಗೆ ಚಾಲನೆ

ಗುಂಡ್ಲುಪೇಟೆ: ತಾಲೂಕಿನ ಅಭಿವೃದ್ಧಿಗೆ ಹೊಸ ವೇಗ ನೀಡುವ ಸಲುವಾಗಿ ಸುಮಾರು 600 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿ ಗಳಿಗೆ ಚಾಲನೆ ನೀಡಲು ಮುಖ್ಯಮಂತ್ರಿ ಸಿದ್ದರಾ ಮಯ್ಯ ಅವರು ಏಪ್ರಿಲ್ 21 ರಂದು ಪಟ್ಟಣಕ್ಕೆ ಆಗಮಿಸಲಿದ್ದಾರೆ ಎಂದು ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್ ತಿಳಿಸಿದರು.

ಮುಖ್ಯಮಂತ್ರಿಗಳ ಭೇಟಿಯ ಹಿನ್ನೆಲೆಯಲ್ಲಿ ತಾಲೂಕು ಮಟ್ಟದ ಅಧಿಕಾರಿಗಳೊಂದಿಗೆ ನಡೆಸಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು.

ಕೆರೆಗಳಿಗೆ ನೀರು: 475 ಕೋಟಿ ರೂ. ವೆಚ್ಚದ ತಾಲೂಕಿನ 110 ಕೆರೆಗಳಿಗೆ ನೀರು ತುಂಬಿಸುವ ಯೋಜನೆಗೆ ಚಾಲನೆ. ಶಿಕ್ಷಣ ಮತ್ತು ವಸತಿ: ಬೊಮ್ಮನಹಳ್ಳಿ ಅಂಬೇಡ್ಕರ್ ವಸತಿ ಶಾಲೆ, ಪಟ್ಟಣದ ಬಾಲಕರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ ಹಾಗೂ ವಾಲ್ಮೀಕಿ ಭವನ ಉದ್ಘಾಟನೆ.

ಕೃಷಿ ಮತ್ತು ಆರೋಗ್ಯ: ಬೇಗೂರು ಎಪಿಎಂಸಿ ಹತ್ತಿ ಮಾರು ಕಟ್ಟೆ ಹಾಗೂ ತೆರಕಣಾಂಬಿ ಆಸ್ಪತ್ರೆಯ ನೂತನ ಕಟ್ಟಡಗಳ ಉದ್ಘಾ ಟನೆ. ಈ ಸಭೆಯಲ್ಲಿ ತಹಶೀಲ್ದಾರ್ ಎಂ.ಎಸ್. ತನ್ಮಯ್, ತಾ.ಪಂ. ಇಒ ಷಣ್ಮುಗಂ, ಪುರಸಭೆ ಮುಖ್ಯಾಧಿಕಾರಿ ಎಸ್. ಶರವಣ ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಶಶಿಧರ್. ತೋಟಗಾರಿಕೆ ಇಲಾಖೆಯ ಭಾಸ್ಕರ್ ಟಿ ಎಚ್ ಓ ಡಾ ಅಲೀಂ ಪಾಷ. ಸಮಾಜ ಕಲ್ಯಾಣ ಇಲಾಖೆಯ ಮೋಹನ್ ಕುಮಾರ್ ಪಿಡಬ್ಲ್ಯೂಡಿ ಇಲಾಖೆಯ ರವಿಕು ಮಾರ್ ಹಾಗೂ ವಿವಿಧ ಇಲಾಖೆಯ ತಾಲೂಕು ಮಟ್ಟದ ಅಧಿಕಾರಿಗಳು ಇದ್ದರು.

- **ಶಾಸಕ ಹೆಚ್. ಎಂ. ಗಣೇಶ್ ಪ್ರಸಾದ್ ನೇತೃತ್ವದಲ್ಲಿ ಅಧಿಕಾರಿಗಳ ಸಭೆ**
- **ಬೃಹತ್ ಕಾರ್ಯಕ್ರಮಕ್ಕೆ ಸಿದ್ಧತೆ**



### ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ:

ಪುರಸಭೆ ವತಿಯಿಂದ ಪಟ್ಟಣದ ಸ್ವಚ್ಛತೆಗೆ ಆದ್ಯತೆ ನೀಡಬೇಕು, ರಸ್ತೆಗಳಲ್ಲಿನ ಧೂಳು ತೆರವುಗೊಳಿ ಸಬೇಕು ಹಾಗೂ ಸುಸಜ್ಜಿತ ಹೆಲಿಪ್ಯಾಡ್ ನಿರ್ಮಾ ಣಕ್ಕೆ ಕ್ರಮವಹಿಸಬೇಕು ಎಂದು ತಿಳಿಸಿದರು. ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳೊಂದಿಗೆ ಅಂತಿಮ ಸುತ್ತಿನ ಸಭೆ ನಡೆಸಿ ಸಿದ್ಧತೆಗಳನ್ನು ಪೂರ್ಣಗೊಳಿಸಲಾಗುವುದು ಎಂದು ಹೇಳಿದರು.

### ಅದ್ದೂರಿ ವೇದಿಕೆ ಕಾರ್ಯಕ್ರಮ

ಮೂರು ವರ್ಷಗಳ ನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸೇರಿದಂತೆ ಹಲವು ಸಚಿವರು ತಾಲೂಕಿಗೆ ಆಗಮಿಸುತ್ತಿದ್ದಾರೆ. ಪಟ್ಟಣದ ಡಿ. ದೇವರಾಜ ಅರಸು ಕ್ರೀಡಾಂಗಣದಲ್ಲಿ ಬೃಹತ್ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ದೊಡ್ಡಹುಂಡಿ ಭೋಗಪ್ಪ ಪ್ರೌಢಶಾಲೆಯ ಆವರಣದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡುವಂತೆ ಶಾಸಕರು ಅಧಿಕಾರಿಗಳಿಗೆ ಸೂಚಿಸಿದರು.

# ಲೇಔಟ್‌ಗೆ 2 ಕೋಟಿ

## ಉಳಿದ ಲೇಔಟ್‌ಗಳ ಅಭಿವೃದ್ಧಿಗೂ ಶಾಸಕರ ಭರವಸೆ

ರಾಮನಗರ: ನಗರದ ಅಭಿವೃದ್ಧಿಗೆಂದು ಬಿಡುಗಡೆಯಾಗಿರುವ 100 ಕೋಟಿ ರೂ ಅನುದಾನದ ಕಾಮಗಾರಿಗಳ ಪೈಕಿ ಕೆಲವು ಕಾಮಗಾರಿಗಳು ತಮಗೆ ತೃಪ್ತಿ ತಂದಿಲ್ಲ ಎಂದು ಶಾಸಕ ಇಕ್ಬಾಲ್ ಹುಸೇನ್ ಅಸಮಾಧಾನ ವ್ಯಕ್ತಪಡಿಸಿದರು. ಆಗಿರುವ ಲೋಪಗಳನ್ನು ಸರಿಪಡಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ತಿಳಿಸಿದರು.

ನಗರದ ಬಿಳುಗುಂಬ ರಸ್ತೆಯಲ್ಲಿರುವ ಚಾಮುಂಡಿಪುರ ಬಳಿಯ ಸಂಜೀವಿನಿ ಬಡಾವಣೆಯಲ್ಲಿ 2 ಕೋಟಿ ರೂ ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಿದ ವೇಳೆ ಅವರು ಮಾತನಾಡಿದರು. 100 ಕೋಟಿ ಅನುದಾನದಲ್ಲಿ ಸೀರಹಳ್ಳಕ್ಕೆ ಕಾಂಕ್ರಿಟ್ ತಡೆಗೋಡೆ ನಿರ್ಮಿಸಲಾಗಿದೆ. ಮಳೆಗಾಲದಲ್ಲಿ ಸೀರಹಳ್ಳದಲ್ಲಿ ನೀರು ಉಕ್ಕಿ ಹರಿದು ಅಕ್ಕಪಕ್ಕದ ಮನೆಗಳಿಗೆ ಸಮಸ್ಯೆಯಾಗುತ್ತಿತ್ತು. ಈಗ ಈ ಸಮಸ್ಯ ನಿವಾರಣೆಯಾಗಿದೆ ಎಂದರು.

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ. ಚೇತನ್‌ಕುಮಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ.ಎಚ್. ರಾಜು, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸತೀಶ್, ಬಿಳಗುಂಬ ಪಿಡಿಓ ಮಹೇಶ್, ಗ್ರಾಪಂ ಮಾಜಿ ಅಧ್ಯಕ್ಷ ನವೀನ್ ಮುಖಂಡರಾದ ಗುರುಪ್ರಸಾದ್, ಶ್ರೀನಿವಾಸ್, ರವಿ, ಕಂಚೇಗೌಡ, ಸುನಿಲ್, ಶಿವಲಿಂಗಯ್ಯ, ಬಾಲು, ವೆಂಕಟಸ್ವಾಮಿ ಮುಂತಾದವರು ಹಾಜರಿದ್ದರು.



### ಲೇಔಟ್‌ಗಳಿಗೆ ಕಾಯಕಲ್ಪದ ಭರವಸೆ

**ಸಂಜೀವಿನಿ ಲೇಔಟ್‌ನಲ್ಲಿ ಮೂಲ ಸೌಕರ್ಯಗಳ ಕೊರತೆ ಗಮನಕ್ಕೆ ಬಂದಿದೆ. ಇಲಿ ರಸ್ತೆಗಳು, ಒಳಚರಂಡಿ ವ್ಯವಸ್ಥೆಗಳು ಆಗಬೇಕಾಗಿದೆ. ಹೀಗಾಗಿ 2 ಕೋಟಿ ರೂ ವಿಶೇಷ ಅನುದಾನ ಬಿಡುಗಡೆಯಾಗಿದೆ ಮುಂದಿನ ದಿನಗಳಲ್ಲಿ ನಗರದ ವಿವಿಧ ಬಡಾವಣೆಗಳ ಅಭಿವೃದ್ಧಿಗೂ ಅನುದಾನ ಬಿಡುಗಡೆಗೆ ಪ್ರಯತ್ನಿಸುವುದಾಗಿ ತಿಳಿಸಿದರು.**

### ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ

**ಬೇಸಿಗೆ ಆರಂಭವಾಗಿದೆ. ಕ್ಷೇತ್ರದ ಜನರಿಗೆ ನೀರಿಗೆ ಸಮಸ್ಯೆಯಾಗದಂತೆ ಎಚ್ಚರ ವಹಿಸಲಾಗಿದೆ ಗ್ರಾಮೀಣ ಭಾಗದ ಕೆಲವು ಪ್ರದೇಶಗಳಲ್ಲಿ ನೀರಿಗೆ ಸಮಸ್ಯೆ ಕಂಡುಬಂದಿದೆ. ಈಗಾಗಲೇ ಅಧಿಕಾರಿಗಳ ಜೊತೆ ಮಾತನಾಡಿ ಸಮಸ್ಯೆಯಾಗದಂತೆ ಎಚ್ಚರವಹಿಸಲು ತಿಳಿಸಲಾಗಿದೆ. ಹಾರೋಹಳ್ಳಿ ಮರಳವಾಡಿ ಹೋಬಳಿಯ ಗ್ರಾಮಗಳಿಗೆ ಒಂದು, ಕೈಲಾಂಚ ಕಸಬಾ ಹೋಬಳಿಯಲ್ಲಿ ಒಂದು ಬೋರ್‌ವೆಲ್ ಇಟ್ಟಿದ್ದು ಅಭಾವ ಇರುವ ಸ್ಥಳಗಳಲ್ಲಿ ಬೋರ್ ಕೊರೆದು ನೀರಿನ ಸಮಸ್ಯೆ ನೀಗಿಸಲಾಗುತ್ತಿದೆ ಎಂದರು.**

### 3ರಿಂದ ಪಾರ್ಟಿ ನಾಟಕ



ಮೈಸೂರು: ನಿರಂತರ ಫೌಂಡೇಷನ್ ಮೈಸೂರು ಸಂಸ್ಥೆಯ ಹಿರಿಯ ರಂಗಕರ್ಮಿ ಪ್ರಸಾದ್ ಕುಂದೂರ್ ಅನುವಾದಿಸಿ ರುವ ಮಹೇಶ್ ಎಲ್ಕುಂಚವಾರ್ ಅವರ ಪಾರ್ಟಿ ನಾಟಕದ ಪ್ರದರ್ಶನ ಏ.3,4, 5ರಂದು ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ನಡೆಯಲಿದೆ ಎಂದು ಹಿರಿಯ ವನ್ಯ ಜೀವಿ ಛಾಯಾಗ್ರಾಹಕ ಲೋಕೇಶ್ ಮೊಸಳೆ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರ ರೊಡನೆ ಮಾತನಾಡಿ, ಅಷ್ಟೂ ದಿನ ರಾತ್ರಿ 7ಕ್ಕೆ ನಾಟಕ ಪ್ರದರ್ಶನಗೊಳ್ಳಲಿದೆ. ಟಿಕೆಟ್ ದರ 100 ರೂ.ಗಳಾಗಿವೆ. ಭಾರತೀಯ ಆಧುನಿಕ ನಾಟಕ ಸಾಹಿತ್ಯದ ಪ್ರಮುಖ ಧ್ವನಿಗಳಲ್ಲಿ ಒಬ್ಬರಾದ ಮಹೇಶ್ ಎಲ್ಕುಂಚವಾರ್ ಮಾನವ ಸಂಬಂಧಗಳ ಒಳ ಹೊರಗಿನ ಸಂಘರ್ಷ, ಅಸ್ತಿತ್ವದ ಪ್ರಶ್ನೆ, ಬೌದ್ಧಿಕ ವರ್ಗದ ನೈತಿಕ ಸಂಕೀರ್ಣತೆಗಳನ್ನು ತಮ್ಮ ಕೃತಿಗ ಳಲ್ಲಿ ವಿಶ್ಲೇಷಿಸಿದ್ದಾರೆ. ಪಾರ್ಟಿ ನಾಟಕ ಸಹಾ ಸಾಮಾಜಿಕ ಕೂಟದ ನೆಲೆಯಲ್ಲಿ ಸಾಗುತ್ತ ಅದರಲ್ಲಿ ಭಾಗವಹಿಸುವ ಲೇಖಕರು, ಕಲಾವಿದರು, ಬೌದಧಿಕ ವ್ಯಕ್ತಿಗಳ ಸಂಭಾಷಣೆ ಮೂಲಕ ಅವರ ಅರ್ಹ, ಸ್ಪರ್ಧೆ, ವೈಫಲ್ಯ ಮತ್ತು ಅಂತರಂಗದ ಸಂಘರ್ಷಗಳನ್ನು ತೆರೆದಿಡುತ್ತದೆ ಎಂದರು. ಅನುವಾದಕ ಪ್ರಸಾದ್ ಕುಂದೂರ್ ಮಾತನಾಡಿ, ಈ ನಾಟಕ ಮನುಷ್ಯನ ಸಂವೇದನೆಗೆ ಏಟು ಕೊಡುತ್ತದೆ. ಮನು ಷ್ಯನ ಮುಖವಾಡ ಬಯಲು ಮಾಡುತ್ತದೆ. ಪ್ರತಿ ಮುಖ ವಾಡದ ಹಿಂದೆ ಅಹನೀಯ ದರ್ಪ, ದೌರ್ಜನ್ಯ ಇರುವು ದನ್ನು ಬಯಲಿಗೆಳೆಯುತ್ತದೆ. ಪಾರ್ಟಿಯಲ್ಲಿ ಪಾಲ್ಗೊಂಡ ವರು ತಮ್ಮ ಮಾತುಗಳ ಮೂಲಕ ಹೇಗೆ ಬೆತ್ತಲಾಗುತ್ತಾರೆ, ಸಭ್ಯ ಸಮಾಜದ ಸೋಗಲಾಡಿತನ ಹೇಗಿರುತ್ತದೆ ಎಂಬುದನ್ನು ನಾಟಕ ಬಹಿರಂಗ ಪಡಿಸುತ್ತದೆ. ಹಿರಿಯ ರಂಗಕರ್ಮಿ ಚಿದಂಬರ ರಾವ್ ಜಂಬೆ ನಿರ್ದೇಶಿಸಿದ್ದಾರೆ ಎಂದು ವಿವರಿಸಿದರು. ಚಿದಂಬರ ರಾವ್ ಜಂಬೆ, ಶ್ರೀನಿವಾಸ್ ಪಾಲಹಳ್ಳಿ, ಎಂ.ಎಂ.ಸುಗುಣ ಇದ್ದರು.

ಮೊದಲ ಪುಟದಿಂದ

### ಇಂದಿನಿಂದ 'ದುನಿಯಾ ದುಬಾರಿ'

ದಿನದಿಂದಲೇ ಅನ್ವಯವಾಗುವಂತೆ ರಾಜ್ಯ ಸರ್ಕಾರ ವಿದ್ಯುತ್ ಹಾಗೂ ಬೆಂಗಳೂರು ನಗರದಲ್ಲಿ ನೀರಿನ ದರ ಏರಿಕೆಯಾಗಲಿದೆ. ಈ ಮೂಲಕ ಗ್ರಾಹಕರಿಗೆ ದರ ಏರಿಕೆಯ ನೇರ ಪರಿಣಾಮ ಬೀರಲಿದೆ. ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಏ.1ರಿಂದ ಅನ್ವಯವಾಗುವಂತೆ ನೀರಿನ ದರವನ್ನು ಶೇ.3ರಷ್ಟು ಹೆಚ್ಚಳ ಮಾಡಲಿದೆ. ಇದರಿಂದ ಬೆಂಗಳೂರಿಗರಿಗೆ ಮತ್ತೊಂದು ಹೊರೆ ಬೀಳಲಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು (ಕೆಇಆರ್‌ಸಿ) ಸಾಕಷ್ಟು ಅಳೆದು ತೂಗಿ ಕೊನೆಗೂ ವಿದ್ಯುತ್ ದರವನ್ನು ಪರಿಷ್ಕರಿಸಿದೆ. ಕೈಗಾರಿಕೆಗಳು ಮತ್ತು ವಾಣಿಜ್ಯ ಗ್ರಾಹಕರಿಗೆ ವಿದ್ಯುತ್ ದರ ಏರಿಕೆಯ ಬಿಸಿ ತಟ್ಟಲಿದೆ. ರಾಜ್ಯದ ವಿದ್ಯುತ್ ವಿತರಣಾ ಕಂಪನಿಗಳಿಗೆ (ಎಸ್ಕಾಂ) ಹಿಂದಿನ ಹಣಕಾಸು ವರ್ಷದಲ್ಲಿಆದಾಯ ಖೋತಾ ಆಗಿದ್ದು, ವಿದ್ಯುತ್ ದರ ಹೆಚ್ಚಳದ ಮೂಲಕ ಈ ಆರ್ಥಿಕ ನಷ್ಟ ಸರಿದೂಗಿಸುವಂತೆ ಐದೂ ಎಸ್ಕಾಂಗಳು ಕೆಇಆರ್‌ಸಿಗೆ ಪ್ರಸ್ತಾವ ಸಲ್ಲಿಸಿದ್ದವು. ಅಂತಿಮವಾಗಿ ಎಸ್ಕಾಂಗಳ ಒತ್ತಾಯಕ್ಕೆ ಮಣಿದಿರುವ ಕೆಇಆರ್‌ಸಿ, 2025–26ನೇ ಸಾಲಿಗೆ ಪೂರ್ವಾನ್ವಯವಾಗುವಂತೆ ವಿದ್ಯುತ್ ದರ ಪರಿಷ್ಕರಿಸಿ ಮಂಗಳವಾರ ಆದೇಶ ಹೊರಡಿಸಿದೆ.

### ಹಾಲಿನ ಬೆಲೆ ಹೆಚ್ಚಳ: ಡಿ.ಕೆ.ಸುರೇಶ್ ಮಾಹಿತಿ

ಹೀಗಾಗಿ ಸಹಜವಾಗಿಯೇ ಹಾಲು ಒಕ್ಕೂಟಗಳು ತೊಂದರೆಗೆ ಸಿಲುಕುತ್ತಿವೆ. ಹಾಲು ಹಾಗೂ ನಂದಿನಿ ಉತ್ಪನ್ನಗಳಿಗೆ ಅಡುಗೆ ಅನಿಲ ಬಳಕೆಯ ಬಾಯ್ಲರ್‌ಗಳನ್ನು ಉಪಯೋಗಿಸುತ್ತಿದ್ದೇವೆ. ಎಲೆಕ್ಟ್ರಿಕ್ ಹಾಗೂ ಸೋಲಾರ್ ಶಕ್ತಿಯ ಬಾಯ್ಲರ್‌ಗಳನ್ನು ಬಳಸುತ್ತಿಲ್ಲ. ಒಂದು ವೇಳೆ ಪರ್ಯಾಯ ಬಾಯ್ಲರ್‌ಗಳನ್ನು ಉಪಯೋಗಿಸಬೇಕಾದರೆ ಬದಲಾವಣೆ ಮಾಡಿಕೊಳ್ಳಬೇಕು. ಅದಕ್ಕೆ ಟೆಂಡರ್ ಕರೆಯುವುದು ಸೇರಿದಂತೆ ಮತ್ತಿತರ ಕಾರಣಗಳಿಂದ ವಿಳಂಬವಾಗಲಿದೆ ಎಂದು ಅವರು ತಿಳಿಸಿದರು.

### ಪೆಟ್ರೋಲ್‌ಗೆ ಬೆಂಕಿ: ಮಹಿಳೆ ಚಿಂತಾಜನಕ

ಮಹಿಳೆ ಸ್ಥಿತಿ ಮಾತ್ರ ಗಂಭೀರವಾಗಿದೆ. ಮನೆಯ ಇತರ ಸದಸ್ಯರು ಹೊರಗಡೆ ಕುಳಿತಿದ್ದ–ರಿಂದ ಪಾರಾಗಿದ್ದಾರೆ.

## ಕೈಗಾರಿಕೆಗಳ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ




ಮೈಸೂರು: ಅಡಕನಹಳ್ಳಿ, ಕಡಕೊಳ, ತಾಂಡ್ಯ, ಇಮ್ಮಾವು ಮತ್ತು ಕೋಚನಹಳ್ಳಿ ಪ್ರದೇಶಗಳ ಕೈಗಾರಿಕೆಗಳನ್ನು ಒಳಗೊಂಡಂತೆ ಅಸ್ತಿತ್ವಕ್ಕೆ ಬಂದಿರುವ ಕಾಥ್ಕಿ ಕೈಗಾರಿಕೆಗಳ ಸಂಘಕ್ಕೆ ನೂತನ ಅವಧಿಗೆ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಗಿದೆ ಎಂದು ಗೌರವಾಧ್ಯಕ್ಷ ಎಚ್. ರಾಮಕೃಷ್ಣೇಗೌಡ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಅಧ್ಯಕ್ಷರಾಗಿ ಜೋಷಿ ಬೇಸಿಲ್, ಉಪಾಧ್ಯಕ್ಷರಾಗಿ ದರ್ಶನ್, ಪ್ರಧಾನ ಕಾರ್ಯದರ್ಶಿಯಾಗಿ ಜಿ.ವಿ. ಪಿಂಟೋ, ಕಾರ್ಯದರ್ಶಿಯಾಗಿ ಮಾಧ ವಿಲತಾ, ಸಂಘಟನಾ ಕಾರ್ಯದರ್ಶಿಯಾಗಿ ಎ.ಎಸ್. ಶ್ರವಣ ಶೇಷಾದ್ರಿ, ಖಜಾಂಚಿಯಾಗಿ ಕೆ. ಸೈಯದ್ ಜುಬೇರ್ ಆಯ್ಕೆಯಾಗಿ ದ್ದಾರೆಂದರು.

ಈ ಭಾಗದಲ್ಲಿ ಕೈಗಾರಿಕೆಗಳ ಅಭಿವೃದ್ಧಿಗೆ ಅಧಿಕಾರಿಗಳಿಂದ ಸೂಕ್ತ ಸ್ಪಂದನೆ ದೊರಕುತ್ತಿಲ್ಲ. ಹಣಕಾಸು ನೆರವು ಪಡೆಯವುದು, ಪರವಾನಗಿ ದೊರಕಿಸಿಕೊಳ್ಳುವುದು ಕಷ್ಟಕರವಾಗಿದೆ. ಈ ಕುರಿತು ನಡೆಸುವ ಪತ್ರ ವ್ಯವಹಾರಗಳಿಗೆ ಸಕಾ ಲದಲ್ಲಿ ಉತ್ತರ ಸಿಗುತ್ತಿಲ್ಲ. ಈಚಿನ ವರ್ಷಗಳಲ್ಲಿ ಹಲವಾರು ಸಮಸ್ಯೆಗಳನ್ನು ಎದುರಿಸುತ್ತ ಕೈಗಾರಿಕೆಗಳು ಸಾಗಿವೆ. ಹೀಗಿರುವಾಗ ಸೂಕ್ತ ನೆರವು ದೊರೆಯದಿದ್ದರೆ ಕೈಗಾರಿಕೆ ನಡೆಸುವುದು ಕಷ್ಟವಾಗುತ್ತದೆ. ಇದರಿಂದ ಆರ್ಥಿಕತೆಗೆ ಹೊಡೆತ ಮಾತ್ರವಲ್ಲದೇ ನಿರುದ್ಯೋಗವೂ ಹೆಚ್ಚಲಿದೆ. ಹೀಗಾಗಿ ಸರ್ಕಾರ ತಮ್ಮ ನೆರವಿಗೆ ಬರಬೇಕೆಂದು ಕೋರಿದರು. ಜೋಷಿ ಬೇಸಿಲ್, ದರ್ಶನ್, ಜಿ.ವಿ. ಪಿಂಟೋ, ಮಾಧವಿಲತಾ, ಕೆ. ಸೈಯದ್ ಜುಬೇರ್ ಇದ್ದರು.

**ಕೆ.ಎಂ. ಮುನಿಗೋಪಾಲ್ ರಾಜು ಅವರು ಸೇವೆಯಿಂದ ನಿವೃತ್ತಿ**

# ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಿಗೆ ಬೀಳ್ಕೊಡುಗೆ

ಮೈಸೂರು: ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ (ಸೆಸ್ಕ್) ವ್ಯವಸ್ಥಾಪಕ ನಿರ್ದೇಶಕ ರಾದ ಕೆ.ಎಂ. ಮುನಿಗೋಪಾಲ್ ರಾಜು ಅವರು ಸೇವೆಯಿಂದ ನಿವೃತ್ತಿ ಹೊಂದಿದ್ದು, ನಿಗಮದ ವತಿ ಯಿಂದ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು.

ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಸೆಸ್ಕ್ ಪ್ರಧಾನ ಕಚೇರಿಯಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ನಿಗಮದ ಹಿರಿಯ ಹಾಗೂ ಕಿರಿಯ ಅಧಿಕಾರಿಗಳು ಮತ್ತು ಸಿಬ್ಬಂದಿ ಕೆ.ಎಂ. ಮುನಿಗೋಪಾಲ್ ರಾಜು ಅವರನ್ನು ಆತ್ಮೀಯವಾಗಿ ಅಭಿನಂದಿಸಿ ಪ್ರೀತಿಯ ವಿದಾಯ ಹೇಳಿದರು. ಈ ವೇಳೆ ಮಾತನಾಡಿದ ಹಲವು ಅಧಿಕಾರಿಗಳು, ಕೆ.ಎಂ. ಮುನಿಗೋಪಾಲ್ ರಾಜು ಅವರ ನಾಯಕತ್ವ, ಕಾರ್ಯವೈಖರಿ ಮತ್ತು ಸ್ನೇಹಪರ ವ್ಯಕ್ತಿತ್ವವನ್ನು ಸ್ಮರಿಸಿ, ಅವರ ನಿವೃತ್ತಿ ಜೀವನ ಸುಖಕರವಾಗಿರಲಿ ಎಂದು ಹಾರೈಸಿದರು.

ನಂತರ ಶಾಸಕ ಹಾಗೂ ಸೆಸ್ಕ್ ಅಧ್ಯಕ್ಷರಾದ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಮಾತನಾಡಿ, ಕೆ. ಎಂ.ಮುನಿಗೋಪಾಲ್ ರಾಜು ಬಂಡೆಯಂತಹ ವ್ಯಕ್ತಿತ್ವ ಹೊಂದಿದ್ದು, ಕೆಲಸದ ವಿಚಾರದಲ್ಲಿ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು, ಯಾರನ್ನೂ ನೋಯಿಸದೆ ಮತ್ತು ಅಗೌರವದಿಂದ ಕಾಣದೆ ಕಾರ್ಯನಿರ್ವಹಿಸುವ ಗುಣ ಹೊಂದಿದ್ದರು. ಯಾವುದೇ ಯೋಜನೆಗಳ ಅನುಷ್ಠಾನ ಮತ್ತು ನಿರ್ಧಾರಗಳಲ್ಲಿ ದೃಢ ನಿಲುವು ತಾಳುತ್ತಿದ್ದ ಅವರು, ಜವಾಬ್ದಾರಿಯುತ ವ್ಯಕ್ತಿಯಾಗಿ ಮಾರ್ಗದರ್ಶನ ನೀಡಿದವರಾಗಿದ್ದಾರೆ. ಅವರ ನಿವೃತ್ತಿ ಜೀವನ ಸುಖಕರವಾಗಿರಲಿ" ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ತಾಂತ್ರಿಕ ನಿರ್ದೇಶಕರಾದ ಡಿ.ಜೆ. ದಿವಾಕರ್, ಪ್ರಮುಖ ಅಧಿಕಾರಿಗಳಾದ ಎಲ್. ಲೋಕೇಶ್, ಜಿ. ರೇಣುಕಾ, ಶರಣಮ್ಮ ಜಂಗಿನ್, ಲಿಂಗರಾಜಮ್ಮ, ಬಿ.ಆರ್. ರೂಪ, ಸುನೀಲ್ ಕುಮಾರ್, ಸೋಮಶೇಖರ್ ಮತ್ತಿತರರು ಇದ್ದರು.



### ಎಲ್ಲರ ಸಹಕಾರದಿಂದ ಯಶಸು

**ಮೈಸೂರು: ಅಭಿನಂದನೆ ಸ್ವೀಕರಿಸಿ ಮಾತನಾಡಿದ ಕೆ.ಎಂ. ಮುನಿಗೋಪಾಲ್ ರಾಜು, ಸೆಸ್ಕ್ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡಲು ಎಲ್ಲರಿಂದಲೂ ಉತ್ತಮ ಸಹಕಾರ ಲಭಿಸಿದೆ ಎಂದು ಹೇಳಿದರು. ನಿಗಮದ ಅಧ್ಯಕ್ಷರು ಕೆಲಸದ ಪ್ರತಿಯೊಂದು ಹಂತದಲ್ಲೂ ಕೈಜೋಡಿಸಿದ್ದು, ಎಂಡಿಯಾಗಿ ಕೆಲಸ ಮಾಡುವ ಅವಕಾಶ ಕಲ್ಪಿಸಿ, ನಿಗಮದ ಕಾರ್ಯಗಳು ಸುಗಮವಾಗಿ ನಡೆಯಲು ನೆರವಾಗಿದ್ದಾರೆ. ಅವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ನಿಗಮ ಕಚೇರಿಯಲ್ಲಿ ತಾಂತ್ರಿಕ ನಿರ್ದೇಶಕರಿಂದ ಹಿಡಿದು ಪ್ರತಿಯೊಬ್ಬ ಅಧಿಕಾರಿ ಮತ್ತು ಸಿಬ್ಬಂದಿ ಅತ್ಯುತ್ತಮವಾಗಿ ಕೆಲಸ ಮಾಡಿದ್ದಾರೆ. ತಮ್ಮ ವೃತ್ತಿ ಜೀವನದ ಯಶಸ್ಸಿನಲ್ಲಿ ಹಲವರ ಸಹಕಾರವಿದ್ದು, ಎಲ್ಲರೂ ಒಗ್ಗೂಡಿ ಕೆಲಸ ಮಾಡಿದ್ದರ ಪರಿಣಾಮ ದೊಡ್ಡಮಟ್ಟದ ಯಶಸ್ಸು ದೊರೆತಿದೆ ಎಂದು ಹೇಳಿ, ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಿದರು.**

## ಮಹಿಳೆಯರು ಉತ್ತಮ ಸಾಧನೆ



ಚಾಮರಾಜನಗರ, ವಿಶ್ವದಲ್ಲಿ ಮಹಿಳೆಯರು ಉತ್ತಮ ಸಾಧನೆ ಮಾಡಿದ್ದಾರೆ ಎಂದು ಶಿವಮೊಗ್ಗ ಶಂಕರಘಟ್ಟ ಕುವೆಂಪು ವಿಶ್ವವಿದ್ಯಾಲಯ ಶಿಕ್ಷಣ ಶಾಸ್ತ್ರ ಅಧ್ಯಯನ ಮತ್ತು ಸಂಶೋಧನೆ ವಿಭಾಗದ ಪಾಧ್ಯಾಪಕಿ ಡಾ ಸಿ ಗೀತಾ ಮೆಚ್ಚಿಗೆ ವ್ಯಕ್ತಪಡಿಸಿದರು.

ನಗರದ ಜೆಎಸ್‌ಎಸ್ ಶಿಕ್ಷಣ ಮಹಾವಿದ್ಯಾಲಯ ಬಿಎಡ್ ಕಾಲೇಜಿನ ವತಿಯಿಂದ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಹೆಣ್ಣು ಮಕ್ಕಳು ನಿರಂತರ ಕಠಿಣ ಅಭ್ಯಾಸದಿಂದ ವಿದ್ಯಾಭ್ಯಾಸ ಮಾಡಿ ಮುಖ್ಯ ವಾಹಿನಿಗೆ ಬರಬೇಕು ಎಂದು ಸಲಹೆ ನೀಡಿದರು. ಪ್ರತಿಯೊಂದು ಕ್ಷೇತ್ರದಲ್ಲೂ ತಮ್ಮದೇ ಆದ ಸಾಧನೆ ಮಾಡಿದ್ದೀರಿ, ಮಹಿಳೆಯರು ಸವಾಲುಗಳನ್ನು ಸ್ವೀಕರಿಸಿ ಮುನ್ನಡೆದರೆ ನಿಮ್ಮ ಭವಿಷ್ಯ ಉಜ್ವಲವಾಗಲಿದೆ ಎಂದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ ಮೈಸೂರು ಸಹಪಾಧ್ಯಪಕಿ ಡಾ ಎಂ ಜಾನಕಿ ಮಾತನಾಡಿ ಕೇಂದ್ರ ಸರ್ಕಾರ ರಾಜ್ಯ ಸರ್ಕಾರದಿಂದ ಮಹಿಳೆಯರ ಅಭಿವೃದ್ಧಿಗಾಗಿ ಹಲವಾರು ಜನಪರ ಯೋಜನೆಗಳನ್ನು ಜಾರಿ ಮಾಡಿದ್ದಾರೆ ಈ ಎಲ್ಲಾ ಸೌಲಭ್ಯಗಳನ್ನು ಪಡೆದುಕೊಂಡು ಭವಿಷ್ಯದಲ್ಲಿ ಉತ್ತಮ ಸಾಧನೆ ಮಾಡುವಂತೆ ತಿಳಿಸಿದರು.

ಜೆಎಸ್‌ಎಸ್,ಬಿ ಎಡ್.ಕಾಲೇಜಿನ ಪ್ರಥಮ ವರ್ಷದ ವಿದ್ಯಾರ್ಥಿನಿ ಪಿ ಪುಷ್ಪಲತಾ ಮಾತನಾಡಿ. 19ನೇ ಶತಮಾನದಲ್ಲಿ ಬಾಲ್ಯ ವಿವಾಹ ಪದ್ಧತಿಯಿಂದ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತಿತ್ತು ಪ್ರಸ್ತುತ ಕಂಪ್ಯೂಟರ್ ಯುಗದಲ್ಲಿ ಹೆಣ್ಣು ಮಕ್ಕಳು ಶಿಕ್ಷಣಕ್ಕೆ ಹೆಚ್ಚಿನ ಅದ್ಯತೆ ನೀಡಿದ್ದಾರೆ. ಇದಕ್ಕೆಲ್ಲ ಸ್ಪೂರ್ತಿ ನಮ್ಮ ಪೋಷಕರು ಹಾಗೂ ನಮ್ಮ ಗುರುಗಳು ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. ಕಾಲೇಜಿನ ಪ್ರಾಂಶುಪಾಲ ಡಾ ಕೆ ಸಿ ಬಸವಣ್ಣ, ಬಿಎಡ್ ಕಾಲೇಜಿನ ಪ್ರೊಫೆಸರ್ ಗಳಾದ ಕೆಎಂ ಯೋಗೇಶ್, ಎಸ್ ಎನ್ ರಾಜು ಜೈನ್, ಡಿಎಸ್ ಸುರೇಶ್, ಕೆಎಸ್ ಸಿದ್ದರಾಜು. ಬಿ ಶಿವಕುಮಾರ್. ಎನ್ ಲಕ್ಷ್ಮಿ. ಹಾಜರಿದ್ದರು

## ಗಿರಿಜನರ ಮಕ್ಕಳ ಶಿಕ್ಷಣಕ್ಕೆ ಒತ್ತು



ಚಾಮರಾಜನಗರ, ತಾಲ್ಲೂಕಿನ ಕಾಡಂಚಿನ ಪುಣಜನೂರು ಗ್ರಾಮದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಅನುದಾನ 2 ಕೋಟಿ ರೂ.ವೆಚ್ಚದಲ್ಲಿ ಗಿರಿಜನ ಆಶ್ರಮ ಶಾಲಾ ಹೆಚ್ಚುವರಿ ಶಾಲಾ ಕೊಠಡಿ ಕಾಮಗಾರಿಗೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಗುದ್ದಲಿ ಪೂಜೆ ನೆರವೇರಿಸಿದರು.

ನಂತರ ಅವರು ಮಾತನಾಡಿ, ಜಿಲ್ಲೆಯಲ್ಲಿ ಸರಕಾರಿ ವೈದ್ಯಕೀಯ ಕಾಲೇಜು, ಸರಕಾರಿ ಎಂಜಿನಿಯರಿಂಗ್ ಕಾಲೇಜು, ಕೃಷಿವಿಜ್ಞಾನ ಕಾಲೇಜು, ಸುವರ್ಣಗಂಗೋತ್ರಿ. ಚಾಮರಾಜನಗರ ವಿವಿ ಸ್ಥಾಪನೆಯಾಗಿದ್ದು, ಜಿಲ್ಲೆಯಲ್ಲಿ ಉನ್ನತಶಿಕ್ಷಣಕ್ಕೆ ಸರ್ಕಾರ ಹೆಚ್ಚು ಒತ್ತು ನೀಡಿದೆ. ಜತೆಗೆ ಗಿರಿಜನರ ಮಕ್ಕಳ ಶಿಕ್ಷಣ ಆಶ್ರಮ ಶಾಲೆಗಳನ್ನು ಆರಂಭಮಾಡುವ ಮೂಲಕ ಸರಕಾರದ ಯೋಜನೆಗಳನ್ನು ವಿದ್ಯಾರ್ಥಿಗಳು ಸದ್ಬಳಕೆ ಮಾಡಿಕೊಳ್ಳಬೇಕು ಎಂದರು. ಕ್ಷೇತ್ರ ವ್ಯಾಪ್ತಿಯ ಶಾಲೆಗಳಿಗೆ ಕುಡಿಯುವ ನೀರು, ಶಾಲಾಕೊಠಡಿ ನಿರ್ಮಾಣದಂತಹ ಮೂಲಸೌಕರ್ಯಗಳಿಗೆ ಒತ್ತು ನೀಡಲಾಗುತ್ತಿದೆ, ಕ್ಷೇತ್ರ ವ್ಯಾಪ್ತಿಯ ಗ್ರಾಮಗಳಿಗೆ ಕುಡಿಯುವ ನೀರು ಸೇರಿದಂತೆ ಯಾವುದೇ ಮೂಲಭೂತ ಸಮಸ್ಯೆ ಇದ್ದರೂ, ತಕ್ಷಣ ಪರಿಹರಿಸಲು ಕ್ರಮವಹಿಸುವುದಾಗಿ ಶಾಸಕರು ಭರವಸೆ ನೀಡಿದರು. ಕಾಮಗಾರಿ ನಿರ್ವಹಣೆ ಗುತ್ತಿಗೆದಾರರು ಗುಣಮಟ್ಟದ ಕಾಮಗಾರಿಗೆ ಆದ್ಯತೆ ನೀಡಬೇಕು, ನಿಗದಿತ ಅವಧಿಯಲ್ಲಿ ಕೊಠಡಿಕಾಮಗಾರಿಗಳನ್ನು ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಪಿಎಸಿಸಿ ಅಧ್ಯಕ್ಷ ಮಣನಾಯಕ, ಜಿಲ್ಲಾ ಕಾಂಗ್ರೆಸ್ ಕಾರ್ಮಿಕವಿಭಾಗದ ಕಾರ್ಯಧ್ಯಕ್ಷ ಪಿ.ಕುಮಾರನಾಯಕ, ಗ್ರಾಪಂ ಮಾಜಿಅಧ್ಯಕ್ಷರಾದ ಶಾಂತಮ್ಮ, ಶಾಮೀರ್ ಪಾಷಾ, ಸದಸ್ಯ ನಾಗನಾಯಕ, ಜಡೆಯಪ್ಪ, ಶಂಕರ್, ಗುತ್ತಿಗೆದಾರ ವೀರಭದ್ರಪ್ಪ, ಕಾರ್ತಿಕ್, ಬಸವಣ್ಣ; ಇಂಜೇನಿಯರ್, ಬೀಮ್‌ಸಾಗರ್, ಹಾಜರಿದ್ದರು.

## ಏಪ್ರಿಲ್ 1ರಿಂದ ಆಸ್ತಿ ತೆರಿಗೆ ಹೆಚ್ಚಳಕ್ಕೆ ಸೂಚನೆ

ರಾಮನಗರ: 2026-27ನೇ ಸಾಲಿಗೆ ಆಸ್ತಿ ತೆರಿಗೆ ಪರಿಷ್ಕರಿಸುವಂತೆ ಪೌರಾಡಳಿ ನಿರ್ದೇಶನಾಲಯದ ನಿರ್ದೇಕರು ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಸೂಚಿಸಿದ್ದಾರೆ.

**ಶೇ 4ರಷ್ಟು ಹೆಚ್ಚಳಕ್ಕೆ ಸೂಚನೆ**

ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ 1975ರ 45ಬಿ ಪ್ರಕರಣದಡಿ 2025-26ನೇ ಸಾಲಿನಲ್ಲಿ ಚರಾಸ್ಥಿಯ ಮಾರುಕಟ್ಟೆ ಬೆಲೆ ಪರಿಷ್ಕರಣೆ ಮಾಡಿರುವುದಿಲ್ಲ. ಆದ್ದರಿಂದ 2023-24ನೇ ಸಾಲಿನ ಮಾರುಕಟ್ಟೆ ಬೆಲೆ ಆಧರಿಸಿ 2026-27ನೇ ಸಾಲಿಗೆ ಆಸ್ತಿ ತೆರಿಗೆಯನ್ನು ಹೆಚ್ಚಳ ಮಾಡುವ ಕುರಿತು ಆಯವ್ಯಯ ಸಾಮಾನ್ಯ ಸಭೆಯ ನಡವಳಿ ವಿಷಯ ಸಂಖ್ಯೆ 11 ರ ಮಾ.25ರಂತೆ ಶೇ.4ರಷ್ಟು ಹೆಚ್ಚಿಸಿ ಪರಿಷ್ಕರಿಸುವಂತೆ ತಿಳಿಸಿದ್ದಾರೆ. ವಾಸ, ವಾಣಿಜ್ಯ ಉಪಯೋಗಕ್ಕೆ, ಖಾಲಿ ನಿವೇಶನಗಳಿಗೆ ಹಾಗೂ ಕೈಗಾರಿಕೆಗಳಿಗೆ ದರ ನಿಗಧಿಪಡಿಸಿ ಆಸ್ತಿ ತೆರಿಗೆ ದರ ಪರಿಷ್ಕರಣೆ ಅನ್ವಯವಾಗುತ್ತದೆ ಎಂದು ತಿಳಿಸಿದ್ದಾರೆ.

ಸ್ಥಳೀಯ ನಗರ ಸಂಸ್ಥೆಗಳು ಆಸ್ತಿ ತೆರಿಗೆ ಪರಿಷ್ಕರಣೆ ಮಾಡಿ ಪ್ರಾಪರ್ಟಿ ಟ್ಯಾಕ್ಸ್ ಕ್ಯಾಲ್ಕುಲೇಟರ್ (ಕಡಿಂಠಿಜಡಿಣಥಿ ಖಿಚಿಥ ಅಚಿಟಛಿಣಟಚಿಣಜಡಿ) ತಂತ್ರಾಂಶದಲ್ಲಿ ದಾಖಲಿಸಲು ತಿಳಿಸಿದ್ದಾರೆ. ಪ್ರತಿ ವರ್ಷ ದರ ಪರಿಷ್ಕರಿಸುವಂತೆಯೂ ಸೂಚನೆಕೊಟ್ಟಿದ್ದಾರೆ.

**ಏಪ್ರಿಲ್‌ನಲ್ಲಿ ಪಾವತಿಸಿದರೆ ಶೇ 5 ಡಿಸ್ಕೌಂಟ್!**

ಪರಿಷ್ಕೃತ ತೆರಿಗೆ ದರ 2026-27 ನೇ ಸಾಲಿನ ಅಂದರೆ 2026ರ ಏಪ್ರಿಲ್ 1 ರಿಂದ ಜಾರಿಗೆ ಬರಲಿದೆ.

2026ರ ಏಪ್ರಿಲ್ ತಿಂಗಳಲ್ಲಿ ಆಸ್ತಿ ತೆರಿಗೆ ಪಾವತಿಸಿದ್ದಲ್ಲಿ ಮೂಲ ತೆರಿಗೆಯಲ್ಲಿ ಶೇ.5 ರಷ್ಟು ರಿಯಾಯಿತಿ ಹಾಗೂ 2026ರ ಮೇ ಮತ್ತು ಜೂನ್ ತಿಂಗಳಲ್ಲಿ ದಂಡ ರಹಿತವಾಗಿ ತೆರಿಗೆ ಪಾವತಿಸಲು ಅವಕಾಶವಿರುತ್ತದೆ. 2026ರ ಜುಲೈ ತಿಂಗಳಿನಿಂದ ಆಸ್ತಿ ತೆರಿಗೆ ಮೇಲೆ ಪ್ರತಿ ತಿಂಗಳು ಶೇ.2 ರಷ್ಟು ದಂಡ ವಿಧಿಸಲಾಗುತ್ತದೆ ಎಂದು ಜಿಲ್ಲೆಯ ಚನ್ನಪಟ್ಟಣ ನಗರಸಭೆಯ ಪೌರಾಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜ.ತಿಮ್ಮಯ್ಯ ಸಾಹಸ, ಸಾಧನೆ ಅಪಾರ

## ಶಾಸಕ ಪೊನ್ನಣ್ಣ ಅಭಿಮತ । ಜನರಲ್ ಕೆ.ಎಸ್.ತಿಮ್ಮಯ್ಯ ಜನ್ಮ ದಿನಾಚರಣೆ

ಮಡಿಕೇರಿ:-ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರ ಜನ್ಮ ದಿನಾಚರಣೆಯನ್ನು ನಗರದ ಜನರಲ್ ಕೆ.ಎಸ್.ತಿಮ್ಮಯ್ಯ ಸ್ಮಾರಕ ಭವನ (ಸನ್ನಿಸೈಡ್)ದಲ್ಲಿ ಮಂಗಳವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ಹಾಗೂ ವಿರಾಜಪೇಟೆ ವಿಧಾನಸಭಾ ಕ್ಷೇತ್ರದ ಶಾಸಕರಾದ ಎ.ಎಸ್.ಪೊನ್ನಣ್ಣ ಅವರು ಜನರಲ್ ತಿಮ್ಮಯ್ಯ ಸ್ಮಾರಕ ಭವನದಲ್ಲಿ ದೀಪ ಬೆಳಗಿ, ಜನರಲ್ ತಿಮ್ಮಯ್ಯ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಗೌರವ ನಮನ ಸಲ್ಲಿಸಿದರು. ಬಳಿಕ ಮಾತನಾಡಿದ ಶಾಸಕರು ಜನರಲ್ ಕೋಡಂದೇರ ಸುಬ್ಬಯ್ಯ ತಿಮ್ಮಯ್ಯ ಅವರು ಭಾರತೀಯ ಸೇನಾ ಕ್ಷೇತ್ರದಲ್ಲಿ ಅತ್ಯಂತ ಧೈರ್ಯಶಾಲಿ, ತಂತ್ರಗಾರಿಕೆ ಹಾಗೂ ಚತುರತೆಯ ನಾಯಕರಾಗಿದ್ದರು ಎಂದು ಹೇಳಿದರು.

1957ರಿಂದ 1961ರವರೆಗೆ ಸೇನಾ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದ ಕೆ.ಎಸ್.ತಿಮ್ಮಯ್ಯ ಅವರು ಎರಡನೇ ಮಹಾಯುದ್ಧ ಮತ್ತು 1948 ರ ಕಾಶ್ಮೀರ ಯುದ್ಧದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂದು ತಿಳಿಸಿದರು.

ಮಡಿಕೇರಿಯ ಸನ್ನಿಸೈಡ್‌ನಲ್ಲಿ ಜನಿಸಿದ ಇವರು ವಿಶ್ವಸಂಸ್ಥೆಯ ಶಾಂತಿಪಾಲನಾ ಪಡೆಯಲ್ಲೂ ಸಹ ಸೇವೆ ಸಲ್ಲಿಸಿ ದಾಖಲೆ ನಿರ್ಮಿಸಿದ್ದಾರೆ ಎಂದು ಎ.ಎಸ್.ಪೊನ್ನಣ್ಣ ಅವರು ವಿವರಿಸಿದರು. ಸಣ್ಣ ವಯಸ್ಸಿನಲ್ಲಿಯೇ ಸೇನೆಗೆ ಸೇರಿ ಭಾರತೀಯ ಸೇನಾ ಕ್ಷೇತ್ರದಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದರು. ಅವರ ಸೇನಾ ಕ್ಷೇತ್ರದಲ್ಲಿನ ಕೆಲಸಗಳು ಇಂದಿಗೂ ಸಹ ಮಾದರಿ ಹಾಗೂ ಮಾರ್ಗದರ್ಶನವಾಗಿದೆ ಎಂದು ಮುಖ್ಯಮಂತ್ರಿ ಅವರ ಕಾನೂನು ಸಲಹೆಗಾರರು ನುಡಿದರು.

ಶಿಸ್ತು, ಸಮಯಪ್ರಜ್ಞೆ, ಬದ್ಧತೆ ಮತ್ತು ಪ್ರಾಮಾಣಿಕತೆಗೆ ಹೆಸರಾಗಿದ್ದ ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಸೇನಾ ಕ್ಷೇತ್ರದ ಇತಿಹಾಸದಲ್ಲಿ ಮರೆಯಲಾಗದ ಸಾಧನೆ ಮಾಡಿದ್ದಾರೆ ಎಂದು ಎ.ಎಸ್.ಪೊನ್ನಣ್ಣ ಅವರು ಹೇಳಿದರು.



### ಇನ್‌ಪೆಂಟ್ರಿ ಬ್ರಿಗೇಡಿಗೆ ನೇತೃತ್ವ ವಹಿಸಿ ಏಕೈಕ ಭಾರತೀಯ

ನಿವೃತ್ತ ಸೇನಾನಿ ಗೌಡಂಡ ತಿಮ್ಮಯ್ಯ ಅವರು ಮಾತನಾಡಿ 1906 ರ ಮಾರ್ಚ್, 31 ರಂದು ಜನಿಸಿದ ಜನರಲ್ ತಿಮ್ಮಯ್ಯ ಅವರು ಊಟಿಯಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ನಂತರ ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯಲ್ಲಿ, ಡೆಹರಾಡೂನ್‌ನ ಪ್ರಿನ್ಸ್ ಆಫ್ ವೇಲ್ಸ್ ರಾಯಲ್ ಇಂಡಿಯನ್ ಮಿಲಿಟರಿ ಕಾಲೇಜಿನಲ್ಲಿ ಶಿಕ್ಷಣ ಪಡೆದು, ನಂತರ ಇಂಗ್ಲೆಂಡ್‌ನ ಸ್ಯಾಂಡ್‌ಅರ್ಟ್ಸ್ ರಾಯಲ್ ಮಿಲಿಟರಿ ಕಾಲೇಜಿನಲ್ಲಿ ತರಬೇತಿ ಪಡೆದು ಸೇನಾ ಕ್ಷೇತ್ರದಲ್ಲಿ ಅಗಾಧ ಸಾಧನೆ ಮಾಡಿದ್ದಾರೆ ಎಂದು ಹೇಳಿದರು. 1926 ರಲ್ಲಿ ಭಾರತೀಯ ಸೇನೆಗೆ ಸೇರ್ಪಡೆಯಾದ ಜನರಲ್ ತಿಮ್ಮಯ್ಯ ಅವರು ಎರಡನೇ ಮಹಾಯುದ್ಧದ ಸಮಯದಲ್ಲಿ ಇನ್‌ಪೆಂಟ್ರಿ ಬ್ರಿಗೇಡಿಗೆ ನೇತೃತ್ವ ವಹಿಸಿ ಏಕೈಕ ಭಾರತೀಯ ಸೈನಿಕ ಎಂಬ ಹೆಗ್ಗಳಿಕೆ ಅವರದ್ದಾಗಿದೆ ಎಂದು ಗೌಡಂಡ ತಿಮ್ಮಯ್ಯ ಅವರು ವಿವರಿಸಿದರು. 1948 ರಲ್ಲಿ ಪಾಕಿಸ್ತಾನದ ವಿರುದ್ಧದ ಕಾಶ್ಮೀರ ಕಾರ್ಯಾಚರಣೆಯಲ್ಲಿ ಟ್ಯಾಂಕ್‌ಗಳನ್ನು ಬಳಸಿಕೊಂಡು ಜಯ ಸಾಧಿಸುವಲ್ಲಿ ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಪ್ರಮುಖ ಪಾತ್ರ ವಹಿಸಿದ್ದರು ಎಂದು ಅವರು ಸ್ಮರಿಸಿದರು. 1957 ರಲ್ಲಿ ಸೇನಾ ಮುಖ್ಯಸ್ಥರಾಗಿ ಅಧಿಕಾರ ವಹಿಸಿಕೊಂಡು ಭಾರತೀಯ ಸೇನೆಯನ್ನು ಅತ್ಯುನ್ನತ ಸ್ಥಾನಕ್ಕೆ ಕೊಂಡೊಯ್ಯುತ್ತಾರೆ ಎಂದು ಅವರು ತಿಳಿಸಿದರು. 1961 ರಲ್ಲಿ ಸೇನೆಯಿಂದ ನಿವೃತ್ತರಾದ ನಂತರ ವಿಶ್ವ ಸಂಸ್ಥೆಯ ಶಾಂತಿಪಾಲನಾ ಪಡೆಯ ಕಮಾಂಡರ್ ಆಗಿ ಸೇವೆ ಸಲ್ಲಿಸಿದ್ದಾರೆ ಎಂದು ಗೌಡಂಡ ತಿಮ್ಮಯ್ಯ ಅವರು ಸ್ಮರಿಸಿದರು.

ಜಿ.ಪಂ.ಸಿಇಒ ಆನಂದ್ ಪ್ರಕಾಶ್ ಮೀನಾ ಅವರು ಮಾತನಾಡಿ ಜನರಲ್ ತಿಮ್ಮಯ್ಯ ಅವರ ಸೇನಾ ಕ್ಷೇತ್ರದಲ್ಲಿನ ಸಾಧನೆಯನ್ನು ಪ್ರತಿಯೊಬ್ಬರೂ ಸ್ಮರಿಸಬೇಕು. ಅವರ ಮೌಲ್ಯಯುತ ಜೀವನ ಮತ್ತು ಬದುಕು ಸೇನಾ ಕ್ಷೇತ್ರದಲ್ಲಿ ಇಂದಿಗೂ ಸಹ ಮಾದರಿಯಾಗಿದೆ ಎಂದರು.

ಹೆಚ್ಚುವರಿ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅವರು ಮಾತನಾಡಿ ರಾಷ್ಟ್ರಕಂಡ ಮೇರುಶಿಖರ ಜನರಲ್ ತಿಮ್ಮಯ್ಯ ಅವರಾಗಿದ್ದು, ಇಂಡೋ-ಚೈನಾ ಯುದ್ಧ ಸಂದರ್ಭದಲ್ಲಿ ದೇಶದ ರಕ್ಷಣೆ ಮತ್ತು ಸುರಕ್ಷತೆಗಾಗಿ ಚತುರತೆಯಿಂದ ಸೇನೆಯನ್ನು ಕಟ್ಟಿದ್ದಾರೆ ಎಂದು ಹೇಳಿದರು. ಜನರಲ್ ತಿಮ್ಮಯ್ಯ ಅವರ ಮೌಲ್ಯಯುತ ಬದುಕು, ಸಮಯ ಮತ್ತು ಕರ್ತವ್ಯ ಪ್ರಜ್ಞೆಯನ್ನು ಪ್ರತಿಯೊಬ್ಬರೂ ಅಳವಡಿಸಿಕೊಳ್ಳಬೇಕು ಎಂದು ನುಡಿದರು.

### ದಿನಾಚರಣೆ ಶ್ಲಾಘನೀಯ

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿಂದುಮಣಿ ಅವರು ಮಾತನಾಡಿ ಪದ್ಮಭೂಷಣ ಜನರಲ್ ಕೆ.ಎಸ್.ತಿಮ್ಮಯ್ಯ ಅವರು ಭಾರತೀಯ ಸೇನೆಯಲ್ಲಿ ನೀಡಿರುವ ಕೊಡುಗೆ ಅಪಾರವಾಗಿದೆ. ಆ ನಿಟ್ಟಿನಲ್ಲಿ ಇದು ಪೊಲೀಸ್ ಇಲಾಖೆಗಳಲ್ಲಿಯೂ ಸಹ ಅಳವಡಿಸಿಕೊಳ್ಳಬೇಕಿದೆ. ಇಂತಹ ಮಹಾನ್ ಸೇನಾನಿಯ ಜನ್ಮ ದಿನಾಚರಣೆಯನ್ನು ಆಚರಿಸುತ್ತಿರುವುದು ಶ್ಲಾಘನೀಯ ಎಂದರು. ಜನರಲ್ ತಿಮ್ಮಯ್ಯ ಅವರ ಕರ್ತವ್ಯ ಪ್ರಜ್ಞೆ, ಭಾರತೀಯ ಸೇನೆಗೆ ನೀಡಿರುವ ಕೊಡುಗೆಯನ್ನು ತಿಳಿದುಕೊಂಡು ಇಂದಿನ ಯುವಜನರು ಅವರ ಬದುಕನ್ನು ಅಳವಡಿಸಿಕೊಳ್ಳಬೇಕು ಎಂದರು.

ಉಪ ವಿಭಾಗಾಧಿಕಾರಿ ನಿತಿನ್ ಚಕ್ಕಿ, ತಹಶೀಲ್ದಾರರಾದ ಶ್ರೀಧರ, ನಗರಸಭೆ ಸದಸ್ಯರಾದ ಅನಿತಾ ಪೂವಯ್ಯ, ಸವಿತಾ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಸದಸ್ಯರಾದ ಪಪ್ಪು ತಿಮ್ಮಯ್ಯ, ಸಂಜು ಕಾವೇರಪ್ಪ, ಫೀಲ್ಡ್ ಮಾರ್ಷಲ್ ಕಾರ್ಯಪ್ಪ ಮತ್ತು ಜನರಲ್ ತಿಮ್ಮಯ್ಯ ಫೌಂಡೇಶನ್‌ನ ಗೌರವ ಸಂಚಾಲಕರಾದ ತಮ್ಮು ಪೂವಯ್ಯ, ರೋಟರಿ ಮಿಸ್ಟಿ ಹಿಲ್ಸ್ ಅಧ್ಯಕ್ಷರಾದ ರತ್ನಾಕರ ರೈ, ನಿರ್ದೇಶಕರಾದ ಅನಿಲ್ ಎಚ್.ಟಿ., ವಿನೋದ್ ಅಂಬೆಕಲ್ಲು, ರೆಡ್‌ಕ್ರಾಸ್ ನಿರ್ದೇಶಕರಾದ ಪಿ.ಆರ್.ರಾಜೇಶ್, ರೋಟರಿ ವುಡ್ಸ್ ಕಾರ್ಯದರ್ಶಿ ಪ್ರಮಿಳಾ ಶೆಟ್ಟಿ, ನಿರ್ದೇಶಕರಾದ ಸ್ಮಿತಾ ಚಂಗಪ್ಪ, ಧನಂಜಯ ಶಾಸ್ತ್ರಿ, ಕೊಡವ ಮಕ್ಕಡ ಕೂಟದ ಸಂಚಾಲಕರಾದ ಬೊಳ್ಳಜಿರ ಅಯ್ಯಪ್ಪ, ಚೆಯ್ಯಂಡ ಸತ್ಯ, ಪೊಲೀಸ್ ಇಲಾಖೆಯ ವೃತ್ತ ನಿರೀಕ್ಷಕರಾದ ಪಿ.ಆರ್.ರಾಜು, ಪೊಲೀಸ್ ಇನ್ಸ್‌ಪೆಕ್ಟರ್ ಉಮೇಶ್ ಕುಮಾರ್ ಇತರರು ಇದ್ದರು.

## ಏ.10ರಿಂದ ಬೇಸಿಗೆ ಮೇಳ

ಮೈಸೂರು:- ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಏಪ್ರಿಲ್ 10 ರಿಂದ ಮೇ 31 ರವರೆಗೆ (52 ದಿನಗಳ ಕಾಲ) "ಬೇಸಿಗೆ ಮೇಳ' ವನ್ನು ಆಯೋಜಿಸಲಾಗುತ್ತಿದೆ.

ಮೇಳದಲ್ಲಿ ಸಣ್ಣ ಮನೊರಂಜನೆ / ತಿಂಡಿ-ತಿನಿಸುಗಳ ಅಂಗಡಿಗಳು । ಕರಕುಶಲಗಳ ಮಾರಾಟಕ್ಕೆ ಮಳಿಗೆಗಳು ಬಾಡಿಗೆಗೆ ಲಭ್ಯವಿರುತ್ತದೆ. ಆಸಕ್ತರು ಅರ್ಜಿಯನ್ನು ಪಡೆದು ಏಪ್ರಿಲ್ 06 ರೊಳಗೆ ಪ್ರಾಧಿಕಾರದ ಕಛೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ಕಛೇರಿಯನ್ನು ಅಥವಾ ಕಛೇರಿಯ ಸಿಬ್ಬಂದಿಯವರಾದÀ Naveen Kumar. ಅ ಅವರ ಮೊಬೈಲ್ ಸಂಖ್ಯೆ: 8892855236 ನ್ನು ಹಾಗೂ ಇ ಮೇಲ್ ಸಂಖ್ಯೆ: exhibitionauthority@gmail.com ಅನ್ನು ಸಂಪರ್ಕಿಸುವುದು ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಘನತ್ಯಾಜ್ಯ ವಸ್ತು ನಿರ್ವಹಣೆಯ ಸೇವಾಶುಲ್ಕ ವಿಧಿಸುವ ಕುರಿತು

ಮೈಸೂರು:- ಘನತ್ಯಾಜ್ಯ ವಸ್ತು ನಿರ್ವಹಣೆ ನಿಯಮಗಳು 2016 ರನ್ವಯ ಪ್ರಾಥಮಿಕ ಹಂತದ ಸಂಗ್ರಹಣೆ, ದ್ವಿತೀಯ ಹಂತದ ಸಂಗ್ರಹಣೆ, ಸಾಗಾಣಿಕೆ, ಕಸ ಸಂಸ್ಕರಣೆ ಮತ್ತು ಹೊಂಡ ತುಂಬುವ ಜಾಗದ ನಿರ್ವಹಣೆ ಹೀಗೆ ಹಲವಾರು ಹಂತದಲ್ಲಿ ಕಸ ನಿರ್ವಹಣೆಗೆ ವಿವಿಧ ಮಾರ್ಗಗಳನ್ನು ಪಾಲಿಕೆಯು ಅನುಸರಿಸಬೇಕಾಗಿದೆ. ಅದರಂತೆ ಪಾಲಿಕೆ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಸ್ತು ನಿರ್ವಹಣಾ ನಿಯಮ-2016ರನ್ವಯ ಪ್ರಾಥಮಿಕ ಹಂತದ ತ್ಯಾಜ್ಯ ಸಂಗ್ರಹಣೆ, ದ್ವಿತೀಯ ಹಂತದಲ್ಲಿ ಸಂಗ್ರಹಣೆ, ಸಾಗಾಣಿಕೆ ಮತ್ತು ಸಂಸ್ಕರಣೆಗೆ ವಿವಿಧ ಮಾರ್ಗಸೂಚಿಗಳನ್ನು ಅನುಸರಿಸಬೇಕಾಗಿದ್ದು. ಇದಕ್ಕೆ ತಗಲುವ ಸೇವಾಶುಲ್ಕವನ್ನು ಪಾಲಿಕೆ ವ್ಯಾಪ್ತಿಯ ಗೃಹೋಪಯೋಗಿ ತ್ಯಾಜ್ಯ ಉತ್ಪಾದಕರಿಗೆ ಈಗಾಗಲೇ 2025-26ನೇ ಸಾಲಿನಲ್ಲಿ ಸಂಗ್ರಹಿಸಲು ಕ್ರಮವಹಿಸಲಾಗಿರುತ್ತದೆ. ಮುಂದುವರೆದು, ಪಾಲಿಕೆ ವ್ಯಾಪ್ತಿಯಲ್ಲಿನ ವಾಣಿಜ್ಯ ಕಟ್ಟಡಗಳ ತ್ಯಾಜ್ಯೋತ್ಪಾದಕರಿಂದ ಘನತ್ಯಾಜ್ಯ ನಿರ್ವಹಣೆಯ ಸೇವಾ ಶುಲ್ಕವನ್ನು ಸಂಗ್ರಹಿಸುವ ಮೂಲಕ ತ್ಯಾಜ್ಯವನ್ನು ಸಮರ್ಪಕವಾಗಿ ನಿರ್ವಹಿಸಬಹುದು ಹಾಗೂ ಪಾಲಿಕೆಗೆ ಆರ್ಥಿಕವಾಗಿ ಸಹಾಯಕವಾಗುತ್ತದೆ. ನಗರಾಭಿವೃದ್ಧಿ ಇಲಾಖೆಯಿಂದ ದಿನಾಂಕ: 09.10.2019 ರಂದು ಹೊರಡಿಸಲಾಗಿರುವ ಕರ್ನಾಟಕ ರಾಜ್ಯಪತ್ರದಲ್ಲಿ ಘನತ್ಯಾಜ್ಯ ನಿರ್ವಹಣಾ ಸೇವಾ ಶುಲ್ಕದ ಬಗ್ಗೆ ಉಲ್ಲೇಖಿಸಿರುವಂತೆ ಮೈಸೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿನ ವಾಣಿಜ್ಯ ಉದ್ದಿಮೆಗಳಿಗೆ ಘನತ್ಯಾಜ್ಯ ವಸ್ತು ನಿರ್ವಹಣಾ ಸೇವಾ ಶುಲ್ಕವನ್ನು ವಿಧಿಸಲು ದಿನಾಂಕ:16.03.2026 ರಂದು ನಡೆದ ಸಾಮಾನ್ಯ ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಲಾಗಿರುತ್ತದೆ. ಅದರಂತೆ 2026-27ನೇ ಸಾಲಿನ ಆರ್ಥಿಕ ವರ್ಷದಿಂದ ಅಂದರೆ ದಿನಾಂಕ: 01.04.2026ರಿಂದ ಉದ್ದಿಮೆ ರಹದಾರಿಯೊಂದಿಗೆ ಘನತ್ಯಾಜ್ಯ ನಿರ್ವಹಣಾ ಶುಲ್ಕದ ಸಂಗ್ರಹಿಸಲು ಕ್ರಮವಹಿಸಲಾಗಿದ್ದು, ಸಂಬಂಧಪಟ್ಟ ಮಾಹಿತಿಯನ್ನು ಪಾಲಿಕೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗುವುದು.

## ಸಖಿ ಫೌಂಡೇಶನ್ ವಾರ್ಷಿಕೋತ್ಸವ



ಮೈಸೂರು: ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ನ ಮೂರನೇ ವರುಷದ ವಾರ್ಷಿಕೋತ್ಸವ, ಸಖಿ ಸಂಭ್ರಮ, ವಿಶ್ವ ಮಹಿಳಾ ದಿನಾಚರಣೆ ಹಾಗೂ ಸ್ಫೂರ್ತಿ ಸಖಿ ಪ್ರಶಸ್ತಿ ಪ್ರಧಾನ ಸಮಾರಂಭವನ್ನು ಅದ್ಧೂರಿಯಾಗಿ ಆಚರಿಸಿದರು.

ರಾಮಕೃಷ್ಣನಗರದ ಕೆ.ಬ್ಲಾಕ್ ಸಿದ್ಧಿ ವಿನಾಯಕ ದೇವಸ್ಥಾನ ಸಭಾಂಗಣದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಸಮಾಜಸೇವಕ ಕೆ.ರಘುರಾಮ್ ವಾಜಪೇಯಿ ಮಾತನಾಡಿ, ಎಲ್ಲೆಡೆ ಯುದ್ಧ ಸನ್ನಿವೇಶದ ನಡುವೆಯೂ ಭಾರತೀಯರಾದ ನಾವು ಮಹಿಳಾ ದಿನದಂತಹ ಕಾರ್ಯಕ್ರಮವನ್ನು ಆಯೋಜಿಸಿದ್ದೇವೆ. ಮಹಿಳೆಯನ್ನು ನಮ್ಮ ಸಂಪ್ರದಾಯದಲ್ಲಿ ಮಾತೆಯರಿಗೆ ಪೂಜ್ಯನೀಯ ಸ್ಥಾನದಲ್ಲಿ ನೋಡುತ್ತಾ ಎಲ್ಲರನ್ನು ಗೌರವಿಸುವ ನಮ್ಮ ಮನಸ್ಥಿತಿ ಅರಿತುಕೊಳ್ಳಬೇಕಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಂಗಳಾ ಮುದ್ದುಮಾದಪ್ಪ, ಡಾ.ಲಕ್ಷ್ಮಿ, ನಂದಿನಿ ರಂಗನಾಥ್, ಹೇಮಮಾಲಾ, ವಾಣಿ ಸುಬ್ಬಯ್ಯ, ಪದ್ಮಾವೆಂಕಟೇಶ್, ಕೆರೋಡಿ ಲೋಲಾಕ್ಷಿ, ಲತಾಮೋಹನ್ ಅವರಿಗೆ ಸ್ಫೂರ್ತಿ ಸಖಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವಲಯ ಪ್ರಮುಖ್ ಡಾ.ವಿ.ರಂಗನಾಥ್ ಉದ್ಘಾಟಿಸಿದರು. ಕೆನರಾ ಬ್ಯಾಂಕ್ ನಿವೃತ್ತ ಶಾಖಾ ವ್ಯವಸ್ಥಾಪಕ ರಾಜರಾಮ್ ಭಟ್, ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ಸಂಸ್ಥಾಪನ ಕಾರ್ಯದರ್ಶಿ ಗಾಯಿತ್ರಿ ಸುಂದರೇಶ್ ಉಪಸ್ಥಿತರಿದ್ದರು.

## ನಾಳೆ ಶಿವಕುಮಾರ ಸ್ವಾಮೀಜಿ ಜಯಂತಿ



ಮೈಸೂರು: ಬಸವ ಬಳಗ ಮತ್ತು ಡಾ.ಶಿವಕುಮಾರ ಸ್ವಾಮೀಜಿ ಭಕ್ತ ವೃಂದದ ವತಿಯಿಂದ ಏ.1 ರಂದು ಬೆಳಗ್ಗೆ 9ಕ್ಕೆ ನಗರದ ಬಸವೇಶ್ವರ ಮುಖ್ಯ ರಸ್ತೆ 13 ನೇ ಅಡ್ಡ ರಸ್ತೆಯಲ್ಲಿ ತ್ರಿವಿಧ ದಾಸೋಹಿ ಡಾ. ಶಿವಕುಮಾರ ಸ್ವಾಮೀಜಿಯವರ 119 ನೇ ಜಯಂತ್ಯುತ್ಸವ ಆಯೋಜಿಸಲಾಗಿದೆ ಎಂದು ಅಧ್ಯಕ್ಷ ಸಿ.ಸಂದೀಪ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಶ್ರೀ ಹೊಸಮಠದ ಚಿದಾನಂದ ಸ್ವಾಮೀಜಿ, ಗುರುಶಾಂತ ಸ್ವಾಮೀಜಿ, ಇಮ್ಮಡಿ ಮಡಿವಾಳೇಶ್ವರ ಸ್ವಾಮೀಜಿ, ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಶ್ರೀಕಂಠ ಸ್ವಾಮೀಜಿ ಹಾಗೂ ಹರಗುರು ಚರಮೂರ್ತಿಗಳು ಸಾನ್ನಿಧ್ಯ ವಹಿಸಲಿದ್ದಾರೆ. ಇದೇ ವೇಳೆ ಇಲ್ಲಿಂದ ಹೊರಡುವ ಭವ್ಯ ಮೆರವಣಿಗೆ ವಿವಿಧ ರಸ್ತೆಗಳಲ್ಲಿ ಸಾಗಿ ಆರಂಭದ ಸ್ಥಳಕ್ಕೇ ತಲುಪಲಿದೆ. 10ಕ್ಕೆ ನುರಿತ ಕಲಾವಿದರಿಂದ ಸುಗಮ ಸಂಗೀತ ಇರಲಿದೆ. ಮಧ್ಯಾಹ್ನ 12ಕ್ಕೆ ಪ್ರಸಾದ ವಿನಿಯೋಗವಿದೆ ಎಂದು ಮಾಹಿತಿ ನೀಡಿದರು. ಅಂಬಳೆ ಶಿವಣ್ಣ, ಲೋಹಿತ್, ಮಹದೇವ್, ಶಂಕರ್ ಜೆ.ಪಿ. ನಗರ, ಪ್ರಭುಶಂಕರ್, ಮುಕುಂದರಾಜ್ ಅರಸ್ ಇದ್ದರು.

## ವಿದ್ಯುತ್ ವ್ಯತ್ಯಯ


ಮೈಸೂರು, ಮಾ.31( ಕರ್ನಾಟಕ ವಾರ್ತೆ):- ರಾಮಕೃಷ್ಣನಗರ ಉಪ ವಿಭಾಗದ 66/11 ಕೆ.ವಿ.ಆರ್.ಕೆ ನಗರ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಹೊಮ್ಮುವ 11 ಕೆ.ವಿ ಪರಮಹಂಸ ವಿದ್ಯುತ್ ಮಾರ್ಗದ ನಿರ್ವಹಣಾ ಕೆಲಸದ ನಿಮಿತ್ತ ಏಪ್ರಿಲ್ 01 ರಂದು ಬೆಳಗ್ಗೆ 10:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯವಾಗಲಿದೆ.




ವಿದ್ಯುತ್ ವ್ಯತ್ಯಯವಾಗುವ ಪ್ರದೇಶಗಳು:- ವಾಸು ಲೇಔಟ್, ಚರ್ಚ್ ಸುತ್ತಮುತ್ತ, ಕೆ ಬ್ಲಾಕ್, ಮಹದೇವ ಪಾರ್ಕ್ ಸುತ್ತಮುತ್ತ, ಜಯಲಕ್ಷ್ಮಿ ?ಮೇಕಾಲೇಜು ಸುತ್ತಮುತ್ತಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಚಾ.ವಿ.ಸ.ನಿ.ನಿ., ವಿ.ವಿ.ಮೊಹಲ್ಲಾ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ ಶಿಬಿರ

ಮೈಸೂರು:- ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐ.ಎ.ಎಸ್ ಮತ್ತು ಕೆ.ಎ.ಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50



ದಿನಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಏ.2 ರಂದು ಬೆಳಗ್ಗೆ 11 ಗಂಟೆಗೆ ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ರಾಜ್ಯದ ವಿವಿಧ ಜಿಲ್ಲೆಗಳಿಂದ 233 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಈ ತರಬೇತಿ ಶಿಬಿರಾರ್ಥಿಗಳಿಗೆ ಶುಭಹಾರೈಕೆಯನ್ನು ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀರೂಪ ಅವರು ನೆರವೇರಿಸುವರು. 'ಮುಕ್ತಭಂಡಾರ' ಅಧ್ಯಯನ ಪುಸ್ತಕವನ್ನು ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತ ಬಿ.ಎನ್. ವೀಣಾ ಅವರು ಬಿಡುಗಡೆ ಮಾಡಿ ಶುಭಹಾರೈಸುವರು. ಕುಲಪತಿ ಪ್ರೊ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ.ಎಸ್.ಕೆ ನವೀನ್‌ಕುಮಾರ್ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

### ಕೊಳ್ಳೇಗಾಲ ಸೆಸ್ಕಾಂ ಉಪವಿಭಾಗದ ಎಇಇ ಎಂ. ರಾಜು ನಿವೃತ್ತಿ

## ನಿವೃತ್ತಿಯಾದ ಸೆಸ್ಕ್ ಎಇಇ ಎಂ.ರಾಜು ಹೃದಯ ಸ್ಪರ್ಶಿ ಬೀಳ್ಕೊಡುಗೆ



ಕೊಳ್ಳೇಗಾಲ : ಸೇವೆಯಿಂದ ನಿವೃತ್ತಿ ಹೊಂದಿದ ಕೊಳ್ಳೇಗಾಲ ಸೆಸ್ಕಾಂ ಉಪವಿಭಾಗದ ಎಇಇ ಎಂ. ರಾಜು ಅವರಿಗೆ ಮಂಗಳವಾರ ಇಲಾಖೆ ವತಿಯಿಂದ ಹೃದಯಸ್ಪರ್ಶಿ ಬೀಳ್ಕೊಡುಗೆ ಹಮ್ಮಿ ಕೊಳ್ಳಲಾಗಿತ್ತು.

ಸೆಸ್ಕಾಂ ಉಪವಿಭಾಗ ಕಚೇರಿ ಸಭಾಂಗಣದಲ್ಲಿ ನಡೆದ ಬೀಳ್ಕೊಡುಗೆ ಸಮಾರಂಭದಲ್ಲಿ ಇಇ ತಬ್ಸಮ್ ಬಾನು ಅವರು, ಎಇಇ ರಾಜು ಅವರಿಗೆ ಗೌರವ ಸನ್ಮಾನ ಮಾಡುವ ಮೂಲಕ ಕರ್ತವ್ಯದಿಂದ ನಿವೃತ್ತಿ ಹೊಂದಿದೆ ರಾಜು ಅವರನ್ನು ಬೀಳ್ಕೊಟ್ಟರು.

ಈ ವೇಳೆ ಮಾತನಾಡಿದ ಅವರು,, ರಾಜು ಅವರ ಜೊತೆಗೆ ಕಳೆದ ಒಂದೂವರೆ ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ ಅವರಲ್ಲಿರುವ ತಾಳ್ಮೆ ಮತ್ತು ಸಹನೆ ನಿಜವಾಗಿಯೂ ಮೆಚ್ಚುವಂತಹದ್ದು ಎಂದರು. ಕೊಳ್ಳೇಗಾಲದಂತಹ ಸ್ಥಳದಲ್ಲಿ ರೈತ ವರ್ಗದವರನ್ನು ವಿಶ್ವಾಸಕ್ಕೆ ತೆಗೆದು ಕೊಂಡು ಕರ್ತವ್ಯ ನಿರ್ವಹಿಸಿ ಇಲಾಖೆಗೂ ಒಳ್ಳೆಯ ಹೆಸರು ತಂದಿದ್ದಾರೆ ಇವರ ಅವಧಿಯಲ್ಲಿ ಎರಡು ನೂತನ ಪವರ್ ಸ್ಟೇಷನ್ ಆಗಿದ್ದು ಸಂತಸ. ಎಲ್ಲಾ ಕಾಲದಲ್ಲಿಯೂ ಇವರ ಹೆಸರು ಅಜರಾಮರವಾಗಿರುತ್ತದೆ ಎಂದರು.

ಇಲಾಖೆಯ ಇನ್ನಿತರ ಅಧಿಕಾರಿಗಳು ಮಾತನಾಡಿದರು. ನಿಮ್ಮ ಸುದೀರ್ಘ 32 ವರ್ಷದ ಸೇವೆಯಲ್ಲಿ ಏನೊಂದು ಕಪ್ಪು ಚುಕ್ಕೆ ಇಲ್ಲದೆ ಸೇವೆ ಸಲ್ಲಿಸಿರುವುದು ಹೆಗ್ಗಳಿಕೆ ಎಂದರು. ನಿಮ್ಮ ಮಾರ್ಗದರ್ಶನ ನಮಗೆ ಇನ್ನೂ ಮುಖ್ಯ ಎಂದರು.

ನಿವೃತ್ತಿ ಸನ್ಮಾನ ಸ್ವೀಕರಿಸಿದ ಎಇಇ ಎಂ ರಾಜು ಅವರು ಮಾತನಾಡಿ, ನನಗೆ ನಿಮ್ಮೆಲ್ಲರ ಈ ಪ್ರೀತಿ ಮತ್ತು ವಿಶ್ವಾಸ ಕಂಡು ಮಾತನಾಡಲೇ ಆಗುತ್ತಿಲ್ಲ ಎಂದು ಭಾವುಕರಾದರು. ಬಡತನದಲ್ಲಿ ಬೆಳೆದ ನಾನು ತಂದೆ ತಾಯಿಗಳ ಹಾದಿಯಲ್ಲಿ ನಡೆದೆ. ಕುಟುಂಬದ ಜೊತೆಗೆ ಕರ್ತವ್ಯದಲ್ಲೂ ಉತ್ತಮವಾಗಿ ಸೇವೆ ಸಲ್ಲಿಸಿದ ತೃಪ್ತಿ ನನಗೆ ಇದೆ ಎಂದರು. ನಿವೃತ್ತಿ ನಂತರವೂ ಇಲಾಖೆಗೆ ಗೌರವ ತರುವ ಕೆಲಸದಲ್ಲಿ ತೊಡಗಿಸಿ ಕೊಳ್ಳುತ್ತೇನೆ ಎಂದರು.

ರೈತ ಸಂಘದ ಮುಖಂಡ ಬಸವರಾಜ್ ಅವರು ರಾಜು ಅವರಿಗೆ ಪುಷ್ಪಾಭಿಷೇಕ ಮಾಡಿದರು. ನಂತರ ನೀವು ಕರೆಂಟ್ ಕೊಟ್ಟಿದ್ದರಿಂದ ನಮಗೆ ಒಳ್ಳೆಯ ಬೆಳೆ ಬಂದಿದೆ ಎಂದು ಹೇಳಿ ಸಣ್ಣ ಈರುಳ್ಳಿ ಗಿಫ್ಟ್ ಆಗಿ ನೀಡಿದ್ದು ವಿಶೇಷವಾಗಿತ್ತು.

ಸಮಾರಂಭದಲ್ಲಿ ವಿವಿಧ ಸಂಘ ಸಂಸ್ಥೆಗಳ ಮುಖಂಡರು ರೈತ ಮುಖಂಡರು ಇಲಾಖೆಯ ಸಿಬ್ಬಂದಿ ಮತ್ತು ನೌಕರರು ಹಾಗೂ ಕುಟುಂಬ ವರ್ಗದವರು ಶಾಲು ಹಾರ ಪೇಟ ಹಾಕಿ ಸನ್ಮಾನಿಸಿದರು.

ಈ ಸಂದರ್ಭದಲ್ಲಿ ಎಇಇ ಲಿಂಗರಾಜು, ರಂಗಸ್ವಾಮಿ, ಸಂತೋಷ್ ಕುಮಾರ್, ಶ್ರೀನಿಧಿ, ಲೆಕ್ಕಾಧಿಕಾರಿ ವಿನೋದ್ ಕುಮಾರ್, ಆಂತರಿಕ ಲೆಕಾಧಿಕಾರಿ ಪ್ರಸನ್ನ, ನೌಕರರ ಸಂಘದ ಅಧ್ಯಕ್ಷ ರೇವಣ್ಣ, ಕಾರ್ಯಕಾರಿ ಸಮಿತಿ ಸದಸ್ಯ ಮಹದೇವಯ್ಯ, ಗುತ್ತಿಗೆದಾರ ಸಂಘದ ಅಧ್ಯಕ್ಷ ನಾಗರಾಜು, ಹಾಗೂ ಎಇಇ ರಾಜು ಅವರ ತಂದೆ ಮಾದಯ್ಯ ಇನ್ನಿತರರು ಇದ್ದರು.

# ಪ್ರೊ.ಆನಂದ್ ಕುಲಪತಿ ಹುದ್ದೆಗೆ ಅರ್ಜಿ ಹಾಕಲಿ

## ಪ್ರೊ.ಎನ್.ಕೆ.ಲೋಕನಾಥ್ ಹೇಳಿಕೆ | ಬೀಳ್ಕೊಡುಗೆ ಸಮಾರಂಭ




ಮೈಸೂರು: ಪ್ರೊ.ಡಿ.ಆನಂದ್ ಅವರು ಕುಲಪತಿಗಳಾಗಲು ಎಲ್ಲಾ ಅರ್ಹತೆ ಇದ್ದರೂ ಅವರು ಕುಲಪತಿಗಳಾಗಲು ಅರ್ಜಿಯನ್ನೇ ಹಾಕಿಲ್ಲ. ಹೀಗಾಗಿ ಮುಂದಿನ ದಿನಗಳಲ್ಲಿ ಹಾಗೂ ಕುಲಪತಿಗಳಾಗಲೂ ಆಸಕ್ತಿ ಇದ್ದಲ್ಲಿ ಅರ್ಜಿಯನ್ನು ಹಾಕಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಹೇಳಿದರು.

ನಗರದ ಮಾನಸಗಂಗೋತ್ರಿಯ ರಾಣಿಬಹದ್ದೂರ್ ಸಭಾಂಗಣದಲ್ಲಿ ಬ್ಯುಸಿನೆಸ್ ಅಡ್ಮಿನಿಸ್ಟ್ರೇಷನ್ ಸ್ಟಡಿ ವಿಭಾಗದಿಂದ ಮಂಗಳವಾರ ನಡೆದ ಪ್ರೊ.ಡಿ.ಆನಂದ್ ಅವರಿಗೆ ಏರ್ಪಡಿಸಲಾಗಿದ್ದ ಬೀಳ್ಕೊಡುಗೆ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದರು. ತರಗತಿಗಳಿಗೆ ಬಂದು ಪಾಠ ಮಾಡುವ ಪ್ರೊಫೆಸರ್‌ಗಳು ಕಡಿಮೆಯಾಗುತ್ತಿರುವ ಸಂದರ್ಭದಲ್ಲಿ ಪ್ರೊ.ಆನಂದ್ ಗೆ ಯಾವುದೇ ಸಮಸ್ಯೆ ಇದ್ದರೂ, ಎಷ್ಟೇ ಒತ್ತಡ ಇದ್ದರೂ ಕೂಡ ತರಗತಿಗೆ ಬಂದು ಪಾಠ ಮಾಡುತ್ತಿದ್ದರು. ಹೀಗಾಗಿ ವಿದ್ಯಾರ್ಥಿಗಳಿಗೆ ಪ್ರೊ.ಆನಂದ್ ಅವರೇ ರೋಲ್‌ಮಾಡೆಲ್ ಆಗಿದ್ದಾರೆ. ಎಷ್ಟೋ ಶಿಕ್ಷಕರು ಕೆಲಸ ಕೊಟ್ಟರೆ ಸರಿಯಾಗಿ ಮಾಡುವುದಿಲ್ಲ. ಆದರೆ, ಆನಂದ್ ಅದನ್ನು ಮೀರಿ ಕೆಲಸ ಮಾಡಿದವರು. ಪ್ರೊ‌ಆನಂದ್ ಅವರ ಹಲವಾರು ಶಿಷ್ಯರು ಇಂದು ದೊಡ್ಡ ದೊಡ್ಡ ಉನ್ನತ ಹುದ್ದೆಗಳಲ್ಲಿದ್ದಾರೆ. ಅದಕ್ಕಿಂತ ಒಬ್ಬ ಗುರು ಏನನ್ನೂ ಬಯಸುವುದಿಲ್ಲ. ಅವರನ್ನು ಹೆಚ್ಚಿನ ಹುದ್ದೆಯಲ್ಲಿ ನೋಡುವುದು ನಮ್ಮೆಲ್ಲರ ಆಸೆ. ಹಲವಾರು ಮಾರ್ಗದರ್ಶನ ನೀಡಿರುವ ಪ್ರೊ.ಡಿ.ಆನಂದ್ ಸ್ಮರಣೆಯನ್ನು ಯಾವಾಗಲೂ ಮಾಡುತ್ತೇನೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಹಿರಿಯ ಪ್ರಾಧ್ಯಪಕ ಪ್ರೊ.ಎಸ್.ಜೆ.ಮಂಜುನಾಥ್, ವಿಶ್ರಾಂತ ಪ್ರಾಧ್ಯಪಕ ಪ್ರೊ.ಬಿ.ಶಿವರಾಜ್, ಮೈಸೂರು ವಿಶ್ವವಿದ್ಯಾನಿಲಯದ ಪರಿಕ್ಷಾಂತ ರಿಜಿಸ್ಟಾರ್ ಪ್ರೊ.ಎನ್.ನಾಗರಾಜ್ ಸೇರಿ ಇತರರು ಹಾಜರಿದ್ದರು.

### ವಿದೇಶಗಳಲ್ಲೂ ಫಲಾನುಭವಿಗಳು

ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ.ಸವಿತಾ ಮಾತನಾಡಿ, ವಿವಿಧ ಕ್ಷೇತ್ರಗಳಲ್ಲಿ ವಿವಿಧ ವಿಭಾಗಳಲ್ಲಿ ಪ್ರೊ.ಡಿ.ಆನಂದ್ ಅವರು ತಮ್ಮ ಛಾಪನ್ನು ಬೆಳೆಸಿಕೊಂಡಿದ್ದಾರೆ. ವಿದೇಶದಲ್ಲಿರುವ ಎಷ್ಟೋ ವಿದ್ಯಾರ್ಥಿಗಳು ಇವರ ಫಲಾನುಭವಿಗಳಾಗಿದ್ದಾರೆ. ಹಾಗೆಯೇ ಕರ್ನಾಟಕ ಆಡಳಿತ ಸೇವೆ ಹಾಗೂ ಕೇಂದ್ರ ಆಡಳಿತ ಸೇವೆ ಇವರ ಸೇವೆಯನ್ನು ಅತ್ಯುತ್ತಮವಾಗಿ ಬಳಸಿಕೊಂಡಿದೆ. ಪ್ರೊ.ಡಿ.ಆನಂದ್ ರನ್ನು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಭೀಷ್ಮ, ದ್ರೋಣಾಚಾರ್ಯ ಎನ್ನಬೇಕೋ ಗೊತ್ತಿಲ್ಲ ಆದರೆ ಅವರ ವ್ಯಕ್ತಿತ್ವ ಹಾಗೆಯೇ ಕಾಣಿಸುತ್ತದೆ. ಸುಮಾರು 40 ಬ್ಯಾಚಿನ ವಿದ್ಯಾರ್ಥಿಗಳನ್ನು ಸೃಷ್ಟಿಸಿದ್ದಾರೆ. ಸಾಕಷ್ಟು ವಿಭಾಗಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ ಎಂದರು.

# ಸಾಧಕರಿಗೆ ಕರವೇ ಸ್ವಾಭಿಮಾನಿ ಬಳಗ ಸನ್ಮಾನ



ಮೈಸೂರು: ವಿವಿಧ ಕ್ಷೇತ್ರದ 10ಕ್ಕೂ ಹೆಚ್ಚು ಮಂದಿಯನ್ನು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದಿಂದ ನಗರದ ರೋಟರಿ ಸಭಾಂಗಣದಲ್ಲಿ ಸನ್ಮಾನಿಸಲಾಯಿತು.

ಕಾರ್ಯಕ್ರಮದ ಮುಖ್ಯ ಅತಿಥಿಗಳು ಮೈಸೂರು ವಿಶ್ವವಿದ್ಯಾನಿಲಯ ಪ್ರಾಧ್ಯಾಪಕಿ ಡಾ.ಕೆ.ಸೌಭಾಗ್ಯವತಿ ಮಹಿಳೆಯರು ಇಂದು ಆಟೋಚಾಲಕರು ಸೇರಿ ಎಲ್ಲಾ ರಂಗದಲ್ಲಿಯೂ ಇದ್ದಾರೆ. ಇನ್ನೂ ಹೆಚ್ಚಾಗಿ ಸಮಾಜದಲ್ಲಿ ಮುನ್ನಲೆಗೆ ಬರಬೇಕಿದೆ. ಈ ದಿಸೆಯಲ್ಲಿ ಮಹಿಳೆಯರ ಸಾಧನೆ ಸ್ವಾಗತಾರ್ಹ. ಅಂತಹವರನ್ನು ಗುರುತಿಸಿ ಸನ್ಮಾನಿಸುತ್ತಿರುವುದು ಸ್ವಾಗತಾರ್ಹ ಎಂದು ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಳಗದ ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಎಂ.ಲಿಂಗರಾಜು ಮಾತನಾಡಿ, ಸಂಘಟನೆ ಇದುವರೆವಿಗೂ ಪಾರದರ್ಶಕವಾಗಿ ಸಮಾಜಮುಖಿ ಕಾರ್ಯ ಮಾಡುತ್ತಾ ಬಂದಿದೆ. ಅದರಲ್ಲೂ ಶೇ.50ಕ್ಕಿಂತ ಹೆಚ್ಚು ಮಂದಿ ಮಹಿಳೆಯರು ಸಂಘಟನೆಯಲ್ಲಿರುವುದು ನಮಗೆ ಹೆಮ್ಮೆಯ ಸಂಗತಿಯಾಗಿದೆ. 10 ಜಿಲ್ಲೆಗಳಲ್ಲಿ ಪದಾಧಿಕಾರಿಗಳನ್ನು ಹೊಂದಿರುವ ಸಂಘಟನೆಯನ್ನು ಮುಂದಿನ ದಿನಗಳಲ್ಲಿ 30ಜಿಲ್ಲೆಗಳಿಗೂ ವಿಸ್ತರಿಸಲಾಗುವುದು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಪರಿವೀಕ್ಷಣಾಧಿಕಾರಿ ಡಾ.ಕೆ.ಕೃಷ್ಣಕುಮಾರಿ, ಜಿಪಂ ಮಾಜಿ ಸದಸ್ಯ ಬೀರಿಹುಂಡಿ, ಮಾಜಿ ಮಹಾಪೌರ ಪುಷ್ಪಲತಾ ಚಿಕ್ಕಣ್ಣ ಮಾತನಾಡಿದರು. ಕಾರ್ಯಕ್ರಮದಲ್ಲಿ ಡಾ.ಪ್ರಿಯಾಂಕ ರವಿಕುಮಾರ್(ವೈದ್ಯ), ಮಾಲಿನಿ ಪಾಲಕ್ಷ(ಸಮಾಜ ಸೇವಕ), ಸವಿತಾಬಾಯಿ(ಶಿಕ್ಷಕ), ಸೌಮ್ಯ( ಆಟೋ ಚಾಲಕಿ), ಪೌರ ಕಾರ್ಮಿಕರಾದ ಭವಾನಿ, ರಾಧ, ಬನ್ನಮ್ಮ, ಮಮತ, ಶ್ರೀದೇವಿ, ಕುಪ್ಪಮ್ಮ, ಲಕ್ಷ್ಮಿ ಇನ್ನಿತರರನ್ನು ಸನ್ಮಾನಿಸಲಾಯಿತು. ಇದೇ ವೇಳೆ ವೇದಿಕೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಆರ್.ಚರಣ್ ರಾಜ್, ರಾಜ್ಯ ಉಪಾಧ್ಯಕ್ಷರಾಗಿ ಆನಂದಕುಮಾರ್ ಗೌಡ, ಎಂ.ಮಲ್ಲೇಶ್, ರಾಜ್ಯ ಖಜಾಂಚಿಯಾಗಿ ಮಹದೇವಸ್ವಾಮಿ, ರಾಜ್ಯ ಸಂಚಾಲಕರಾಗಿ ಕರಿಯಪ್ಪ, ಜಿಲ್ಲಾಧ್ಯಕ್ಷರಾಗಿ ಮೈತ್ರಿರಾಜ್, ಉಪಾಧ್ಯಕ್ಷೆಯಾಗಿ ಉಷಾ, ಪ್ರಧಾನ ಕಾರ್ಯದರ್ಶಿಯಾಗಿ ಸೌಮ್ಯ, ಸದಸ್ಯರಾಗಿ ಎಂ.ಶಶಿಕಲ ಅಧಿಕಾರ ಸ್ವೀಕರಿಸಿದರು. ಮಹಿಳಾ ಘಟಕದ ರಾಜ್ಯಾಧ್ಯಕ್ಷೆ ಕಮಲನಟರಾಜ್ ಉಪಸ್ಥಿತರಿದ್ದರು.

*ಜನಗಣತಿ–2027

## ಏ.01 ರಿಂದ 15 ವರೆಗೆ ಸ್ವಯಂ–ಗಣತಿಯಲ್ಲಿ ಪಾಲ್ಗೊಳ್ಳಲು ಅವಕಾಶ

ಮೈಸೂರು:– ಜನಗಣತಿ–2027 ರ ಅಂಗವಾಗಿ ಸಾರ್ವಜನಿಕರು ಸುರಕ್ಷಿತ ವೆಬ್ ಪೋರ್ಟಲ್ ಮೂಲಕ ಸ್ವಯಂ– ಗಣತಿಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಲಾಗಿದ್ದು ಜಿಲ್ಲೆಯ ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಜನಗಣತಿಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮೀಕಾಂತ ರೆಡ್ಡಿ ಜಿ ಅವರು ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ಮನೆ ಪಟ್ಟಿ ಮತ್ತು ಮನೆಗಣತಿ ಕಾರ್ಯವು ಏಪ್ರಿಲ್ 16 ರಿಂದ ಆರಂಭವಾಗಲಿದ್ದು, ಇದಕ್ಕೂ ಮುನ್ನ 15 ದಿನಗಳ ಮುಂಚಿತವಾಗಿ ಅಂದರೆ ದಿನಾಂಕ: 01.04.2026 ರಿಂದ 15.04.2026 ವರೆಗೆ ಸ್ವಯಂ ಗಣತಿಗೆ ಅವಕಾಶ ಕಲ್ಪಿಸಲಾಗಿದೆ.

ಸಾರ್ವಜನಿಕರು ಸ್ವಯಂ ಗಣತಿಗಾಗಿ ವೆಬ್ ಸೈಟ್ ವಿಳಾಸ se.census.gov.in ಬಳಸಿಕೊಂಡು ಲಾಗ್ ಇನ್ ಆಗಿ ಮನೆಗಳ ಪಟ್ಟಿ ಮತ್ತು ವಸತಿ ಗಣತಿ ಸಂಬಂಧ ಕೇಳಲಾಗುವ 33 ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ಸಾರ್ವಜನಿಕರು ಸ್ವಯಂ ಗಣತಿ ಮಾಹಿತಿಯನ್ನು ಯಶಸ್ವಿಯಾಗಿ ಸಲ್ಲಿಸಿದ ನಂತರ ಖಒಖ ಮತ್ತು ಈ ಮೇಲ್ ಪೋರ್ಟಲ್ ಗೆ ರೆಫರೆನ್ಸ್ ಐ.ಡಿ ಸ್ವೀಕೃತವಾಗುತ್ತದೆ.

ಗಣತಿದಾರರು ಮನೆಗೆ ಭೇಟಿ ನೀಡಿದಾಗ ರೆಫರೆನ್ಸ್ ಐ.ಡಿ ನೀಡುವ ಮೂಲಕ ಗಣತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಬೇಕಿರುತ್ತದೆ. ಒಂದು ವೇಳೆ ರೆಫರೆನ್ಸ್ ಐ.ಡಿ ನೀಡದಿದ್ದರೆ ಗಣತಿದಾರರು ಮೊದಲಿನಿಂದಲೂ ಎಲ್ಲಾ ಪ್ರಶ್ನೆಗಳನ್ನು ಕೇಳಿ ಹೊಸದಾಗಿ ಗಣತಿ ಮಾಡಬೇಕಿರುತ್ತದೆ.

ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವುದರಿಂದ ಗಣತಿದಾರರು ಬಂದಾಗ ಆಗುವ ಸಮಯ ವ್ಯಯವನ್ನು ತಪ್ಪಿಸಬಹುದಾಗಿದೆ. ಜಿಲ್ಲೆಯ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂ ಗಣತಿಯಲ್ಲಿ ಪಾಲ್ಗೊಳ್ಳುವಂತೆ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಸ್ಕ್ರಾಪ್ ಮತ್ತು ಕಚ್ಚಾ ಸಾಮಾಗ್ರಿಗಳ ಬಹಿರಂಗ ಹರಾಜು

ಮೈಸೂರು:– ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ವಿಶ್ವೇಶ್ವರನಗರ, ಮೈಸೂರು ಸಂಸ್ಥೆಯಲ್ಲಿ ತರಬೇತಿಗೆ ಉಪಯೋಗಿಸಿ ನಿರುಪಯುಕ್ತವಾಗಿರುವ ಫಿಟ್ಟರ್ ಮತ್ತು ವಿದ್ಯುತ್ಕರ್ಮಿ ವಿಭಾಗದ ಎಂ.ಎಸ್. ಸ್ಕ್ರಾಪ್ ಮತ್ತು ಕಚ್ಚಾ ಸಾಮಾಗ್ರಿಗಳನ್ನು ಪ್ರಾಚಾರ್ಯರು, ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ, ಖಿಲ್ಲೇಮೊಹಲ್ಲಾ, ಮೈಸೂರು–04 ರವರ ಕಛೇರಿ ಆವರಣದಲ್ಲಿ ಏಪ್ರಿಲ್ 15 ರಂದು ಬೆಳ್ಳಿಗೆ 11:00 ಘಂಟೆಗೆ ಚಡಾಸವಾಲ್ ನಲ್ಲಿ ಬಹಿರಂಗ ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತದೆ.

ಆಸಕ್ತಿಯುಳ್ಳವರು ಬಹಿರಂಗ ಹರಾಜಿನಲ್ಲಿ ಭಾಗವಹಿಸುವುದು ಹಾಗೂ ಸಂಸ್ಥೆಯ ಕಛೇರಿ ವೇಳೆಯಲ್ಲಿ ಎಲ್ಲಾ ನಿರುಪಯುಕ್ತ ವಸ್ತುಗಳನ್ನು ಪರಿಶೀಲಿಸಲು ಅವಕಾಶವಿರುತ್ತದೆ. ಅತಿ ಹೆಚ್ಚು ಬಿಡ್ಡುದಾರರಿಗೆ ನಿರುಪಯುಕ್ತ ವಸ್ತುಗಳನ್ನು ವಿತರಿಸಲಾಗುವುದು ಎಂದು ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಪರೀಕ್ಷಾ ತರಬೇತಿ ಶಿಬಿರ

ಬೆಂಗಳೂರು: ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರದ ವತಿಯಿಂದ ಐಎಎಸ್ ಮತ್ತು ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ 50 ದಿನಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭವನ್ನು ಏಪ್ರಿಲ್ 02 ರಂದು ಕರಾಮುವಿಯ ಕಾವೇರಿ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ರಾಜ್ಯದ ವಿವಿಧ ಜಿಲ್ಲೆಗಳಿಂದ 233 ಅಭ್ಯರ್ಥಿಗಳು ತರಬೇತಿ ಪಡೆಯುತ್ತಿದ್ದಾರೆ. ಈ ತರಬೇತಿ ಶಿಬಿರಾರ್ಥಿಗಳಿಗೆ ಶುಭಹಾರೈಕೆಯನ್ನು ಚಾಮರಾಜನಗರ ಜಿಲ್ಲಾಧಿಕಾರಿ ಶ್ರೀರೂಪ ಅವರು ನೆರವೇರಿಸುವರು. 'ಮುಕ್ತಭಂಡಾರ' ಅಧ್ಯಯನ ಪುಸ್ತಕವನ್ನು ಮೈಸೂರು ಮಹಾನಗರ ಪಾಲಿಕೆಯ ಹೆಚ್ಚುವರಿ ಆಯುಕ್ತೆ ಬಿ.ಎನ್. ವೀಣಾ ಅವರು ಬಿಡುಗಡೆ ಮಾಡಿ ಶುಭಹಾರೈಸುವರು. ಕುಲಪತಿ ಪ್ರೊ?ರ. ಶರಣಪ್ಪ ವಿ. ಹಲಸೆ ಅಧ್ಯಕ್ಷತೆ ವಹಿಸುವರು. ಕುಲಸಚಿವ ಪ್ರೊ?ರ.ಎಸ್.ಕೆ ನವೀನ್‌ಕುಮಾರ್ ಉಪಸ್ಥಿತರಿರುವರು ಎಂದು ಕೇಂದ್ರದ ಸಂಯೋಜನಾಧಿಕಾರಿ ಜೈನಹಳ್ಳಿ ಸತ್ಯನಾರಾಯಣಗೌಡ ತಿಳಿಸಿದ್ದಾರೆ.

# ಮಹಿಳೆಯರ ಶಕ್ತಿ ಈ ಜಗತ್ತಿನ ಶಕ್ತಿ

## ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾನಿರ್ದೇಶಕ ವೆಂಕಟೇಶ್ ಹೇಳಿಕೆ



ಚಾಮರಾಜನಗರ, ಮಹಿಳೆಯರ ಶಕ್ತಿ ಈ ಜಗತ್ತಿನ ಶಕ್ತಿ ಎಂದು ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾನಿರ್ದೇಶಕ ವೆಂಕಟೇಶ್ ಹೇಳಿದರು.

ನಗರದ ವರ್ತಕರ ಭವನದಲ್ಲಿ ಕರ್ನಾಟಕ ಸರ್ಕಾರ ಪ್ರದೇಶ ಮಟ್ಟದ ಒಕ್ಕೂಟಗಳು (ಡೇ–ನಲ್ಮ್) ನಗರಸಭೆ, ಚಾಮರಾಜನಗರ ಮತ್ತು ಜಿಲ್ಲಾ ನಗರಾಭಿವೃದ್ಧಿ ಕೋಶ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಇವರ ಸಹಯೋಗದಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಸಮಾರಂಭ ವನ್ನು ಉದ್ಘಾಟಿಸಿ ಮಾತನಾಡಿದರು. ಮಹಿಳಾ ದಿನಾಚರಣೆ ಪ್ರತಿವರ್ಷ ನವೆಂಬರ್ ತಿಂಗಳನ್ನು ಕನ್ನಡ ತಿಂಗಳು ಎಂದು ಇಡೀ ಕನ್ನಡಿಗರೆಲ್ಲ ಮನಮನೆಗಳಲ್ಲಿ ವಿಜೃಂಭಣೆಯಿಂದ ಆಚರಿಸುತ್ತೇವೆ. ಹಾಗೆಯೇ ಮಾರ್ಚ್ ತಿಂಗಳನ್ನು ಮಹಿಳಾ ದಿನಾಚರಣೆಯನ್ನಾಗಿ ಆಚರಿಸುತ್ತೇವೆ. ಅಂತರಾಷ್ಟ್ರೀಯ ಆಚರಿಸುತ್ತೇವೆ, ಏಕೆ ಎಲ್ಲ ಮಹಿಳೆಯರನ್ನು ಒಂದು ಕಡೆ ಸೇರಿ ಮಹಿಳೆಯರನ್ನು ಕುರಿತು ಮಾತನಾಡುತ್ತೇವೆ ಎಂದರೆ ಮಹಿಳೆಯರ ಶಕ್ತಿ ಈ ಜಗತ್ತಿನ ಶಕ್ತಿ. ಎಲ್ಲಿ ಮಹಿಳೆಯರ ಮುಖದಲ್ಲಿ ನಗು, ಸಂತಸ, ಸೋಜಿಗ, ಸಂಭ್ರಮ ಕಾಣತ್ತೋ ಆದಿನ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅದು ಇವತ್ತು ಇಲ್ಲಿ ನಮಗೆ ಭಾಸವಾಗುತ್ತಾ ಇದೆ ಎಂದರು.

1910ರಲ್ಲಿ ಅಮೇರಿಕಾ ದೇಶದಲ್ಲಿ ಕಾರ್ಮಿಕ ಒಕ್ಕೂಟದ ಮೂಲಕ ಆರಂಭವಾದ ಮಹಿಳಾ ಚಳವಳಿ ಹೋರಾಟ ನಡೆದು ಮಹಿಳೆಯರ ತ್ಯಾಗ, ಬಲಿದಾನ, ಮಹಿಳಾಸಬಲೀಕರಣಗಳ ಕುರಿತು ಮಾತನಾಡಬೇಕು ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆ ಅಬಲೆಯಲ್ಲ ಸಬಲೆ, ಮಹಿಳೆ ಮನೆಗೆ, ಪುರುಷ ಹೊಲಕ್ಕೆ ಎಂಬ ಮಾತು ಸುಳ್ಳಾಗಬೇಕು, ಮಹಿಳೆಯರ ಸಬಲೀಕರಣ ಆಗಬೇಕು. ಮಹಿಳೆಯರು ಯಾವ ಹಂತದಲ್ಲಿ ದಾಪುಗಾಲು ಇಟ್ಟಿದ್ದಾರೆ ಎಂಬುವುದನ್ನು ಸಾಬೀತುಪಡಿಸಬೇಕು, ಮಹಿಳೆಯರನ್ನು ಗುಣಗಾನ ಮಾಡಬೇಕು ಎಂಬ ವಿಚಾರವನ್ನಿಟ್ಟುಕೊಂಡು 1975ರಲ್ಲಿ ವಿಶ್ವಸಂಸ್ಥೆಯು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಜಾರಿಗೆ ತಂದಿದ್ದು, ಅಲ್ಲಿಂದ ಇಲ್ಲಿಯವರಗೆ ಮಾರ್ಚ್ 8 ನ್ನು ಅಂತಾರಾಷ್ಟ್ರೀತಂ ಮಹಿಳಾ ದಿನಾಚರಣೆಯನ್ನಾಗಿ ಆಚರಿಸುತ್ತಾ ಇಡೀ ಮಾರ್ಚ್ ತಿಂಗಳಲ್ಲಿ ಸರ್ಕಾರ, ಸರ್ಕಾರೇತರ ಸಂಸ್ಥೆಗಳು ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಆಚರಿಸಿಕೊಂಡು ಬರುತ್ತಿವೆ ಎಂದರು. ಬಸವರಾಜೇಂದ್ರ ಆಸ್ಪತ್ರೆಯ ಸ್ತ್ರೀರೋಗ ತಜ್ಞ ಡಾ.ಶ್ವೇತಾ ಶಶಿಧರ್ ಮಾತನಾಡಿ, ದಿನಾಚರಣೆ ಮಾರ್ಚ್ ಒಂದು ತಿಂಗಳಲ್ಲ, ಪ್ರತಿದಿನವು ಮಹಿಳಾ ದಿನಾಚರಣೆ. ಮಹಿಳೆ ಇಲ್ಲದೆ ಬಾಳು ಇಲ್ಲ. ಮಹಿಳೆ ಇದ್ದರೆ ಎಲ್ಲವೂ ಸಾಕಾರವಾಗುತ್ತದೆ. ಇಡೀ ಸಂಸಾರ ಆಧರಿತವಾಗಿರುವುದು ಹೆಣ್ಣಿನಿಂದ. ಹೆಣ್ಣು ಇದ್ದರೆ ಇಡೀ ಸಂಸಾರದ ಕಣ್ಣು ಆಗುತ್ತಾಳೆ. ಹೆಣ್ಣು ಇಲ್ಲದಿದ್ದರೆ ಇಡೀ ಸಂಸಾರವೇ ಅಸ್ತವ್ಯಸ್ತವಾಗುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ನಗರಸಭಾ ಪೌರಾಯುಕ್ತ ಪರಶುರಾಮ್‌ಛಲವಾದಿ ಮಾತನಾಡಿ, ಮಹಿಳೆ ಅಬಲೆಯಲ್ಲ ಸಬಲೆಯಾಗಿದ್ದು ನಾಲ್ಕು ಗೋಡೆಗೆ ಸೀಮಿತವಾಗದೆ ಇಂದು ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿದ್ದು, ಸಾಧನೆ ಮಾಡುತ್ತಿದ್ದಾರೆ ಎಂದು ತಿಳಿಸಿದರು

### ಸನ್ಮಾನ

ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಸುರೇಖಾ, ಕಾರ್ಯಪಾಲಕ ಅಭಿಯಂತರಾದ ರೂಪ, ಸಿಪಿಆರ್ ಗಳಾದ ಜ್ಯೋತಿ, ನರ್ಗೀಸ್ ಭಾನು, ರೂಪ ಅವರನ್ನು ಸನ್ಮಾನಿಸಲಾಯಿತು.

ಸಮುದಾಯ ಸಂಘಟನಾ ಅಧಿಕಾರಿ ವೆಂಕಟನಾಯಕ್ ಸ್ವಾಗತ ಭಾಷಣ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಕೌಶಲ್ಯಾಭಿವೃದ್ಧಿ ಅಧಿಕಾರಿ ಇಲಾಖೆ ವಿಜಯ, ಸಹಾಯಕ ನಿರ್ದೇಶಕ ಮಲ್ಲೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರಾದ ರಾಮಚಂದ್ರ, ಶ್ರೀನಿವಾಸ, ರೂಪ,ಲೀಡ್ ಬ್ಯಾಂಕ್ ಮುಖ್ಯ ವ್ಯವಸ್ಥಾಪಕ ಸುರೇಖಾ, ನಗರ ಮಟ್ಟದ ಒಕ್ಕೂಟದ ಅಧ್ಯಕ್ಷರಾದ ರೂಪ, ಕಮಲ ಹಾಗೂ ಅಭಿಯಾನ ವ್ಯವಸ್ಥಾಪಕರು, ಸಮುದಾಯ ಸಂಘಟನಾಧಿಕಾರಿಗಳು, ಮಲ್ಟಿ ಟಾಸ್ಕಿಂಗ್ ಆಫೀಸಿಯಲ್ಸ್ ಮತ್ತು ಒಕ್ಕೂಟಗಳ ಎಲ್ಲಾ ಪದಾಧಿಕಾರಿಗಳು ಹಾಜರಿದ್ದರು.

## ಸೌಮ್ಯ ಮಂಜುನಾಥ್ ಗೆ ಶಿವಶರಣೆ ಅಕ್ಕಮ್ಮ ಪ್ರಶಸ್ತಿ



ಎಚ್.ಡಿ.ಕೋಟೆ: ಸಮಾಜ ಸೇವೆ ಹಾಗೂ ಮಹಿಳಾ ಸಂಘಟನೆಯಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರಿಗೆ ಬ್ರಹ್ಮಶ್ರೀ ನಾರಾಯಣ ಗುರು ಟ್ರಸ್ಟ್ ನ ರಾಜ್ಯ ಮಹಿಳಾ ಸಂಘಟನೆ ವತಿಯಿಂದ ನೀಡುವ ಶಿವಶರಣೆ ಅಕ್ಕಮ್ಮ ರಾಜ್ಯ ಪ್ರಶಸ್ತಿಯ 2026–27ನೆ ಸಾಲಿಗೆ ಪಟ್ಟಣದ ವಿಶ್ವನಾಥ ಕಾಲೋನಿ ನಿವಾಸಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯ ಮಂಜುನಾಥ್ ಆಯ್ಕೆಯಾಗಿದ್ದಾರೆ. ಬೆಂಗಳೂರಿನಲ್ಲಿ ನಡೆದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ, ಶ್ರೀ ನಾರಾಯಣ ಗುರು ಸಂಘದ ರಾಜ್ಯಾಧ್ಯಕ್ಷ ಸೈದಪ್ಪ ಕೆ.ಗುತ್ತೇದಾರ್ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಈಡಿಗರ ಸಮಾಜದ ಮುಖಂಡರು, ಶಾಸಕ ಅನಿಲ್ ಚಿಕ್ಕಮಾದು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಏಜಾಜ್ ಪಾಷ, ಕಾಂಗ್ರೆಸ್ ಮುಖಂಡ ಮನುಗನಹಳ್ಳಿ ಮಾದಪ್ಪ ಸೇರಿದಂತೆ ಕಾಂಗ್ರೆಸ್ ಪಕ್ಷದ ಮುಖಂಡರು, ಕಾರ್ಯಕರ್ತರು ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆ ತಿಳಿಸಿದ್ದಾರೆ.

## ಮಹಿಳೆಯರಿಗೆ ಡಿಜಿಟಲ್ ಪರಿವರ್ತನೆ ತರಬೇತಿ ಕಾರ್ಯಕ್ರಮ



ಚಾಮರಾಜನಗರ, ಡಿಜಿಟಲ್ ಪರಿವರ್ತನೆ ತರಬೇತಿ ಕಾರ್ಯಕ್ರಮಗಳಿಂದ ಮಹಿಳಾ ಉದ್ಯಮಿಗಳಿಗೆ ಉದ್ಯೋಗದಲ್ಲಿ ಶಕ್ತಿ ನೀಡಲಿದೆ. ಮಹಿಳೆಯರು ಡಿಜಿಟಲ್ ಯುಗಕ್ಕೆ ಪರಿವರ್ತನೆಯಾಗಬೇಕಿದೆ ಎಂದು ಮೈಸೂರಿನ ಸಮನ್ವಯ ಟ್ರಸ್ಟ್ ಸಂಸ್ಥಾಪಕಿ ಮತ್ತು ಸಿ.ಇ.ಒ ಸುಮಂಗಲ ತಿಳಿಸಿದರು.

ನಗರದ ಜೋಡಿರಸ್ತೆಯಲ್ಲಿ ಇರುವ ವರ್ತಕರ ಭವನದಲ್ಲಿ ಸೋಮವಾರ ಯು.ಬಿ.ಯು.ಎನ್.ಟಿಯು ಮಹಿಳಾ ಉದ್ಯಮಿಗಳ ಸಂಘಗಳ ಒಕ್ಕೂಟ, ಕನ್ಸಾರ್ಟಿಯಂ, ಹಿಟಾಚಿ ರೈಲ್ವೇ ಮತ್ತು ಸಮನ್ವಯ ಟ್ರಸ್ಟ್ ಅವರ ಸಹಯೋಗದಲ್ಲಿ ಮಹಿಳೆ ಯಾರಿಗಾಗಿ ಡಿಜಿಟಲ್ ಪರಿವರ್ತನೆ ಕಾರ್ಯಕ್ರಮ ವನ್ನು ಉದ್ಘಾಟಿಸಿ ಅವರು ಮಾತನಾಡಿದರು.ಮಹಿಳೆಯರಿಗೆ ಮನೆಯಲ್ಲೇ ದುಡಿಯಲು ಅಲವಾರು ಯೋಜನೆಗಳು ಇದೇ. ಅದನ್ನು ಸದುಪಯೋಗ ಪಡೆದುಕೊಳ್ಳಬೇಕು. ಕಾಲ ಬದಲಾಗುತ್ತಿದ್ದಂತೆ ನಾವುಗಳು ಬದಲಾಗಬೇಕು. ಮಹಿಳಾ ಉದ್ಯಮಿಗಳಿಗಾಗಿ ನಮ್ಮ ಟ್ರಸ್ಟ್ ವತಿಯಿಂದ ಡಿಜಿಟಲ್ ಜ್ಞಾನವನ್ನು ತಿಳಿಸಿಕೊಡುವ ಉದ್ದೇಶದಿಂದ ತರಬೇತಿಗಳನ್ನು ನೀಡಲಾಗುತ್ತಿದೆ. ನಮ್ಮ ಸಂಸ್ಥೆಯಿಂದ ತರಬೇತಿ ಪಡೆದ ಹಲವಾರು ಮಹಿಳೆಯರು ಸ್ವಯಂ ಪೇರಿತವಾಗಿ ಡಿಜಿಟಲ್ ಉದ್ಯಮದಲ್ಲಿ ಪರಿಣಿತರಾಗಿದ್ದಾರೆ ಎಂದರು.

ಈ ಕಾರ್ಯಕ್ರಮದಲ್ಲಿ ಡಿಜಿಟಲ್ ಉದ್ಯಮ ಕುರಿತು ತರಬೇತು ದಾರರಾದ ಶ್ರೀಯಾ, ತಿಳಿಸಿದರು

ಡಿಜಿಟಲ್ ಪರಿವರ್ತನೆ ತರಬೇತಿ ಕಾರ್ಯಕ್ರಮದಲ್ಲಿ 30ಕ್ಕೂ ಹೆಚ್ಚು ಗ್ರಾಮೀಣ ಮಹಿಳೆಯರು ತರಬೇತಿ ಪಡೆದರು. ಅವರಿಗೆ ಸಂಸ್ಥೆಯ ಸಂಸ್ಥಾಪಕರಾದ ಸುಮಂಗಲ ಅವರು ಪ್ರಮಾಣ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಸಮನ್ವಯ ಟ್ರಸ್ಟ್ನ ಸದಸ್ಯರಾದ ರಾಜೇಶ್, ಅಂಜಲಿ, ಶೀಲಾ, ರೇಣಿಕಾ ಉಪಸ್ಥಿತರಿದ್ದರು.

# ಮಹಾವೀರ ಜಯಂತಿ ಸಂಭ್ರಮ: ವಿಶೇಷ ಪೂಜೆ



ಚಾಮರಾಜನಗರ, ನಗರದ ಕೊಳದ ಬೀದಿಯಲ್ಲಿ ಮಹಾವೀರ ಜಯಂತಿ ಅಂಗವಾಗಿ ಜೈನ ಸಮುದಾಯದಿಂದ ಭವ್ಯ ಮೂರ್ತಿ ಮೆರವಣಿಗೆ ಹಾಗೂ ಪೂಜಾ ಕಾರ್ಯಕ್ರಮಗಳು ವಿಜೃಂಭಣೆಯಿಂದ ನೆರವೇರಿದವು.

ಮಹಾವೀರ ಜಯಂತಿ ಅಂಗವಾಗಿ ಜೈನ ಬಸದಿಯಲ್ಲಿ ಮಹಾವೀರರ ಜಯಂತಿಯನ್ನು ವಿಶೇಷ ರೀತಿಯಲ್ಲಿ ಆಚರಿಸಲಾಯಿತು. ಬೆಳಿಗ್ಗೆಯಿಂದಲೇ ದೇವಸ್ಥಾನದಲ್ಲಿ ನೆರೆದಿದ್ದ ಭಕ್ತ ಸಮೂಹ ಸಮ್ಮುಖದಲ್ಲಿ ಮಹಾವೀರರಿಗೆ ಎಳನೀರು, ಹಾಲು ಹಾಗೂ ಪಂಚಾಮೃತಗಳಿಂದ ಅಭಿಷೇಕ ನೆರವೇರಿಸಲಾಯಿತು. ನಂತರ ಮಹಾವೀರರ ಮೂರ್ತಿಯನ್ನು ವೈಭವವಾಗಿ ಅಲಂಕರಿಸಿ ಪೂಜೆ ಸಲ್ಲಿಸಲಾಯಿತು.

ಬಳಿಕ ಸಂಜೆ ಸುಮಾರು 7.30 ರ ಹೊತ್ತಿಗೆ ಮಹಾವೀರ ಮೂರ್ತಿಯ ಮೆರವಣಿಗೆಗೆ ಚಾಲನೆ ನೀಡಲಾಯಿತು. ಮೆರವಣಿಗೆ ನಗರದ ಕೊಳದಬೀದಿ, ವೀರಭದ್ರೇಶ್ವರ ಸ್ವಾಮಿ ದೇವಸ್ಥಾನ, ಮಹಾಲಕ್ಷ್ಮಿ ಸ್ವೀಟ್ಸ್ ಮುಂಭಾಗ, ಅಗ್ರಹಾರ ಬೀದಿ, ಚಾಮರಾಜೇಶ್ವರ ದೇವಸ್ಥಾನದ ರಸ್ತೆ ಹಾಗೂ ರಥದ ಬೀದಿ ಮೂಲಕ ಸಾಗಿತು. ಮೆರವಣಿಗೆಯ ವೇಳೆ ಭಕ್ತರು ಭಜನೆ, ಜಯಘೋಷಗಳ ಮೂಲಕ ಉತ್ಸಾಹ ವ್ಯಕ್ತಪಡಿಸಿದರು. ವಿವಿಧ ಅಲಂಕಾರಗಳೊಂದಿಗೆ ಸಾಗಿದ ಮೂರ್ತಿ ನಗರವಾಸಿಗಳ ಗಮನ ಸೆಳೆಯಿತು.

ಈ ಸಂದರ್ಭದಲ್ಲಿ ಜೈನ ಸಮುದಾಯದ ಭಕ್ತರು, ಸ್ಥಳೀಯರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿ ಉತ್ಸವಕ್ಕೆ ಮೆರುಗು ನೀಡಿದರು. ಮೆರವಣಿಗೆ ಬಳಿಕ ಪ್ರಸಾದ ವಿತರಣೆ ಕಾರ್ಯಕ್ರಮವೂ ನೆರವೇರಿತು.

## ಸುರೇಶ್ ಋಗ್ವೇದಿ ಹೇಳಿಕೆ

# ಯುದ್ಧ: ಮಹಾವೀರರ ಸಂದೇಶ ಪರಿಣಾಮ




ಚಾಮರಾಜನಗರ, ಜಗತ್ತಿಗೆ ಶಾಂತಿಯ ತತ್ವವನ್ನು ಬೋಧಿಸಿದ ಮಹಾವೀರರ ಸಂದೇಶಗಳು ವರ್ತಮಾನದಲ್ಲಿ ತುಂಬಾ ಅಗತ್ಯವಿದೆ ಎಂದು ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಋಗ್ವೇದಿ ಹೇಳಿದರು.

ನಗರದ ಕನ್ನಡ ಸಾಹಿತ್ಯ ಪರಿಷತ್ತಿನ ಸಂಸ ಸಭಾಂಗಣದಲ್ಲಿ ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಹಮ್ಮಿಕೊಂಡಿದ್ದ ವರ್ಧಮಾನ ಮಹಾವೀರರ ಕೊಡುಗೆಗಳ ಕುರಿತು ಮಾತನಾಡಿದರು.

ಇಡೀ ಜಗತ್ತು ಶಕ್ತಿಯ ಸ್ವರೂಪದಲ್ಲಿ ,ಸ್ವಾರ್ಥದ ರೂಪವನ್ನು ತಾಳಿ ಯುದ್ಧದ ಕಾರ್ಮೋಡದಲ್ಲಿ ಬದುಕುತ್ತಿರುವ ಸಂದರ್ಭದಲ್ಲಿ ವರ್ಧಮಾನ ಮಹಾವೀರದ ದಿವ್ಯ ಶಾಂತಿಮಂತ್ರ ತುಂಬಾ ಅನಿವಾರ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಸಕಲ ಜೀವಿಗಳ ಮೇಲು ದಯೆ, ಕರುಣೆ ಪ್ರೀತಿ,ನೀಡಬೇಕು. ಎಲ್ಲಾ ಜೀವಿಗಳಿಗೂ ಬದುಕುವ ಹಕ್ಕಿದೆ ಎಂದು ಜಗತ್ತಿಗೆ ಸಾರಿದ ಜೈನ ಧರ್ಮದ 24ನೇ ತೀರ್ಥಂಕರರಾದ ಮಹಾವೀರರು ತಾವು ಕಂಡ ಸತ್ಯವನ್ನು ಜನಸಾಮಾನ್ಯರಿಗೆ ತಿಳಿಸುವ ಮೂಲಕ ಶಾಂತಿದೂತಕರಾಗಿ ಜಗತ್ತಿಗೆ ಕಲ್ಯಾಣವನ್ನು ಬಯಸಿದವರು. ಎಲ್ಲ ವೈಭವವನ್ನು ತ್ಯಜಿಸಿ ಜ್ಞಾನವನ್ನು ಕಟ್ಟಿಕೊಳ್ಳುವ ದಿಕ್ಕಿನಲ್ಲಿ 12 ವರ್ಷಗಳ ಕಾಲ ಸುಧೀರ್ಘ ತಪಸ್ಸನ್ನು ಮಾಡಿ ಸತ್ಯವನ್ನು ಅರಿತರು ಎಂದು ಹೇಳಿದರು. ವರ್ಧಮಾನ ಮಹಾವೀರರ ಮತ್ತು ಜೈನ ಧರ್ಮದ ತತ್ವಗಳು ತಾತ್ವಿಕ ಚಿಂತನೆಗಳಿಗೆ ವಿಶ್ವಧರ್ಮವಾಗಿದೆ. ಭಾರತದ ಧರ್ಮ ಪ್ರವರ್ತಕರಾಗಿ ಭಗವಾನ್ ಮಹಾವೀರರ ಹೆಸರು ಅಜರಾಮರವಾಗಿದೆ .ಅವರ ಸಾಹಿತ್ಯ ದರ್ಶನವನ್ನು ಜೀವನ ಮೌಲ್ಯಗಳು, ದಿವ್ಯ ಸಂದೇಶಗಳನ್ನು ತಿಳಿಯುವ ಪ್ರಯತ್ನ ನಮ್ಮದಾಗಬೇಕು . ಪ್ರಸ್ತುತ ಸಂದರ್ಭದಲ್ಲಿ ಜಗತ್ತು ಅಟ್ಟ ಹಾಸದಿಂದ ,ಯುದ್ಧಗಳಿಂದ ಅಹಂಕಾರದಿಂದ ತುಂಬಿದೆ. ಮಹಾವೀರರ ಸಂದೇಶಗಳು ತುಂಬಾ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದು ತಿಳಿಸಿದರು. ಕಸ್ತೂರಿ ಕನ್ನಡ ಸಂಘದ ಮುಖಂಡರಾದ ಬೂದಿತಿಟ್ಟುಲಿಂಗರಾಜು, ದೊಡ್ಡರಾಯ ಪೇಟೆ ದೊರೆಸ್ವಾಮಿ ಹಾಗೂ ನಗರಸಭಾ ಮಾಜಿ ಸದಸ್ಯರಾದ ಪದ್ಮ ಪುರುಷೋತ್ತಮ್, ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ಬಿಕೆ ಆರಾಧ್ಯ, ಕನ್ನಡ ಸಾಹಿತ್ಯ ಪರಿಷತ್ತಿನ ನಿರ್ದೇಶಕರಾದ ರವಿಚಂದ್ರಪ್ರಸಾದ್, ಎಲ್‌ಶಿವಲಿಂಗ ಮೂರ್ತಿ, ಗೀತಾ, ಸುರೇಶ್‌ಗೌಡ, ಮಂಜುನಾಥ್, ಮಹೇಶ್ ಇದ್ದರು.

# ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ ಕೆಯುಡಬ್ಲ್ಯೂಜೆ ವಾರ್ಷಿಕ ಪ್ರಶಸ್ತಿಗಳ ಪ್ರಕಟ

**ಬೆಂಗಳೂರು:** ಕರ್ನಾಟಕ ಕಾರ್ಯ ನಿರತ ಪತ್ರಕರ್ತರ ಸಂಘ(ಕೆಯುಡಬ್ಲ್ಯೂಜೆ)ದ 2024ನೇ ಸಾಲಿನ ವಾರ್ಷಿಕ ಪ್ರಶಸ್ತಿಗಳನ್ನು ಪ್ರಕಟಿಸಲಾಗಿದೆ. ಬೀದರನಲ್ಲಿ ಏಪ್ರಿಲ್ 11 ಮತ್ತು 12 ರಂದು ನಡೆಯಲಿರುವ 40ನೇ ರಾಜ್ಯ ಪತ್ರಕರ್ತರ ಸಮ್ಮೇಳನದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ರಾಜ್ಯಾಧ್ಯಕ್ಷರಾದ ಶಿವಾನಂದ ತಗಡೂರು ಮತ್ತು ಪ್ರಧಾನ ಕಾರ್ಯದರ್ಶಿ ಜಿ.ಸಿ.ಲೋಕೇಶ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

**ಪ್ರಶಸ್ತಿಗಳ ವಿವರ ಇಂತಿದೆ.**

1. ಜಿ. ನಾರಾಯಣಸ್ವಾಮಿ ಪ್ರಶಸ್ತಿ (ಅತ್ಯುತ್ತಮ ಗ್ರಾಮಾಂತರ ವರದಿ)
ಯೋಗೇಶ್ ಮಲ್ಲೂರು, ವಾರ್ತಾಭಾರತಿ, ಬೆಂಗಳೂರು
ಕೆ.ಎ.ಇಸ್ಮಾಯಿಲ್, ಶಕ್ತಿ, ಕೊಡಗು

2. ಪಟೇಲ್ ಭೈರಹನುಮಯ್ಯ ಪ್ರಶಸ್ತಿ (ಅತ್ಯುತ್ತಮ ಮಾನವೀಯ ವರದಿ)
ಮಲ್ಲಯ್ಯ ಪೋಲಂಪಲ್ಲಿ, ಕನ್ನಡಪ್ರಭ, ಶಹಪೂರ, ಯಾದಗಿರಿ
ರವಿಕುಮಾರ ಕಗ್ಗಣ್ಣನವರ, ಕನ್ನಡಮ್ಮ, ಧಾರವಾಡ

3. ಗಿರಿಧರ್ ಪ್ರಶಸ್ತಿ (ಅತ್ಯುತ್ತಮ ಅಪರಾಧ ವರದಿ)
ಬಸವರಾಜ ಕಟ್ಟಿಮನಿ, ಕನ್ನಡಪ್ರಭ, ಹುಣಸಗಿ, ಯಾದಗಿರಿ.
ಪಿ.ಕೆ.ರವಿಕುಮಾರ್, ವಿಜಯವಾಣಿ, ಮೈಸೂರು

4. ಬಿ. ಎಸ್. ವೆಂಕಟರಾಂ ಪ್ರಶಸ್ತಿ (ಅತ್ಯುತ್ತಮ ಸ್ಕೂಪ್ ವರದಿ)
ಓದೇಶ ಸಕಲೇಶಪುರ, ಪ್ರಜಾವಾಣಿ, ರಾಮನಗರ
ಮಹೇಶ್ ಮುನ್ನಯ್ಯನವರ ಮಠ, ಪ್ರಜಾವಾಣಿ, ಮಹಾಲಿಂಗಪುರ, ಬಾಗಲಕೋಟೆ

5. ಕೆ. ಎ. ನೆಟ್ಟಕಲಪ್ಪ ಪ್ರಶಸ್ತಿ (ಅತ್ಯುತ್ತಮ ಕ್ರೀಡಾ ವರದಿ)
ನಾರಾಯಣರಾವ್ ದೇಶಪಾಂಡೆ, ಸಂಯುಕ್ತ ಕರ್ನಾಟಕ, ಹುಬ್ಬಳ್ಳಿ
ಪ್ರಸಾದ್‌ಶೆಟ್ಟಿಗಾರ್, ವಿಜಯವಾಣಿ, ಬೆಂಗಳೂರು.

6. ಖಾದ್ರಿ ಶಾಮಣ್ಣ ಪ್ರಶಸ್ತಿ (ಅತ್ಯುತ್ತಮ ರಾಜಕೀಯ ವಿಮರ್ಶೆ)
ದಯಾಶಂಕರ ಮೈಲಿ, ಸುದ್ದಿಮೂಲ, ಮೈಸೂರು
ಶಂಕರ ಪಾಗೋಜಿ, ಉದಯಕಾಲ,

7. ಮಂಗಳ ಎಂ. ಸಿ. ವರ್ಗಿಸ್ ಪ್ರಶಸ್ತಿ (ವಾರ ಪತ್ರಿಕೆ ಲೇಖನ)
ಎಂ.ಜಿ.ನಾಯ್ಕ, ಸುಧಾ (ಪ್ರಜಾವಾಣಿ), ಕುಮಟ, ಉತ್ತರ ಕನ್ನಡ ಜಿಲ್ಲೆ
ವೆಂಕಟೇಶ ಎಸ್.ಸಂಪ, ಸಂಪಾದಕರು, ಸಂಪದ ಸಾಲು.

8) ತಗಡೂರು ಕಮಲಮ್ಮ ವೀರೇಗೌಡ ಪ್ರಶಸ್ತಿ (ರೈತರ ಬದುಕು–ಬವಣೆ)
ಜಯರಾಮು, ಸಂಯುಕ್ತ ಕರ್ನಾಟಕ, ಚನ್ನರಾಯಪಟ್ಟಣ
ಅಬ್ದುಲ್ ರೆಹಮಾನ್ ತಲಪಾಡಿ, ವಾರ್ತಾ ಭಾರತಿ, ಮಂಗಳೂರು
ಕು.ಇಂದಿರಾ, ಹೊಸಪೇಟೆ ಟೈಮ್ಸ್, ಹೊಸಪೇಟೆ

9) ಆರ್.ಎಲ್.ವಾಸುದೇವರಾವ್ ಪ್ರಶಸ್ತಿ (ಅರಣ್ಯ ವರದಿ)
ಪಿ.ಪರಮೇಶ್, ಸುದ್ದಿಮೂಲ, ಮಾನ್ವಿ, ರಾಯಚೂರು
ಕೌಶಲ್ಯ ಡಿ ಫಳನಕರ್, ಗುಂಬಜ್ ಎಕ್ಸ್‌ಪ್ರೆಸ್, ವಿಜಯಪುರ

10. ಆರ್.ಎಲ್. ವಾಸುದೇವರಾವ್ ಪ್ರಶಸ್ತಿ (ವನ್ಯ ಪ್ರಾಣಿಗಳ ವರದಿ)
ನಾಗರಾಜ್ ನವೀಮನೆ, ವಿಜಯ ಕರ್ನಾಟಕ, ಮೈಸೂರು
ಎಂ.ನರಸಿಂಹಮೂರ್ತಿ, ಕನ್ನಡಪ್ರಭ, ಬೆಂಗಳೂರು ದಕ್ಷಿಣ

11. ಬಿ.ಜಿ.ತಿಮ್ಮಪ್ಪಯ್ಯ ಪ್ರಶಸ್ತಿ (ಆರ್ಥಿಕ ದುರ್ಬಲ ವರ್ಗದವರ ವರದಿ)
ರಾಜೇಶಶೆಟ್ಟಿ ದೋಟ, ವಿಜಯವಾಣಿ, ಮಂಗಳೂರು
ಶರತ್ ಕುಮಾರ್ ಎಸ್. ಉದಯವಾಣಿ, ಶಿವಮೊಗ್ಗ

12. ಮಂಡಿಬೆಲೆ ಶಾಮಣ್ಣ ಸ್ಮಾರಕ ಪ್ರಶಸ್ತಿ (ಗ್ರಾಮೀಣ ಜನ–ಜೀವನದ ವರದಿ)
ಶಂಕರ ಕಟ್ಟೆ ಮಳಲವಾಡಿ, ಜನಮಿತ್ರ, ಹುಣಸೂರು
ಶಿವರಾಜ ಸುಂಕದ, ಮುದಗಲ್, ಲಿಂಗಸೂರು, ರಾಯಚೂರು.
ಪ್ರಶಾಂತ್ ಪಾದೆ, ಉದಯವಾಣಿ, ಕುಂದಾಪುರ, ಉಡುಪಿ.

13. ನಾಡಪ್ರಭು ಕೆಂಪೇಗೌಡ ಸ್ಮಾರಕ ಪ್ರಶಸ್ತಿ (ಬೆಂಗಳೂರು ನಗರ ಮತ್ತು ಗ್ರಾಮಾಂತರ)
ಎಚ್.ಪಿ.ಪ್ರವೀಣ್,
ಪ್ರಶಾಂತ್ ರಿಪ್ಪನ್ ಪೇಟೆ
ವಿ.ಎಸ್.ಹೊನ್ನಾಚಾರ್, ಲೀಡರ್ಸ್ ವೀಕ್ಲಿ, ಜುಕ್ರಿಯಾ, ಟೈಮ್ಸ್ ಆಫ್ ಕರ್ನಾಟಕ

14, ಯಜಮಾನ್ ಟಿ. ನಾರಾಯಣಪ್ಪ ಸ್ಮಾರಕ ಪ್ರಶಸ್ತಿ (ಜಿಲ್ಲಾ ಮಟ್ಟದ ಅತ್ಯುತ್ತಮ ಕೃಷಿ ವರದಿ)
ವೆಂಕಟೇಶ್ ಗುಡೆಪ್ಪನವರ, ವಿಜಯವಾಣಿ, ಮುಧೋಳ, ಬಾಗಲಕೋಟೆ ಜಿಲ್ಲೆ
ಮಂಜುನಾಥ್ ಎನ್ ಬಳ್ಳಾರಿ, ಕವಿತಾಳ, ರಾಯಚೂರು.

15. ನಾಡಿಗೇರ ಕೃಷ್ಣರಾಯರ ಪ್ರಶಸ್ತಿ:
ಸತೀಶ್ ಬಾಬು, ಉದಯವಾಣಿ, ಬೆಂಗಳೂರು.
ಎ.ಅಕ್ಷರ, ಹಿರಿಯ ಪತ್ರಕರ್ತರು

16. ಸುಣ್ಣುವಂಡ ಶ್ರೀನಿವಾಸ ಚಂಗಪ್ಪ ಪ್ರಶಸ್ತಿ. (ಸೈನಿಕರ ಕುರಿತ ವರದಿ)
ಎ.ಅಪ್ಪಾಜಿಗೌಡ, ಮುಳಬಾಗಿಲು, ಕೋಲಾರ

17. ಕೆ.ಎನ್.ಸುಬ್ರಮಣ್ಯ ಪ್ರಶಸ್ತಿ ( ಇಂಗ್ಲೀಷ್ ಪತ್ರಿಕೆ ವರದಿ)
ಅಫ್ಯಾನ್ ಯಾಸ್ಮಿನ್, ದಿ ಹಿಂದೂ
ವಿಕಾರ್ ಅಹಮದ್ ಫ್ರಂಟ್ ಲೈನ್, ಬೆಂಗಳೂರು

18. ಟಿ.ಕೆ.ಮಲಗೊಂಡ ಪ್ರಶಸ್ತಿ (ತನಿಖಾ ವರದಿ)
ಶಿವಾನಂದ ಹಿರೇಮಠ, ವಿಜಯವಾಣಿ, ಗದಗ
ತಿಪಟೂರು ಕೃಷ್ಣ, ಆದಿತ್ಯವಾಣಿ, ತಿಪಟೂರು

19. ನಟ, ನಿರ್ದೇಶಕ ದ್ವಾರಕೀಶ್ ಸ್ಮಾರಕ ಪ್ರಶಸ್ತಿ (ಚಲನ ಚಿತ್ರ ವಿಭಾಗ) ಎಸ್.ಜಗದೀಶ್ ಕುಮಾರ್, ಸಿನಿಸುದ್ದಿ.

20.ಅಭಿಮಾನಿ ಪ್ರಕಾಶನ ಪ್ರಶಸ್ತಿ
ಮಹೇಶ್ ಹೆಗಡೆ, ಸಂಯುಕ್ತ ಕರ್ನಾಟಕ, ಸಾಗರ, ಶಿವಮೊಗ್ಗ
ರವೀಂದ್ರ ತಳಗಡೆ, ವಿಜಯ ಕರ್ನಾಟಕ, ಬಳ್ಳಾರಿ.

21. ಅತ್ಯುತ್ತಮ ಪುಟ ವಿನ್ಯಾಸಗಾರರು:
ಸಂದೇಶ್, ಪ್ರತಿನಿಧಿ, ಮೈಸೂರು

22. ಅತ್ಯತ್ತಮ ಡೆಸ್ಕ್ ನಿರ್ವಹಣೆ:
ವಿಜಯಕುಮಾರ್, ವಿಜಯವಾಣಿ

23.ಸುದ್ದಿಚಿತ್ರ(ಛಾಯಾಚಿತ್ರ ಸಹಿತ ವರದಿ)
ಕೆ.ವಿ.ಬಲರಾಮ್, ಕಿಕ್ಕೇರಿ, ಮಂಡ್ಯ
ಎಂ.ಆರ್.ಮಂಜುನಾಥ್, ಹಿರಿಯ ಫೋಟೋಗ್ರರ್

24.ಫೋಟೋಗ್ರಫಿ/ ಕ್ಯಾಮರಾಮೆನ್
ಗಣೇಶ್, ವಿಜಯ ಕರ್ನಾಟಕ
ಬಾಬು ಮಿಯಾ, ಕಲಬುರ್ಗಿ

25.ಗಣೇಶ್.ಜಿ. ದತ್ತಿ ಪ್ರಶಸ್ತಿ:
ಎಂ.ಪಿ.ಅರುಣ್ ಕುಮಾರ್, ಸಿಟಿ ಹೈಲೈಟ್ಸ್, ಶಿವಮೊಗ್ಗ
ಮಹಾಂತೇಶ್, ಆಂದೋಲನ, ಮೈಸೂರು

26.ಕೆ.ಪ್ರಹ್ಲಾದರಾವ್ (ಮಂಡ್ಯ) ಪ್ರಶಸ್ತಿ:
ಕೆ.ಎಸ್.ಜನಾರ್ಧನಾಚಾರಿ, ಈ ಸಂಜೆ
ರಮೇಶ್, ಕೆ. ಕನ್ನಡಪ್ರಭ, ಬಂಗಾರಪೇಟೆ, ಕೋಲಾರ
ಕೆ.ವಿ.ನಾಗರಾಜ್, ಪ್ರಜಾವಾಣಿ, ಎನ್.ಆರ್.ಪುರ, ಚಿಕ್ಕಮಗಳೂರು

27.ಗರುಡನಗಿರಿ ನಾಗರಾಜ್ ಪ್ರಶಸ್ತಿ:
ಬಿ.ಶಿವರುದ್ರಪ್ಪ, ಕನ್ನಡಪ್ರಭ, ಹೊಳಲ್ಕೆರೆ, ಚಿತ್ರದುರ್ಗ
ರಮೇಶ್ ಕುಮಾರ್ ನಾಯಕ್, ವಿಶ್ವವಾಣಿ
ರಾಮಕೃಷ್ಣ, ಸಂಯುಕ್ತ ಕರ್ನಾಟಕ, ಮಂಗಳೂರು

28.ಗುರುಲಿಂಗಸ್ವಾಮಿ ಹೋಳಿಮಠ ಪ್ರಶಸ್ತಿ:
ದೇವರಾಜ ಕಪ್ಪಸೋಗಿ, ಕನ್ನಡಪ್ರಭ, ಚಾಮರಾಜನಗರ
ನವ್ಯಜ್ಯೋತಿ, ಹೊಸದಿಗಂತ

29.ಪ್ರಜಾಪ್ರಗತಿ ಪ್ರಶಸ್ತಿ:
ರವೀಂದ್ರ ತಳಗಡೆ, ವಿಜಯ ಕರ್ನಾಟಕ, ಬಳ್ಳಾರಿ
ಬ್ರಹ್ಮಾನಂದ ಹಡಗಲಿ, ಕನ್ನಡಪ್ರಭ, ಬೆಳಗಾವಿ

30ಬಿ.ಎ.ನಂದಿಕೋಲುಮಠ ಪ್ರಶಸ್ತಿ:
ಎಚ್.ಕೆ.ನಟರಾಜ್, ಉದಯವಾಣಿ, ದಾವಣಗೆರೆ
ರಾಮಚಂದ್ರಯ್ಯ ಕುಣಿಗಲ್, ಸಂಜೆವಾಣಿ, ತುಮಕೂರು

**ವಿದ್ಯುನ್ಮಾನ (ಟಿವಿ)ವಿಭಾಗ:**

*ಅತ್ಯುತ್ತಮ ರಾಜಕೀಯ ವಿಶ್ಲೇಷಣೆ
ಪ್ರಶಾಂತ್ ನಾತು, ಸುವರ್ಣ ಟಿವಿ
ಪ್ರಮೋದ್, ಟಿವಿ 9

*ಅತ್ಯುತ್ತಮ ಆಂಕರ್
ಅರುಣ್ ಸಿ ಬಡಿಗೇರ, ಪಬ್ಲಿಕ್ ಟಿ.ವಿ.
ಕಿರಣ್ ಕುಮಾರ್ ಡಿಕೆ

*ಅಭಿವೃದ್ಧಿ/ಸಾಮಾಜಿಕ/ ಮಾನವೀಯ ವರದಿ
ಪಿ.ಡಿ.ವೀರಣ್ಣ, ಚಂದನ ಟಿವಿ, ತುಮಕೂರು
ತಿಮ್ಮೇಗೌಡ ನ್ಯೂಸ್ 18, ಬೆಂಗಳೂರು
ಮಾರುತಿ ಪಾವಗಡ, ಗ್ಯಾರಂಟಿ ಟಿವಿ.
ರಾಜು ಬಿ.ಆರ್. ನೂಸ್ ಸ್ಟ್, ಕೊಪ್ಪಳ
ವಿಠಲ ಕ್ಯಾರವಾಡ, ಆರ್.ಕನ್ನಡ, ದಾವಣಗೆರೆ
ಮೋಹನಕೃಷ್ಣ, ಆಕಾಶವಾಣಿ, ದೂರದರ್ಶನ, ಹಾಸನ

**ಕೆಯುಡಬ್ಲ್ಯುಜೆ ವಿಶೇಷ ಪ್ರಶಸ್ತಿ:**
**ವಿಜಯ ಬಿರಾದರ್, ಜಮಖಂಡಿ**
**ಶ್ರೀಧರ ಉಚ್ಚಿಲ– ಮುಂಬಯಿ**
**ಶ್ರೀಕಾಂತ್– ಕಾಸರಗೋಡು**
**ಸಂಜೀವರಾವ್ ಕುಲಕರ್ಣಿ**

# 400 ಹೆಲ್ಮೆಟ್ ವಿತರಣೆ

## ಮರೆಯದೆ ಹೆಲ್ಮೆಟ್ ಧರಿಸಲು ಎಸ್.ಪಿ ಮಲ್ಲಿಕಾರ್ಜುನ ಬಾಲದಂಡಿ



**ಮೈಸೂರು:** ಎಷ್ಟೇ ಗಡಿಬಿಡಿಯಿದ್ದರೂ ಹೆಲ್ಮೆಟ್ ಹಾಕಿಕೊಳ್ಳುವುದನ್ನು ಮರೆಯಬೇಡಿ ಎಂದು ಎಸ್.ಪಿ. ಮಲ್ಲಿಕಾರ್ಜುನ ಬಾಲದಂಡಿ ಕಿವಿಮಾತು ಹೇಳಿದರು.

ಕಡಕೊಳದ ಸಿರೇನ್ ಇಂಡಿಯಾ ಕಂಪೆನಿಯು ರಸ್ತೆ ಸುರಕ್ಷತಾ ಅಭಿಯಾನ ಅಂಗವಾಗಿ ಮಂಗಳವಾರ ಕಡಕೊಳದಲ್ಲಿ ಏರ್ಪಡಿಸಿದ್ದ ಉಚಿತವಾಗಿ ಹೆಲ್ಮೆಟ್ ವಿತರಿಸುವ ಸಮಾರಂಭದಲ್ಲಿ ಸಾರ್ವಜನಿಕರಿಗೆ ಹೆಲ್ಮೆಟ್ ಹಾಕುವ ಮೂಲಕ ವಿತರಿಸಿ ಅವರು ಮಾತನಾಡಿದರು.

ಶೇ 95ರಷ್ಟು ಬೈಕ್ ಇದ್ದವರು ಶೇ 80ರಷ್ಟು ಚಾಲನಾ ಪರವಾನಗಿ ಹೊಂದಿರುವುದಿಲ್ಲ, ಹೊಂದಿದ್ದರೂ ನವೀಕರಣಗೊಳಿಸಿರುವುದಿಲ್ಲ. ಅಲ್ಲದೆ ವಿಮೆ ಮಾಡಿಸಿಕೊಂಡಿರುವುದಿಲ್ಲ. ಹೀಗಿದ್ದಾಗ ಅಪಘಾತವಾಗಿ ಮೃತಪಟ್ಟರೆ ಪರಿಹಾರ ಮೊತ್ತ ಸಿಗುವುದಿಲ್ಲ ಎಂದು ಎಚ್ಚರಿಸಿದರು.

ಮೊಬೈಲ್ ಫೋನಿನಲ್ಲಿ ಮಾತನಾಡುತ್ತ ಬೈಕ್ ಓಡಿಸಬೇಡಿ, ಹಾಗೆಯೇ ಮದ್ಯ ಸೇವಿಸಿ ಬೈಕ್ ಓಡಿಸಬೇಡಿ. ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಬೈಕ್ ಓಡಿಸಲು ಕೊಡಬೇಡಿ, ಬೇರೊಬ್ಬರಿಗೆ ಬೈಕ್ ಕೊಡಬೇಡಿ. ಅಲ್ಲದೆ ವಾಹನಗಳ ಫಿಟ್ ನೆಸ್ ನೋಡಿಕೊಳ್ಳಿ ಎಂದು ಸಲಹೆ ನೀಡಿದರು.

ಮುಖ್ಯ ಅತಿಥಿಯಾದ ಎಎಸ್ ಪಿ ಮಲ್ಲಿಕ್ ಸಿ. ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ನಿತ್ಯ ಶೇ.ಹತ್ತರಷ್ಟು ಅಪಘಾತಗಳಾಗುತ್ತಿವೆ. ಇವುಗಳಲ್ಲಿ 2–3 ಪ್ರಕರಣಗಳಲ್ಲಿ ಜನರು ಸಾವನ್ನಪ್ಪುತ್ತಾರೆ. ಇದರಲ್ಲೂ ಶೇ. 95ರಷ್ಟು ಬೈಕ್ ಅಪಘಾತಗಳೇ ಹೆಚ್ಚು ಎಂದು ಎಚ್ಚರಿಸಿದರು.

ಅಪಘಾತವಾಗಿ ಕೈಕಾಲುಗಳಿಗೆ ಪೆಟ್ಟಾದರೆ ಬದುಕಬಹುದು. ಆದರೆ ಅಪಘಾತವಾಗಿ ಕೆಳಗೆ ಬಿದ್ದಾಗ ತಲೆಗೆ ಪೆಟ್ಟಾದರೆ ಉಳಿಯುವ ಸಾಧ್ಯತೆ ಕಡಿಮೆ. ಇದಕ್ಕಾಗಿ ಸಿಗ್ನಲ್ ಜಂಪ್ ಮಾಡಬೇಡಿ. ಹೆಲ್ಮೆಟ್ ಪಡೆದೂ ಬಳಸದೆ ಇರಬೇಡಿ ಎಂದು ತಿಳಿವಳಿಕೆ ಹೇಳಿದರು.

ಸಿರೇನ್ ಇಂಡಿಯಾ ಕಂಪೆನಿಯ ನಿರ್ದೇಶಕ ಕೋರ್ಘೋ ಅಸಕುರ ಮಾತನಾಡಿ, ಹೆಲ್ಮೆಟ್ ಧರಿಸದೆ ಬೈಕ್ ಓಡಿಸುವುದಿಲ್ಲವೆಂದು ಶಪಥ ಮಾಡಿ ಜೊತೆಗೆ ಸುರಕ್ಷತೆ ಎನ್ನುವುದು ನಿಯಮವೆಂದು ತಿಳಿಯದೆ ನಿತ್ಯದ ಕ್ರಮ ಎಂದು ತಿಳಿಯಿರಿ ಎಂದರು. ಮೈಸೂರು ಗ್ರಾಮಾಂತರ ಡಿವೈಎಸ್ಪಿ ಟಿ.ಬಿ.ರಾಜಣ್ಣ, ಮೈಸೂರು ದಕ್ಷಿಣ ಠಾಣೆ ಇನ್ ಸ್ಪೆಕ್ಟರ್ ಡಾ.ಎಂ.ಎಲ್.ಶೇಖರ್, ಜಿ.ಪಂ. ಮಾಜಿ ಅಧ್ಯಕ್ಷ ಕಡಕೊಳ ನಾಗರಾಜ್, ಕಾಳಿಬೀರೇಶ್ವರ ಟ್ರಸ್ಟ್ ಅಧ್ಯಕ್ಷ ನಾಗರಾಜ್, ಮಂಡಲ ಪಂಚಾಯಿತಿ ಮಾಜಿ ಪ್ರಧಾನ ಆದಿರಾಜಯ್ಯ ಹಾಗೂ ಗ್ರಾ.ಪಂ. ಮಾಜಿ ಸದಸ್ಯ ಶಿವಕುಮಾರ್ ವೇದಿಕೆ ಮೇಲಿದ್ದರು. ಇಂಡಿಯಾ ಕಂಪೆನಿಯ ಮಾನವ ಸಂಪನ್ಮೂಲ ವಿಭಾಗದ ಹಿರಿಯ ವ್ಯವಸ್ಥಾಪಕ ಎನ್.ಪದ್ಮನಾಭ ಸ್ವಾಗತಿಸಿದರು. ನಂತರ ವಿದ್ಯಾರ್ಥಿಗಳಿಗೆ, ಪುರುಷರಿಗೆ ಹಾಗೂ ಮಹಿಳೆಯರಿಗೆ 400 ಹೆಲ್ಮೆಟ್ ವಿತರಿಸಲಾಯಿತು.



# ಸರ್ಕಾರಿ ಜಾಗವನ್ನು ಸಂರಕ್ಷಿಸುವಂತೆ ಹರಿಹರಪುರ ಗ್ರಾಮಸ್ಥರ ಆಗ್ರಹ

**ಕೆ.ಆರ್.ಪೇಟೆ:** ತಾಲೂಕಿನ ಹರಿಹರಪುರ ಗ್ರಾಮದ ಸರ್ವೆ 24 ರಲ್ಲಿನ ಸರ್ಕಾರಿ ಗೋಮಾಳದಲ್ಲಿ ಗ್ರಾಮದ ಬಲ್ಯಾಢ್ಯರು ರಾತ್ರೋರಾತ್ರಿ ಅಕ್ರಮ ಶೆಡ್‌ಗಳನ್ನು ಹಾಕಿ ಸರ್ಕಾರಿ ಜಾಗವನ್ನು ವಶಪಡಿಸಿಕೊಳ್ಳುತ್ತಿದ್ದು ತಕ್ಷಣವೇ ಕಾನೂನು ಕ್ರಮ ವಹಿಸಿ ಸರ್ಕಾರಿ ಜಾಗವನ್ನು ಸಂರಕ್ಷಿಸುವಂತೆ ಹರಿಹರಪುರ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಗ್ರಾಮದ ಹೆಚ್.ಟಿ.ನಾರಾಯಣ, ನಿಂಗರಾಜು, ಮಂಜುನಾಥ್ ಸೇರಿದಂತೆ ಹಲವರು ಸರ್ಕಾರಿ ಜಾಗ ಅತಿಕ್ರಮವಾಗುತ್ತಿದ್ದರೂ ಅದರ ಸಂರಕ್ಷಣೆಗೆ ಮುಂದಾಗದ ಹರಿಹರಪುರ ಗ್ರಾಮ ಪಂಚಾಯತಿಯ ಕರ್ತವ್ಯ ಲೋಪವನ್ನು ಖಂಡಿಸಿದ್ದಾರೆ.

ಹರಿಹರಪುರ ಗ್ರಾಮಕ್ಕೆ ಸೇರಿಕೊಂಡಂತೆ ಸರ್ವೆ 24 ರಲ್ಲಿ ಸುಮಾರು ಎರಡು ಎಕರೆ ಸರ್ಕಾರಿ ಗೋಮಾಳವಿದೆ. ಹರಿಹರಪುರ ಗ್ರಾಮದೊಳಗೆ ಹಾದು ಹೋಗಿರುವ ಬೆಂಗಳೂರು–ಜಲಸೂರು ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತೆ ಕಿರಿದಾದ ಕಟ್ಟಡದಲ್ಲಿ ಗ್ರಾಮ ಪಂಚಾಯತಿ ಕಾರ್ಯನಿರ್ವಹಿಸುತ್ತಿದೆ. ಜಲಸೂರು ಹೆದ್ದಾರಿಗೆ ಹೊಂದಿಕೊಂಡಂತೆ ಗ್ರಾಮದಲ್ಲಿನ ವಾರದ ಸಂತೆ ನಡೆಯುತ್ತದೆ. ಗ್ರಾಮ ಪಂಚಾಯತಿಯ ಕಟ್ಟಡ ನಿರ್ಮಾಣಕ್ಕೆ, ಸಂತೆಮಾಳ ಮಾಡಲು ಮತ್ತಿತರ ಸಾರ್ವಜನಿಕ ಉದ್ದೇಶಕ್ಕೆ ಸದರಿ ಸರ್ಕಾರಿ ಗೋಮಾಳವನ್ನು ಕಾಯ್ದಿರಿಸಲಾಗಿದೆ.

ಆದರೆ ಕಳೆದ ಮೂರು ದಿನಗಳಿಂದ ಗ್ರಾಮದ ಬಲ್ಯಾಢ್ಯರು ಸರ್ಕಾರಿ ಗೋಮಾಳಕ್ಕೆ ಲಗ್ಗೆಹಿಟ್ಟಿದ್ದು ತಮಗೆ ಬೇಕಾದಂತೆ ಮೂರು ನಾಲ್ಕು ಕಡೆ ಜಾಗ ಗುರುತಿಸಿಕೊಂಡು ಅಕ್ರಮ ಶೆಡ್ ಗಳನ್ನು ಹಾಕಿಕೊಂಡು ಗ್ರಾಮದ ವಸತಿ ರಹಿತರಿಗೂ ಅವಕಾಶ ನೀಡದೆ ಸಂಪೂರ್ಣ ಎರಡು ಎಕರೆ ಸರ್ಕಾರಿ ಗೋಮಾಳವನ್ನು ವಶಪಡಿಸಿಕೊಂಡಿದ್ದಾರೆ. ಅಕ್ರಮ ಶೆಡ್ ಹಾಕಲು ಸರ್ಕಾರಿ ಜಾಗದಲ್ಲಿದ್ದ ಬೇವು, ಹುಣಸೆ ಮುಂತಾದ ಹತ್ತಾರು ಮರಗಳನ್ನು ಅಕ್ರಮವಾಗಿ ಕಡಿದು ಸಾಗಿಸಿದ್ದಾರೆ. ಸರ್ಕಾರಿ ಜಾಗ ಅತಿಕ್ರಮಣವಾಗುತ್ತಿದ್ದರೂ ಗ್ರಾಮ ಪಂಚಾಯತಿ ಯಾವುದೇ ಕ್ರಮ ವಹಿಸದೆ ಅಕ್ರಮಕ್ಕೆ ಪರೋಕ್ಷ ಸಹಕಾರ ನೀಡುತ್ತಿದೆ ಎಂದು ಆರೋಪಿಸಿರುವ ಗ್ರಾಮಸ್ಥರು ತಕ್ಷಣವೇ ಅಕ್ರಮ ಶೆಡ್ಡುಗಳನ್ನು ತೆರವುಗೊಳಿಸಿ ಸರ್ಕಾರಿ ಭೂಮಿಯ ಸಂರಕ್ಷಣೆ ಮಾಡುವಂತೆ ಒತ್ತಾಯಿಸಿದ್ದಾರೆ.



ಸರ್ಕಾರಿ ಜಾಗದ ಅತಿಕ್ರಮಣದ ಬಗ್ಗೆ ಪ್ರತಿಕ್ರಿಯಿಸಿರುವ ಹರಿಹರಪುರ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿ ನಾಹಿದ ಅಕ್ತರ್ ಈ ಹಿಂದೆ ಕೆಲವರು ಸರ್ಕಾರಿ ಜಾಗದಲ್ಲಿ ಅಕ್ರಮ ಮನೆ ಕಟ್ಟಿಕೊಂಡಿದ್ದು ಇದರ ಬಗ್ಗೆ ಮಾನ್ಯ ಲೋಕಾಯುಕ್ತಕ್ಕೆ ಕೆಲವರು ದೂರು ನೀಡಿದ್ದು ಲೋಕಾಯುಕ್ತ ತನಿಖೆ ನಡೆಯುತ್ತಿದೆ. ಪ್ರಕರಣ ಲೋಕಾಯುಕ್ತ ತನಿಖೆಯಲ್ಲಿದ್ದರೂ ಕೆಲವರು ಕಳೆದ ಒಂದು ವಾರದ ಹಿಂದೆ ಅಕ್ರಮ ಶೆಡ್ ಹಾಕಿದ್ದಾರೆ. ಅಕ್ರಮ ಶೆಡ್ ಹಾಕಿರುವವರು ಯಾರು ಎನ್ನುವ ಸ್ಪಷ್ಟ ಮಾಹಿತಿ ಇಲ್ಲದ ಕಾರಣ ನಿರ್ಮಾಣಗೊಂಡಿರುವ ಅಕ್ರಮ ಶೆಡ್ಡುಗಳ ಮೇಲೆ ತೆರವಿಗೆ ಸೂಚಿಸಿ ನೋಟೀಸ್ ಅಂಟಿಸಲಾಗಿದೆ. ಈ ಬಗ್ಗೆ ತಾಲೂಕು ಪಂಚಾಯತಿ ಕಾರ್ಯನಿರ್ವಹಣಾಧಿಕಾರಿಗಳಿಗೂ ಲಿಖಿತ ಮಾಹಿತಿ ನೀಡಿದ್ದು ಅವರು ಈಗಾಗಲೇ ಸ್ಥಳ ಪರಿಶೀಲನೆ ಮಾಡಿದ್ದಾರೆ. ಈ ನಡುವೆ ಸರ್ಕಾರಿ ರಜಾ ಅವಧಿಯನ್ನು ನೋಡಿಕೊಂಡು ಮತ್ತಷ್ಟು ಮಂದಿ ಕಲ್ಲು ಕಂಬಗಳನ್ನು ನೆಟ್ಟು ಅಕ್ರಮ ಶೆಡ್ ನಿರ್ಮಿಸುತ್ತಿರುವ ಮಾಹಿತಿಯಿದೆ. ಇದನ್ನು ಇಲಾಖೆಯ ಮೇಲಧಿಕಾರಿಗಳಿಗೆ ವರದಿ ಮಾಡುತ್ತೇನೆ. ಮೇಲಧಿಕಾರಿಗಳ ಸೂಚನೆಗೆ ಅನುಗುಣವಾಗಿ ಅಕ್ರಮ ಶೆಡ್ಡುಗಳ ತೆರವಿಗೆ ಕ್ರಮ ವಹಿಸುತ್ತೇನೆ ಎಂದಿದ್ದಾರೆ.

ಗ್ರಾಮ ಪಂಚಾಯತಿ ಆಡಳಿತಾಧಿಕಾರಿಗಳಾಗಿರುವ ತಾಲೂಕು ಪಶುವೈದ್ಯ ಇಲಾಖೆಯ ಅಧಿಕಾರಿ ಡಾ.ದೇವರಾಜು ಅಕ್ರಮ ಶೆಡ್ಡುಗಳ ನಿರ್ಮಾಣ ಇದೀಗ ನನ್ನ ಗಮನಕ್ಕೆ ಬಂದಿದೆ. ಸ್ಥಳ ಪರಿಶೀಲನೆ ಮಾಡಿ ಸರ್ಕಾರಿ ಆಸ್ತಿ ಸಂರಕ್ಷಣೆಯ ಬಗ್ಗೆ ಅಗತ್ಯ ಕ್ರಮ ವಹಿಸುತ್ತೇನೆ ಎಂದಿದ್ದಾರೆ.

# ಶಿರಾ ತಾಲೂಕಿಗೆ ಸಚಿವ ಡಾ. ಜಿ. ಪರಮೇಶ್ವರ್ ಭೇಟಿ



**ತುಮಕೂರು:** ಜಿಲ್ಲೆಯ ಶಿರಾ ತಾಲೂಕಿನಲ್ಲಿ ಆಲಿಕಲ್ಲು ಮಳೆಯಿಂದ ಹಾನಿಗೊಳಗಾದ ಬೆಳೆ ಪ್ರದೇಶಗಳಿಗೆ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರು ಭೇಟಿ ನೀಡಿ ಪರಿಶೀಲಿಸಿದರು.

ಆಲಿಕಲ್ಲು ಮಳೆಯಿಂದ ದಾಳಿಂಬೆ, ಅಡಿಕೆ, ರೇಷ್ಮೆ ಸೇರಿದಂತೆ ವಿವಿಧ ಬೆಳೆಗಳು ನಾಶವಾಗಿರುವ ಹಿನ್ನೆಲೆಯಲ್ಲಿ ರೈತರನ್ನು ಭೇಟಿಯಾಗಿ ಸಾಂತ್ವನ ಹೇಳಿದರು. ಬೆಳೆ ನಷ್ಟದ ಬಗ್ಗೆ ಸಂಪೂರ್ಣ ಮಾಹಿತಿ ಪಡೆದುಕೊಂಡ ಸಚಿವರು, ಪರಿಹಾರವನ್ನು ತ್ವರಿತಗತಿಯಲ್ಲಿ ಮಂಜೂರು ಮಾಡುವಂತೆ ಅಧಿಕಾರಿಗಳಿಗೆ ಸೂಚಿಸಿದರು. ಈ ಸಂದರ್ಭದಲ್ಲಿ ಅಡಿಕೆ ಬೆಳೆ ನಾಶವಾಗಿರುವ ರೈತ ಶಿವಣ್ಣ ಹಾಗೂ ಸುಮಾರು 10 ಎಕರೆ ದಾಳಿಂಬೆ ಬೆಳೆ ಹಾನಿಗೊಳಗಾದ ರೈತ ಮಹೇಶ್ ತಮ್ಮ ಸಮಸ್ಯೆಗಳನ್ನು ವಿವರಿಸಿದರು. ರೇಷ್ಮೆ ಬೆಳೆ ಹಾನಿಯನ್ನೂ ಸಚಿವರು ನೇರವಾಗಿ ವೀಕ್ಷಿಸಿದರು.

# ಶಸ್ತ್ರ ಚಿಕಿತ್ಸೆ ಫಲಕಾರಿ ಯಾಗದೆ ವ್ಯಕ್ತಿ ಸಂಕಷ್ಟಕ್ಕೆ: ನಷ್ಟ ಬರಿಸಿ ಕೊಡುವಂತೆ ಒತ್ತಾಯ

**ಪಿರಿಯಾಪಟ್ಟಣ:** ಕಾಲು ಮುರಿತದ ಶಸ್ತ್ರ ಚಿಕಿತ್ಸೆ ಫಲಕಾರಿ ಯಾಗದೆ ವ್ಯಕ್ತಿ ಯೋರ್ವ ಸಂಕಷ್ಟಕ್ಕೆ ಒಳಗಾಗಿದ್ದು, ನಷ್ಟ ಬರಿಸಿ ಕೊಡುವಂತೆ ಒತ್ತಾಯಿಸಿದ್ದಾರೆ.

ತಾಲೂಕಿನ ಭೂತನಳ್ಳಿ ಗ್ರಾಮದ ರಘು ರವರ ಪುತ್ರ ನವೀನ್ ಎಂಬುವವರು ನೊಂದ ವ್ಯಕ್ತಿಯಾಗಿದ್ದಾರೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯವಾಗಿ ಸಾಮಾಜಿಕ ಹೋರಾಟಗಾರರಾದ ಮೋಹನ್ ರಾಜ್ ಮಾತನಾಡಿ ನವೀನ್ ರವರು ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ಸಂದರ್ಭ ಆಯಾ ತಪ್ಪಿ ಗುಂಡಿಗೆ ಬಿದ್ದ ಪರಿಣಾಮ ಎಡಗಾಲಿನ ಮೂಳೆ ಮುರಿತವಾಗಿದೆ. ಚಿಕಿತ್ಸೆಗೊಂದು ಮೈಸೂರು ಜಿಲ್ಲಾ ಆಸ್ಪತ್ರೆಗೆ ತೆರಳಿದ ಸಂದರ್ಭ ಡಾ. ಅರವಿಂದ್ ಎಂಬುವವರು ಕಳೆದ 2024ರ ಮಾರ್ಚ್ ತಿಂಗಳಿನಲ್ಲಿ ಕಾಲಿನ ಶಸ್ತ್ರ ಚಿಕಿತ್ಸೆ ಮಾಡಿಸಿದ್ದಾರೆ. ಅದರಂತೆ 15 ದಿನಗಳ ಕಾಲ ಒಳ ರೋಗಿಯಾಗಿ ಚಿಕಿತ್ಸೆ ಪಡೆದು ಬಿಡುಗಡೆ ಹೊಂದಿದ ನಂತರ ಪ್ರತಿ ತಿಂಗಳು ಆಸ್ಪತ್ರೆಗೆ ಆಗಮಿಸಿ ಚಿಕಿತ್ಸೆ ಪಡೆಯಬೇಕು ಎಂದು ಸೂಚಿಸಿದರು.ಇದರಂತೆ ತಿಂಗಳಿಗೊಮ್ಮೆ ಆಸ್ಪತ್ರೆಗೆ ತೆರಳಿ ಚಿಕಿತ್ಸೆ ಪಡೆಯುತ್ತಿದ್ದ ಈತನು




ಕೆಲವು ತಿಂಗಳ ನಂತರ ವಿಪರೀತ ನೋವು ಕಾಣಿಸಿಕೊಂಡ ಹಿನ್ನೆಲೆ ಮತ್ತೊಮ್ಮೆ ವೈದ್ಯರ ಸಲಹೆಯಂತೆ ಎಕ್ಸರೇ ತೆಗೆಸಿದ್ದಾರೆ. ಈ ಎಕ್ಸರೇಯಲ್ಲಿ ಶಸ್ತ್ರ ಚಿಕಿತ್ಸೆಯೂ ಯಶಸ್ವಿಯಾಗದೆ ಕಾಲಿನಲ್ಲಿ ಕೀವು ತುಂಬಿಕೊಂಡಿದೆ ಎಂದು ಕಂಡುಬಂದಿರುತ್ತದೆ.ಈ ವಿಷಯವನ್ನು ವೈದ್ಯರಿಗೆ ತಿಳಿಸದರೆ ನಿರ್ಲಕ್ಷತನದ ಉತ್ತರ ನೀಡಿದ್ದಾರೆ.

ಇದರಿಂದಾಗಿ ಈತನು ಕಾಮಾಕ್ಷಿ ಆಸ್ಪತ್ರೆಯ ಡಾ. ಮಧುಸೂಧನ್ ರವರ ಬಳಿ ತೆರಳಿ ತಪಾಸಣೆ ಮಾಡಿಸಿ ಅಲ್ಲಿಯೂ ಕೂಡ ಶಸ್ತ್ರ ಚಿಕಿತ್ಸೆ ಮಾಡಿರುವುದು ವಿಫಲವಾಗಿದ್ದು ಮತ್ತೊಮ್ಮೆ ಶಸ್ತ್ರ ಚಿಕಿತ್ಸೆ ಮಾಡಬೇಕು ಎಂದು ತಿಳಿಸಿದ ಪರಿಣಾಮ ಡಾ. ಮಧುಸೂದನ್ ಮತ್ತು ಡಾ. ರವರುಗಳು ಕಾಲಿನ ಶಸ್ತ್ರಚಿಕಿತ್ಸೆ ಮಾಡಿರುತ್ತಾರೆ. ಆದರೆ ಆದರೂ ಕೂಡ ಕಾಲಿನ ನೋವಾಗಲಿ, ಗಾಯವಾಗಲಿ ಗುಣವಾಗದ ಪರಿಣಾಮ ವೈದ್ಯರನ್ನು ಸಂಪರ್ಕಿಸಿದಾಗ ಶಸ್ತ್ರ ಚಿಕಿತ್ಸೆ ಮಾಡುವುದು ನಮ್ಮ ಕೆಲಸ ಅದು ಗುಣಮುಖವಾಗುವುದರಲ್ಲಿ ನಾವು ಜವಾಬ್ದಾರರಲ್ಲ ಎಂದು ಬೇಜವಾಬ್ದಾರಿ ಉತ್ತರವನ್ನು ಹೇಳುತ್ತಿದ್ದಾರೆ. ಆದರೆ ಶಸ್ತ್ರ ಚಿಕಿತ್ಸೆಗಾಗಿ ಈತನು 10 ಲಕ್ಷ ರೂಗಳಿಗೂ ಅಧಿಕ ವ್ಯಯ ಮಾಡಿದ್ದಾರೆ.

ಇದರಿಂದ ನೊಂದ ವ್ಯಕ್ತಿಯು ಮೈಸೂರು ಜಿಲ್ಲಾ ಆರೋಗ್ಯ ಅಧಿಕಾರಿ ಯವರಿಗೆ ಈ ವೈದ್ಯರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವಂತೆ ದೂರು ನೀಡಿದ್ದು ಇಲ್ಲಿಯವರೆಗೂ ಯಾವುದೇ ಕಾನೂನು ರೀತಿಯ ಕ್ರಮವಾಗಿಲ್ಲ. ಆದ್ದರಿಂದ್ದ ನೊಂದ ವ್ಯಕ್ತಿಗೆ ಆಗಿರುವ ಅನ್ಯಾಯಕ್ಕೆ ವೈದ್ಯರ ಮೇಲೆ ಕಾನೂನು ಕ್ರಮವಾಗಬೇಕು ಹಾಗೂ ಬಡವನಾದ ನೊಂದ ವ್ಯಕ್ತಿಗೆ ನಷ್ಟವನ್ನು ವೈದ್ಯರಿಂದ ಬರಿಸಿ ಕೊಡಬೇಕು ಇಲ್ಲದಿದ್ದಲ್ಲಿ ಕಾನೂನು ಹೋರಾಟ ಮುಂದುವರಿಸುವುದಾಗಿ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾಜಿ ಗ್ರಾಪಂ ಸದಸ್ಯ ಚೆಲುವರಾಜು, ಭೀಮ್ ಆರ್ಮಿ ಗಿರೀಶ್, ಮಹದೇವ್ ತಿಮಕಾಪುರ ಹಾಜರಿದ್ದರು.

## ಏ.8ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ "ಜಿಲ್ಲಾ ಮಟ್ಟದ ಬೃಹತ್ ಜನತಾ ದರ್ಶನ"

**ತುಮಕೂರು:** ಜಿಲ್ಲೆಯ ನಾಗರಿಕರಿಂದ ಅಹವಾಲುಗಳನ್ನು ಸ್ವೀಕರಿಸಿ/ಸಮಸ್ಯೆಗಳನ್ನು ಆಲಿಸಿ ಸಮಸ್ಯೆಗಳಿಗೆ ಪರಿಹಾರೋಪಾಯವನ್ನು ಒದಗಿಸಲು ಏಪ್ರಿಲ್ 8ರಂದು ಬೆಳಿಗ್ಗೆ 11 ಗಂಟೆಗೆ ತುಮಕೂರಿನ ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಗೃಹ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಅವರ ಅಧ್ಯಕ್ಷತೆಯಲ್ಲಿ "ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮ"ವನ್ನು ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿ ಶುಭ ಕಲ್ಯಾಣ್ ತಿಳಿಸಿದ್ದಾರೆ.

ಈಗಾಗಲೇ ತುಮಕೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಿ ಸಾರ್ವಜನಿಕರ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರಗಳನ್ನು ನೀಡಲಾಗಿದೆ. ಅಲ್ಲದೆ, ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ಜಟಿಲ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಸಾರ್ವಜನಿಕರ ಅಹವಾಲುಗಳಿಗೆ ಪರಿಹಾರವನ್ನು ನೀಡಲಾಗಿದೆ. ಅಂತೆಯೇ, ಏಪ್ರಿಲ್ 8ರಂದು ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಅಂದು ಬೆಳಿಗ್ಗೆ 11 ಗಂಟೆಗೆ ನಗರ ಕೇಂದ್ರ ಗ್ರಂಥಾಲಯ ಸಭಾಂಗಣದಲ್ಲಿ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಈ ಜಾಗದಲ್ಲಿ 10 ವಿವಿಧ ಪ್ರಮುಖ ಇಲಾಖೆಗಳ ಮಳಿಗೆಗಳನ್ನು ತೆರೆಯಲಾಗಿದ್ದು, ಸಾರ್ವಜನಿಕರಿಂದ ಅಹವಾಲುಗಳನ್ನು ಸ್ವೀಕರಿಸಲಾಗುವುದು. ಅಲ್ಲದೆ, ಸಂಬಂಧಿಸಿದ ಇಲಾಖೆಯ ಮುಖ್ಯಸ್ಥರು ಸ್ಥಳದಲ್ಲಿ ಹಾಜರಿದ್ದು, ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಕಾರ್ಯಕ್ರಮ ಇದಾಗಿದೆ ಎಂದು ಅವರು ತಿಳಿಸಿದ್ದಾರೆ.

ಕಾರ್ಯಕ್ರಮ ಸ್ಥಳದಲ್ಲಿ ನಿರ್ಮಿಸಲಾಗುವ ತಾತ್ಕಾಲಿಕ ಮಳಿಗೆಗಳಲ್ಲಿ ಐಪಿಜಿಆರ್‌ಎಸ್ ತಂತ್ರಾಂಶ ಒಳಗೊಂಡ ಡಾಟಾ ಎಂಟ್ರಿ, ಕಂಪ್ಯೂಟರ್ ವ್ಯವಸ್ಥೆ, ಇತ್ಯಾದಿ ಸೌಲಭ್ಯಗಳನ್ನು ಒದಗಿಸಲಾಗಿದ್ದು, ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮದಲ್ಲಿ ಸಾರ್ವಜನಿಕರ ಸಮಸ್ಯೆಗಳಿಗೆ ಪರಿಹಾರ ಒದಗಿಸುವ ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುವುದು. ಈ ಸಂಬಂಧ ಈಗಾಗಲೇ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳಿಗೆ ಕಾರ್ಯಕ್ರಮ ರೂಪಿಸುವ ಸಂಬಂಧ ಆದೇಶವನ್ನು ನೀಡಲಾಗಿದ್ದು, ತಮಗೆ ವಹಿಸಿದ ಜವಾಬ್ದಾರಿಯನ್ನು ಲೋಪವಿಲ್ಲದೆ ನಿರ್ವಹಿಸುವಂತೆ ಸೂಚಿಸಲಾಗಿದೆ ಎಂದು ಅವರು ತಿಳಿಸಿದ್ದಾರೆ. ಜಿಲ್ಲಾದ್ಯಂತ ಆಗಮಿಸುವ ಸಾರ್ವಜನಿಕರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಎಲ್ಲಾ ಸೌಲಭ್ಯಗಳನ್ನು ಕಾರ್ಯಕ್ರಮ ನಡೆಯುವ ಸ್ಥಳದಲ್ಲಿ ಒದಗಿಸಲು ಕ್ರಮವಹಿಸಲಾಗಿದೆ. ಈ ಹಿನ್ನೆಲೆಯಲ್ಲಿ ಸಾರ್ವಜನಿಕರು ಜಿಲ್ಲಾ ಮಟ್ಟದ ಜನತಾ ದರ್ಶನ ಕಾರ್ಯಕ್ರಮಕ್ಕೆ ಆಗಮಿಸುವಂತೆ ಅವರು ತಿಳಿಸಿದ್ದಾರೆ.

# 100 ಹಳ್ಳಿಗಳಲ್ಲಿ ನೀರಿಗೆ ತತ್ವಾರ; ತೀವ್ರ ಕ್ರಮಕ್ಕೆ ಕಟ್ಟುನಿಟ್ಟಿನ ಸೂಚನೆ : ಡಾ: ಜಿ. ಪರಮೇಶ್ವರ

**ತುಮಕೂರು:** ಮಾರ್ಚ್ 15ರ ನಂತರ ತೀವ್ರ ಬೇಸಿಗೆ ಆರಂಭವಾಗಿದ್ದು, ತುಮಕೂರು ಜಿಲ್ಲೆಯಲ್ಲಿ 100 ಹಳ್ಳಿಗಳಲ್ಲಿ ಕುಡಿಯುವ ನೀರಿಗೆ ಸಮಸ್ಯೆ ಆಗುವ ಬಗ್ಗೆ ಗುರುತಿಸಿದ್ದು, ಈ ಹಳ್ಳಿಗಳಿಗೆ ಕುಡಿಯುವ ನೀರಿನ ಯಾವುದೇ ಸಮಸ್ಯೆಯಾಗದಿರುವಂತೆ ಸೂಕ್ತ ಕ್ರಮ ವಹಿಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಗೃಹ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ಹೇಳಿದ್ದಾರೆ.

ನಗರದ ಸ್ಮಾರ್ಟ್ ಸಿಟಿ ಸಭಾಂಗಣದಲ್ಲಿ ಜಿಲ್ಲೆಯ ಎಲ್ಲಾ ಹಂತದ ಅಧಿಕಾರಿಗಳೊಂದಿಗೆ ಕುಡಿಯುವ ನೀರಿನ ಕುರಿತು ಪ್ರಗತಿ ಪರಿಶೀಲನಾ ಸಭೆ ನಡೆಸಿದ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ತುಮಕೂರು ಜಿಲ್ಲೆಯ ಪಾವಗಡ ಹೊರತುಪಡಿಸಿ ಎಲ್ಲಾ ತಾಲ್ಲೂಕುಗಳೂ ಸೇರಿದಂತೆ 100 ಹಳ್ಳಿಗಳಲ್ಲಿ ಕುಡಿಯುವ ನೀರಿನ ತತ್ವಾರ ಎದುರಾಗಬಹುದೆಂದು ಗುರುತಿಸಲಾಗಿದ್ದು, ಈ ಹಳ್ಳಿಗಳಲ್ಲಿ ಈಗಾಗಲೇ ಟ್ಯಾಂಕರ್ ಮೂಲಕ, ಖಾಸಗಿ ಬೋರ್‌ವೆಲ್‌ಗಳ ಮೂಲಕ ಹಾಗೂ ಸಮೀಪದ ನೀರಿನ ಲಭ್ಯತೆಯನುಸಾರ ಸರಬರಾಜಿಗೆ



ಕ್ರಮಕೈಗೊಳ್ಳಲಾಗಿದೆ. ಇದಲ್ಲದೆ 4ನೇ ಹಂತವಾಗಿ ಈ ಮೂರೂ ಕ್ರಮಗಳು ಸಾಧ್ಯವಾಗದಿದ್ದಲ್ಲಿ ಬೋರ್‌ವೆಲ್ ಕೊರೆಸಿ ನೀರು ಸರಬರಾಜು ಮಾಡುವಂತೆ ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಬೋರ್‌ವೆಲ್ ಕೊರೆಸಲು ಬೇಕಿರುವ ಅನುಮತಿಯನ್ನು ಜಿಲ್ಲಾಧಿಕಾರಿ ಅಥವಾ ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಕ್ಷಣ ನೀಡುವಂತೆ ಹಾಗೂ ಬೆಸ್ಕಾಂ ಅಧಿಕಾರಿಗಳು ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ ತಕ್ಷಣ ವಿದ್ಯುತ್ ಸಂಪರ್ಕ ಕಲ್ಪಿಸುವಂತೆ ಸೂಚನೆ ನೀಡಲಾಗಿದೆ. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪ್ರಸಕ್ತ ಬೇಸಿಗೆಗೆ ಯಾವುದೇ ನೀರಿನ ಸಮಸ್ಯೆ ಉದ್ಭವಿಸದಂತೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ತಿಳಿಸಿದರು.

ಭಾರತೀಯ ಭೂವಿಜ್ಞಾನ ಸಮೀಕ್ಷೆ ವರದಿ ಪ್ರಕಾರ ತುಮಕೂರು ಜಿಲ್ಲೆಯ ಬಹುತೇಕ ಎಲ್ಲಾ ಪ್ರದೇಶವು ಭೂಭಾಗದ ತಳಭಾಗದಲ್ಲಿ ಗ್ರಾನೈಟ್ ಪದರ ಇರುವುದನ್ನು ಪತ್ತೆಹಚ್ಚಿದ್ದು, ಈ ಕಾರಣದಿಂದ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ನೀರಿನ ಅಂತರ್ಜಲಮಟ್ಟ ಬೇಗ ಕುಸಿಯಲು ಕಾರಣವಾಗಿದೆ. ಇದರಲ್ಲಿ ಕೋಲಾರ ಮತ್ತು ತುಮಕೂರು ಜಿಲ್ಲೆಗಳನ್ನು ಅತಿಹೆಚ್ಚು ನೀರಿನ ಶೋಷಣೆ ಮಾಡಿದ ಜಿಲ್ಲೆಗಳೆಂದು ಅದು ಗುರುತಿಸಿದೆ. ಈ ಹಿಂದೆ ಕೋಲಾರ ಜಿಲ್ಲೆಯಲ್ಲಿ ಬೋರ್‌ವೆಲ್ ಕೊರೆಯದಂತೆ ನಿರ್ಬಂಧ ಹೇರಲಾಗಿತ್ತು. ಅಂತೆಯೇ, ತುಮಕೂರು ಜಿಲ್ಲೆಯಲ್ಲಿಯೂ ಅಂತಹ ಸ್ಥಿತಿ ನಿರ್ಮಾಣವಾಗಲು ಅಚ್ಚರಿಯಿಲ್ಲ. ಈ ಹಿನ್ನೆಲೆಯಲ್ಲಿ ಅಂತರ್ಜಲ ವೃದ್ಧಿಸಿಕೊಳ್ಳುವ ಹಾಗೂ ನೀರಿನ ಸಮಸ್ಯೆ ನೀಗಿಸಲು ಶಾಶ್ವತ ಯೋಜನೆಗಳನ್ನು ರೂಪಿಸುವಂತೆ ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಅವರು ತಿಳಿಸಿದರು.

ನಗರ ಸ್ಥಳೀಯ ಸಂಸ್ಥೆಗಳಲ್ಲೂ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆಗಳಿದ್ದು, ಕನಿಷ್ಠ 2 ದಿನಕ್ಕೊಮ್ಮೆಯಾದರೂ ನೀರು ಸರಬರಾಜು ಮಾಡುವ ಮೂಲಕ ಸಾರ್ವಜನಿಕರಿಗೆ ನೆರವಾಗುವಂತೆ ಸೂಚಿಸಿರುವುದಾಗಿ ಸಚಿವರು ತಿಳಿಸಿದರು.

ತುಮಕೂರು ನಗರದ ನೀರಿನ ಮೂಲವಾಗಿರುವ ಹೇಮಾವತಿ ನೀರಿನ ಶೇಖರಣಾ ಘಟಕ ಬುಗುಡನಹಳ್ಳಿ ಕೆರೆಯಲ್ಲಿ ನೀರಿನ ಪ್ರಮಾಣದ ಆಧಾರದ ಮೇಲೆ ಹೇಮಾವತಿ ನೀರು ಹರಿಸುವಂತೆ ಈಗಾಗಲೇ ಹಾಸನದ ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಚರ್ಚಿಸಲಾಗಿದೆ. ಜಿಲ್ಲಾಡಳಿತವು ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಲಿದ್ದು, ಕನಿಷ್ಠ 2 ಟಿಎಂಸಿ ನೀರು ಹರಿಸುವಂತೆ ಕೋರುವುದಾಗಿ ಅವರು ತಿಳಿಸಿದರು.

ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಬಿರುಬೇಸಿಗೆ ಕಾರಣ ಕಾಡ್ಗಿಚ್ಚು ಹಬ್ಬುವ ಸಂದರ್ಭವಿದೆ. ಈ ಹಿನ್ನೆಲೆಯಲ್ಲಿ ಅಗ್ನಿಶಾಮಕ ಇಲಾಖೆಯವರು ತಮ್ಮ ವ್ಯಾಪ್ತಿಯ ಘಟಕಗಳೊಂದಿಗೆ ಪರಿಶೀಲನೆ ನಡೆಸಿ ತೀವ್ರ ನಿಗಾವಹಿಸುವಂತೆ ಸೂಚಿಸಲಾಗಿದೆ. ಅಲ್ಲದೆ, ಜಿಲ್ಲೆಯ ಕೆಲವೆಡೆ ಚಿರತೆಯ ಕಾಟ ಹೆಚ್ಚಿರುವ ಕಾರಣ ಸಾಕಷ್ಟು ಬೋನುಗಳ ದಾಸ್ತಾನು ಇಟ್ಟುಕೊಳ್ಳುವಂತೆ ಸೂಚಿಸಿರುವುದಾಗಿ ಅವರು ಹೇಳಿದರು.

ಮಾರ್ಚ್ 17ರಂದು ಜಿಲ್ಲೆಯ ಶಿರಾ ಭಾಗದಲ್ಲಿ ಸುರಿದ ಭಾರಿ ಆಲಿಕಲ್ಲು ಮಳೆಯಿಂದಾಗಿ ಅಂದಾಜು ಸುಮಾರು 4ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ದಾಳಿಂಬೆ, ಅಡಿಕೆ, ರೇಷ್ಮೆ ಇತ್ಯಾದಿ ಬೆಳೆಗಳು ನಷ್ಟವಾಗಿವೆ. ಈ ಬಗ್ಗೆ ಮಂಗಳವಾರ ಸ್ಥಳ ಪರಿಶೀಲನೆ ನಡೆಸಲಾಯಿತು. ನಷ್ಟಕ್ಕೊಳಗಾದ ರೈತರಿಗೆ ಬೆಳೆ ವಿಮೆ ಪರಿಹಾರ ನೀಡುವ ಸಂಬಂಧ ಹಾಗೂ ವಿಪತ್ತು ನಿರ್ವಹಣೆ ನಿಧಿಯಿಂದ ರೈತರಿಗೆ ಪರಿಹಾರ ನೀಡುವ ಸಂಬಂಧ ಚರ್ಚಿಸಲಾಗಿದೆ ಎಂದರು.

ಕೋಟ್ಯಾಂತರ ರೂಪಾಯಿ ಹೂಡಿಕೆ ಮಾಡಿ ತೋಟಗಾರಿಕೆ ಬೆಳೆ ಬೆಳೆದಿರುವ ರೈತರು ಸಂಕಷ್ಟಕ್ಕೀಡಾಗಿರುವುದು ಅತ್ಯಂತ ನೋವಿನ ವಿಚಾರ. ಸರ್ಕಾರ ಎಂದಿಗೂ ರೈತರ ಪರವಾಗಿ ನಿಲ್ಲಲಿದ್ದು, ಪರಿಹಾರ ಒದಗಿಸಲು ಸೂಕ್ತ ಕ್ರಮವಹಿಸಲಿದೆ. ರೈತರು ಯಾವುದೇ ಕಾರಣಕ್ಕೂ ಆತಂಕ ಪಡುವ ಅಗತ್ಯವಿಲ್ಲ ಎಂದು ಸಚಿವರು ತಿಳಿಸಿದರು.

---

# ಎದೆಯ ದನಿಗೂ ಮಿಗಿಲಾದ ಶಾಸ್ತ್ರ ಇದೆಯೇ ?




ವೀಣಾ ಹೇಮಂತ್‌ಗೌಡ ಪಾಟೀಲ್

ಕನ್ನಡದ ವಿಶ್ವ ಮಾನವ ತತ್ವವನ್ನು ಇಡೀ ಮನುಕುಲವು ಒಪ್ಪಿಕೊಳ್ಳಲಿ ಎಂದು ಹೇಳಿದ ಹೆಮ್ಮೆಯ ರಾಷ್ಟ್ರಕವಿ ಕುವೆಂಪು ಅವರು ಬಹಿರಂಗಪಡಿಸಿರುವ ಸಾರ್ವಕಾಲಿಕ ಸತ್ಯದ ಅರಿವಿನ ಬೆಳಕು ನಮಗೆ ಬದುಕಿನಲ್ಲಿ ಹೊಸ ಹೊಳಹುಗಳನ್ನು ನೀಡುತ್ತದೆ.

ನಮ್ಮ ಶಾಸ್ತ್ರ ಪುರಾಣಗಳು ಪುಣ್ಯ ಕಥೆಗಳು ವಚನಕಾರರ ವಚನಗಳು, ಕುರಾನ್ ಹಾಗೂ ಬೈಬಲ್ ನಂತಹ ಧರ್ಮ ಗ್ರಂಥಗಳನ್ನು ಕೇಳುತ್ತಾ ಬಂದಿರುವ ನಾವುಗಳು ಇದರ ಒಟ್ಟು ಸಾರವನ್ನು ಅರ್ಥೈಸಿಕೊಳ್ಳುವಲ್ಲಿ ತುಸು ಹಿಂದೆ ಬಿದ್ದಿದ್ದೇವೆ ಎಂದರೆ ಖಂಡಿತವಾಗಿಯೂ ತಪ್ಪಿಲ್ಲ.

ನಿಮ್ಮ ಮನೆಯ ಮುಂದೆ ಹಸಿವೆ, ಬಾಯಾರಿಕೆಗಳಿಂದ ಬಳಲಿ ಬೆಂಡಾದ ವ್ಯಕ್ತಿ ಬಂದು ನೀರನ್ನು ಕೇಳಿದರೆ ನೀವು ಆತನಿಗೆ ನೀರು ಕೊಡುತ್ತೀರೇ ಹೊರತು ಆತ ಯಾವ ಜಾತಿ ಧರ್ಮ ಎಂದು ಕೇಳುವುದಿಲ್ಲ. ಉತ್ತಮನೋ ನೀಚನೋ ಎಂದು ಎಣಿಸುವುದಿಲ್ಲ... ಅದುವೇ ನಿಜವಾದ ಮಾನವ ಧರ್ಮ. ಅದುವೇ ನಮ್ಮ ಎದೆಯಾಳದಿಂದ ಹೊಮ್ಮಿದ ಮಾನವೀಯತೆಯ ದನಿಗೆ ನಾವು ನೀಡುವ ಪ್ರತಿಕ್ರಿಯೆ.

ಮನು ಸ್ಮೃತಿಯಾಗಲೀ, ಪುರಾಣಗಳೇ ಆಗಲಿ ಮಾನವೀಯ ಧರ್ಮವನ್ನು ಹೊರತುಪಡಿಸಿ ಏನನ್ನೂ ಬರೆದಿಲ್ಲ..... ಆದರೆ ಬರೆಯದೇ ಇದ್ದರೂ ಕೂಡ ಉಳಿದಿರುವ ಜಗತ್ತಿನ ಏಕೈಕ ಅಲಿಖಿತವಾದರೂ ಎಲ್ಲರೂ ಪಾಲಿಸಲೇಬೇಕಾದದ್ದು 1ವಸುದೈವ ಕುಟುಂಬಕಂ' ಎಂಬುದು. ಇಡೀ ವಿಶ್ವವೇ ನಮ್ಮ ಕುಟುಂಬವಾದಾಗ ಇಲ್ಲಿ ನೆರೆಹೊರೆ ಎಂಬ ಮಾತೇ ಬರುವುದಿಲ್ಲ.



ನಾವೆಲ್ಲರೂ ಒಂದೇ ಕುಟುಂಬದವರಾದಾಗ ಒಂದೇ ಧರ್ಮವನ್ನು ಪಾಲಿಸಲೇಬೇಕು ಆ ಧರ್ಮ ಮಾನವ ಧರ್ಮ... ಅದುವೇ ವಿಶ್ವ ಮಾನವ ಧರ್ಮ.

ಹಸಿದವರಿಗೆ ಅನ್ನ ನೀಡಲು ಬಾಯಾರಿದವರಿಗೆ ನೀರು ಕೊಡಲು ಮನು ಸ್ಮೃತಿಯಲ್ಲಿ ಏನು ಬರೆದಿದೆ ಎಂದು ನೋಡುವ ಅವಶ್ಯಕತೆ ಇಲ್ಲ. ನೊಂದವರ ಕಣ್ಣೀರು ಒರೆಸಿ ಸಾಂತ್ವನ ಹೇಳಲು ಶಾಸ್ತ್ರ ಪುರಾಣಗಳ ಅವಶ್ಯಕತೆ ಇಲ್ಲ ಎಂದು ವಿಶ್ವಮಾನವ ಧರ್ಮದ ನೇತಾರರಾಗಿ ನಮ್ಮ ರಾಷ್ಟ್ರಕವಿ ಕುವೆಂಪು ಅವರು ಎದೆಯ ದನಿಗೂ ಮಿಗಿಲಾದ ಶಾಸ್ತ್ರವಿಹುದೇನು? ನಿನ್ನೆದೆಯ ದನಿಗೆ ನೀನು ಕಿವಿಯಾಗು ಎಂದು ಅತ್ಯಂತ ಉದಾತ್ತವಾಗಿ ಹೇಳಿದ್ದಾರೆ ಅಲ್ಲವೇ ?

ಜನರು ಹೇಳುವಂತೆ ಹೀನಕುಲದ ಮಗು ನೀರಲ್ಲಿ ಮುಳುಗುತ್ತಿದ್ದರೆ ಮುಟ್ಟಿದರೆ ಬ್ರಹ್ಮತ್ವ ಕೆಟ್ಟುಹೋಗುವುದೆಂದು ಸುಮ್ಮನಿದ್ದರೆ ಮೇಲುಜಾತಿಯವರ ಶಾಸ್ತ್ರಕ್ಕೆ ಅದು ಸಮ್ಮತವೇನು.

ದಯವಿಲ್ಲದ ಧರ್ಮ ಅದಾವುದಯ್ಯ? ದಯೆಯೇ ಧರ್ಮದ ಮೂಲವಯ್ಯ? ದಯಬೇಕು ಸಕಲ ಪ್ರಾಣಿಗಳಲ್ಲಿ ಎಂಬ ಬಸವಣ್ಣನವರ ವಚನ ನಮಗೆ ಧರ್ಮದ ಮೂಲ ದಯದಲ್ಲಿ ಇದೆ ಎಂಬುದನ್ನು ಆ ದಯೆಯನ್ನು ನಾವು ಪಾಲಿಸಿದರೆ ಅದುವೇ ನಮಗೆ ಮನುಷ್ಯ ಜನ್ಮದ ಸಾರ್ಥಕತೆಯ ಕುರಿತು ಹೇಳುತ್ತದೆ ಎಂದು ಹೇಳಿಲ್ಲವೇ ?

ಅತ್ಯಂತ ಚಿಂತಾಜನಕ ಸ್ಥಿತಿಯಲ್ಲಿರುವ ಮಗುವಿಗೆ ರಕ್ತದ ಕೊರತೆ ಉಂಟಾದಾಗ ಆ ರಕ್ತವನ್ನು ಯಾರಿಂದ ತೆಗೆದು ಹಾಕಿದರೂ ಸರಿಯೇ ಮಗುವಿನ ಪ್ರಾಣ ಉಳಿಯಬೇಕಾಗಿರುವುದು ಮುಖ್ಯವೇ ಹೊರತು ಅದು ಯಾರ ದೇಹದ ರಕ್ತ ಎಂಬುದು ಅಲ್ಲ.

ಅಂತೆಯೇ ವೈದ್ಯನಾದವನು ತಾನು ನೋಡುವ ಪ್ರತಿಯೊಂದು ರೋಗಿಯಲ್ಲೂ ದೇವರನ್ನು ಕಾಣುತ್ತೇನೆ ಯಾರಲ್ಲೂ ಬೇದ ಭಾವ ಮಾಡುವುದಿಲ್ಲ ಎಂದು ಶಪಥ ಮಾಡಿ ತನ್ನ ವೃತ್ತಿಯನ್ನು ಆರಂಭಿಸಲು ಕಾರಣ ಮಾನವೀಯತೆಯ ಕುರಿತಾದ ನಮ್ಮ ಮೌಲ್ಯಗಳು.

ನಮ್ಮೆಲ್ಲರ ನೆಚ್ಚಿನ ಇನ್ಫೋಸಿಸ್ ಪ್ರತಿಷ್ಠಾನದ ಧರ್ಮದರ್ಶಿಯಾಗಿ ಕಾರ್ಯನಿರ್ವಹಿಸಿದ ಸುಧಾ ಮೂರ್ತಿಯವರು ಅತ್ಯಂತ ಪುಟ್ಟ ಹಳ್ಳಿಯಲ್ಲಿ ಹುಟ್ಟಿದ ತನ್ನ ಅಜ್ಜಿ, ಮಡಿ ಮೈಲಿಗೆಗಳನ್ನು ಆಚರಿಸುತ್ತಿದ್ದರೂ ಕೂಡ ತಾವು ಮುಟ್ಟಿಸಿಕೊಳ್ಳಬಾರದು ಎಂದು ಹೇಳುವ ತಮ್ಮ ಧರ್ಮದ ನಿಲುವುಗಳನ್ನು ಮಾನವೀಯ ನೆಲೆಯ ಹಿನ್ನೆಲೆಯಲ್ಲಿ ಒಪ್ಪುತ್ತಿರಲಿಲ್ಲ ಮಾತ್ರವಲ್ಲ ತಮ್ಮದೇ ಊರಿನ ಮುಸಲ್ಮಾನ ವ್ಯಕ್ತಿಯೊಬ್ಬನ ಪತ್ನಿಯ ಹೆರಿಗೆ ಸಮಯದಲ್ಲಿ ಅಪರಾತ್ರಿಯಲ್ಲಿ ಅವರ ಮನೆಗೆ ಹೋಗಿ ಹೆರಿಗೆ ಮಾಡಿಸಿದ್ದಲ್ಲದೆ ಕೂಸು ಮತ್ತು ಬಾಣಂತಿಗೆ ನೀರು ಹಾಕಿ ಆ ಎಡ ಹೊತ್ತಿನಲ್ಲಿ ಅವರಿಗೆ ಬಿಸಿಬಿಸಿಯಾದ ಗಂಜಿ ಮಾಡಿ ಬಡಿಸಿ ಮನೆಗೆ ಬಂದು ಸ್ನಾನ ಮಾಡಿ ಮಿಂದು ಮಡಿಯುಟ್ಟು ಆಹಾರವನ್ನು ಸೇವಿಸಿದ್ದನ್ನು ಅವರು ಹಲವು ಬಾರಿ ನೆನೆದಿದ್ದಾರೆ. ಇಲ್ಲಿ ಜಾತಿಗಿಂತ ಮಾನವೀಯ ಸೆಲೆಗಳು, ಪ್ರಮುಖ ಪಾತ್ರವನ್ನು ವಹಿಸಿವೆ.

ಮತ್ತೊಂದು ಘಟನೆಯನ್ನು ನೆನೆದು ಹೇಳುವ ಸುಧಾ ಮೂರ್ತಿಯವರು ಅವರ ಅಜ್ಜಿ ಆ ಊರಿನಲ್ಲಿರುವ ಜಂಗಮರ ಮಠಕ್ಕೆ ತಮ್ಮ ಮನೆಯಿಂದ ಒಂದು ದಿನದ ಜಂಗಮ ದಾಸೋಹಕ್ಕೆ ಅಡುಗೆ ಮಾಡಿ ಕೊಟ್ಟು ಬರುವ ಪದ್ಧತಿಯನ್ನು ರೂಢಿಸಿಕೊಂಡದ್ದನ್ನು ಹೇಳುತ್ತಾರೆ.

ಇದೆಲ್ಲ ಪದ್ಧತಿಗಳ ಮುನ್ನಡೆಯಲ್ಲಿ ನಾವು ಕಂಡುಕೊಳ್ಳುವುದು ಮಾನವೀಯ ನೆಲೆ.

ಇದೇ ಮಾತನ್ನು ಕನ್ನಡದ ಖ್ಯಾತ ಕಾದಂಬರಿಗಾರ್ತಿ ಎಂ ಕೆ ಇಂದಿರಾ ಅವರು ತಮ್ಮ ಪ್ರಸಿದ್ಧವಾದ ತೃತೀಯ ಕಾದಂಬರಿಯಲ್ಲಿಯೂ ಕೂಡ ಪಣಿಯಮ್ಮನ ಪಾತ್ರಧಾರಿಯ ಮೂಲಕ ಹೇಳಿಸಿದ್ದಾರೆ. ಇನ್ನು ಎಸ್ ಎಲ್ ಭೈರಪ್ಪ ಅವರ 'ಗೃಹಭಂಗ' ಕೃತಿಯಲ್ಲಿಯೂ ಕೂಡ ನಂಜಿ ಪಾತ್ರಧಾರಿಗೆ ಮಠದ ಅಯ್ಯನವರು ಈ ಮಾತುಗಳ ಅರ್ಥವೇ ಹೊರಸೂಸುವಂತೆ ಪುನರುಚ್ಚರಿಸಿದ್ದಾರೆ.

ನೋಡಿದಿರಾ ಸ್ನೇಹಿತರೆ, ನಾನು ನೀನು ಅವರು ಇವರು ಎಂದು ನಾವೆಲ್ಲರೂ ಇತರರನ್ನು ಭಿನ್ನವಾಗಿ ಕಾಣುವುದಕ್ಕಿಂತ "ನಾವೆಲ್ಲರೂ ಈ ಭೂಮಿ ತಾಯಿಯ ಮಕ್ಕಳು ಕುಡಿಯುವುದು ಒಂದೇ ನೀರು ಓಡಾಡುವುದು ಒಂದೇ ನೆಲ ನಮ್ಮೆಲ್ಲರ ಮೈಯಲ್ಲಿ ಹರಿಯುವುದು ಒಂದೇ ಬಣ್ಣದ ರಕ್ತ ಎಂಬುದನ್ನು ನೆನಪಿನಲ್ಲಿಟ್ಟುಕೊಂಡು ಕೂಡಿ ಬಾಳಲು ಯಾವುದೇ ಶಾಸ್ತ್ರ ಪುರಾಣ ಬೈಬಲ್ ಕುರಾನ್ಗಳು ಬೇಕಾಗಿಲ್ಲ. ಆ ಎಲ್ಲ ಧರ್ಮ ಗ್ರಂಥಗಳ ಸಾರವೂ ಕೂಡ ಮಾನವೀಯ ಧರ್ಮವನ್ನು ಹೊರತಾಗಿಸಿಲ್ಲ.

ಇದನ್ನೇ ಶತಮಾನಗಳ ಹಿಂದೆ ಆದಿಕವಿ ಎಂದು ಕರೆಸಿಕೊಂಡಿರುವ ಪಂಪನು 'ಮಾನವ ಜಾತಿ ತಾನೊಂದೇ ವಲಂ' ಎಂದು ಹೇಳುವ ಮೂಲಕ ಇಡೀ ಜಗತ್ತನ್ನು ಒಂದು ಭ್ರಾತೃತ್ವದಡಿಯಲ್ಲಿ ಬಂಧಿಸಿಡಲು ಒತ್ತಾಯಿಸಿದ.

ಇದುವೇ ನಮ್ಮ ಎದೆಯ ದನಿಗೂ ಮಿಗಿಲಾದ ಶಾಸ್ತ್ರ ವಿಹುದೇನು? ಎಂಬ ಕುವೆಂಪುರವರ ಕವನದ ಒಂದು ಸಾಲು ಚಿಂತನೆಗೆ ಈಡುಮಾಡಿದ ಪರಿಣಾಮದ ಲೇಖನ.

---

# ಶಿಸ್ತು ಮತ್ತು ಸಂಯಮ




ಗಿರಿಜಾ.ಎಸ್. ದೇಶಪಾಂಡೆ. ಬೆಂಗಳೂರು.

ಶಿಸ್ತು ಸಂಯಮ ಪರಿಪಾಲನೆಗಳು ವ್ಯಕ್ತಿ ವಿಕಸನಕ್ಕೆ ಬೇಕಾದ ಮೂಲ ಮಂತ್ರಗಳು.ಬೇಗ ಮಲಗಿ ಬೇಗ ಏಳುವದರಿಂದ ಹಿಡಿದು ದಿನದ ಕಾರ್ಯಗಳನ್ನು ಕೈಗೊಳುತ್ತ ಅಂದಿನ ಕೆಲಸ ಅಂದೇ ಮಾಡಿ ಮುಗಿಸಿ ನಾಳಿನ ಕೆಲಸಕ್ಕೆ ಹೊಸದಿನವನ್ನು ಕತ್ತಲೆ ಸರಿಸಿ ಹೊಸ ಹೊಂಗಿರಣಗಳೊಂದಿಗೆ ಆಗಮಿಸುವ ಸೂರ್ಯನಂತೆ ತೇಜೋಪುಂಜನಾಗಿರಬೇಕು ಮನುಷ್ಯನ ಜೀವನ,ಆಗ ಉತ್ತಮ ಫಲಿತಾಂಶ ನಾವು ನಿರೀಕ್ಷಿಸಬಹುದು."ಆಲಸ್ಯಂ ಅಮೃತಂ ವಿಷಂ" ಆಲಸ್ಯತನದಿಂದ ಅಮೃತವೂ ಕೂಡ ವಿಷವಾಗಿ ಪರಿವರ್ತನೆಗೊಳ್ಳುತ್ತದೆ." ಹೊತ್ತು ಕಳೆದರೆ ಹೋಯ್ತು ಮುತ್ತು ಒಡೆದರೆ ಹೋಯ್ತು" ನಾವು ಚಲಿಸಿದರೂ ,ಚಲಿಸದೇ ಇದ್ದರೂ ಗಡಿಯಾರದ ಮುಳ್ಳು ಚಲಿಸುತ್ತಲೆ ಇರುತ್ತದೆ.ಇದು ಪ್ರಕೃತಿಯ ನಿಯಮ.ಶಿಸ್ತಿನ ಇನ್ನೊಂದು ಹೆಸರೇ ಪ್ರಕೃತಿ.ಶಿಸ್ತು ಮನುಷ್ಯ ಜೀವನದ ಜೀವನಾಡಿ,ಬೆಳೆದ ಮಕ್ಕಳನ್ನು ನೈಸರ್ಗಿಕ ಶಿಸ್ತಿನತ್ತ ಸಾಗುವದಕ್ಕೆ ಪ್ರೇರೆಪಿಸಿ ಪ್ರೋತ್ಸಾಹಿಸಬೇಕು.ಪ್ರಕೃತಿ ಪ್ರೇಮವೂ ಸೇರಿದಂತೆ ನೈಸರ್ಗಿಕ ಜೀವನಯಾಪನ ಮಾಡುವತ್ತ ಅವರ ಗಮನ ಕೇಂದ್ರಿಕರಿಸಲು ಪ್ರೇರಣೆ ನೀಡಬೇಕು. ಮಕ್ಕಳ ಮಾನಸಿಕ ಆರೋಗ್ಯಕ್ಕೆ ನೈಸರ್ಗಿಕ ಜೀವನ ತುಂಬ ಸಹಕಾರಿ.ಯಾರು ದಿನದ ಹೆಚ್ಚು ಕಾಲ ಕಾರ್ಯಮಗ್ನರಾಗಿದ್ದು ಶರೀರಕ್ಕೆ ಹೆಚ್ಚು ಕೆಲಸ ಕೊಡುತ್ತಾರೋ ಅವರು ರೋಗರುಜಿನಗಳಿಂದ ದೂರವಾಗಿರುತ್ತಾರೆ.ಅಥವಾ ಅಂತಹವರ ಹತ್ತಿರ ರೋಗಗಳು ಸುಳಿಯುವದೇ ಇಲ್ಲ.


ಪ್ರಾಕೃತಿಕವಾಗಿ ಸಮಯಕ್ಕೆ ಸರಿಯಾಗಿ ಕೆಲಸಕಾರ್ಯವನ್ನು ಮಾಡುವದೇ ಶಿಸ್ತು. ಆವೇಶ,ಉದ್ವೇಗ,ಆತುರಗಳಿಗೆ ಅವಕಾಶ ಕೊಡದೇ ಸಂದರ್ಭಕ್ಕೆ ತಕ್ಕಂತೆ ಸ್ಪಂದಿಸುತ್ತ ಬರುವ ಅಡೆತಡೆಗಳನ್ನು ಹಿಮ್ಮೆಟ್ಟಿಸುತ್ತ ದಾರಿ ಮಧ್ಯ ಬರುವ ಅಡೆತಡೆಗಳಿಗೆ ಹೆದರದೇ ಮುನ್ನಡೆವ ನದಿಯು ಅಂತಿಮ ಗುರಿಯಾದ ಸಾಗರಕ್ಕೆ ಬಂದು ಸೇರುವ ನದಿಯಂತೆ ತಾಳ್ಮೆಯಿಂದ ಕಾರ್ಯೋನ್ಮುಖನಾಗಿರುವದೇ ಶಿಸ್ತು.ಮನುಷ್ಯನಿಗೆ ಬೇಕಾದುದು ಸಂಯಮ.ಆ ಸಂಯಮವೇ ಗುರಿಮುಟ್ಟಲು ಸಹಕರಿಸುವ ಸಂಜೀವಿನಿ.ಮನುಷ್ಯನ ಜೀವನದಲ್ಲಿ ಶಿಸ್ತಿಗೆ ಅಗ್ರಸ್ಥಾನ.ಶಿಸ್ತಿನಿಂದ ಮಾತ್ರ ಮನುಷ್ಯ ಉತ್ತಮ ವ್ಯಕ್ತಿಯಾಗಿ ಹೊರಹೊಮ್ಮಲು ಸಹಕಾರಿಯಾಗುತ್ತದೆ.ತನ್ನ ಪ್ರಗತಿ ಯಲ್ಲಿ ಅನ್ಯಾಯವಾಗದಂತೆ ಬೆಳೆದು ಬದುಕುವದು ಶಿಸ್ತು.

* **ಶಿಸ್ತು ಹಾಗೂ ಅಹಿಂಸಾ ಗುಣಗಳು ನಮ್ಮದಾಗಿರಲಿ.**
* **ಸ್ವಚ್ಛತೆ ,ಶಿಸ್ತು,ಸಂಯಮ,ಸಮಯಪರಿಪಾಲನೆ,ನಮ್ಮ ಜೀವನದ ಶೈಲಿಯಾಗಿರಲಿ.**
* **ಪೌಷ್ಟಿಕ ಆಹಾರದ ಸೇವನೆ ಒಳ್ಳೆಯದು.**
* **ಬಿಡುವಿನ ವೇಳೆಯಲ್ಲಿ ಪುಸ್ತಕ ನಮ್ಮ ಕೈಯಲ್ಲಿದ್ದರೆ ನಮ್ಮ ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಯುವದಕ್ಕೆ ವೇದಿಕೆಯಾಗಬಹುದು.**
* **ಸತ್ಯಕ್ಕೆ ಸಾವಿಲ್ಲಸುಳ್ಳಿಗೆ ಸುಖವಿಲ್ಲ ಎಂಬ ಮಾತು ಮಕ್ಕಳಲ್ಲಿ ಬೇರೂರಲಿ.ವಿದ್ಯೆಯಿಂದ ವಿನಯವು,ವಿನಯದಿಂದ ಯೋಗ್ಯತೆ,ಯೋಗ್ಯತೆಯಿಂದ ಧನ,ಧನದಿಂದ ಧರ್ಮಧರ್ಮದಿಂದ ಸುಖವು ಪ್ರಾಪ್ತವಾಗುತ್ತದೆ.ವಿಷಯ ಹೀಗಿರಲು ಮಕ್ಕಳು ವಿದ್ಯಾವಂತರಾಗಲಿ ಅದಕ್ಕೆ ಪ್ರೇರಣೆದಾಯಕ ಪಾಲಕರಾಗಬೇಕು.**



---

# ಸಂಬಂಧಗಳ ಹೂಡಿಕೆ



ಅರವತ್ತೆರಡು ವರ್ಷದ ಶೇಖರ್ ತಮ್ಮ ಸ್ಟಡಿ ರೂಮಿನಲ್ಲಿ ದಿಗ್ಭ್ರಾಂತರಾಗಿ ಕುಳಿತಿದ್ದರು. ಕಿಟಕಿಯ ಹೊರಗೆ ಸಂಜೆಯ ಕತ್ತಲು ಆವರಿಸುತ್ತಿದ್ದಂತೆ, ಆ ಕೋಣೆಯಲ್ಲಿ ಒಂದು ರೀತಿಯ ನಿಗೂಢ ಮತ್ತು ಭಯಾನಕ ಮೌನ ಮನೆಮಾಡಿತ್ತು. ಆ ಮೌನವು ಕೇವಲ ಕೋಣೆಯದ್ದಾಗಿರಲಿಲ್ಲ; ಅದು ಅವರ ಮನಸ್ಸಿನ ಆಳದಲ್ಲಿ ನಡೆಯುತ್ತಿದ್ದ ತೀವ್ರ ಅಶಾಂತಿಯ ಪ್ರತಿಫಲನವಾಗಿತ್ತು. ಐಟಿ ವೃತ್ತಿಯಿಂದ ಗೌರವಯುತವಾಗಿ ನಿವೃತ್ತರಾಗಿದ್ದ ಅವರಿಗೆ, ಇಡೀ ಜೀವನದ ಶ್ರಮದ ಫಲವಾಗಿ ಬಂದಿದ್ದ ನಿವೃತ್ತಿ ವೇತನ ಮತ್ತು ಉಳಿತಾಯದ ಹಣ ಈಗ ಶೂನ್ಯವಾಗಿತ್ತು. ಪ್ರೀತಿಯ ಮಗಳು ಅನನ್ಯಾಳ ಮದುವೆಯ ದಿನ ಹತ್ತಿರ ಬರುತ್ತಿದ್ದಂತೆ, ತಮಗೆ ತಾವೇ ಮಾಡಿಕೊಂಡ ವಂಚನೆಯ ನೆನಪು ಅವರ ತಲೆ ಸಿಡಿಯುವಂತೆ ಮಾಡುತ್ತಿತ್ತು.

ಶೇಖರ್ ಅವರ ಮನಸ್ಸು ಅನಿವಾರ್ಯವಾಗಿ ಹಿಂದಿನ ದಿನಗಳ ಮೆಲುಕು ಹಾಕುತ್ತಾ ಹೋಯಿತು. ಸುಮಾರು ಮೂರು ದಶಕಗಳ ಕಾಲ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಹಗಲಿರುಳು ದುಡಿದು, ಮಗ ಮತ್ತು ಮಗಳನ್ನು ಸುಸಂಸ್ಕೃತರಾಗಿ ಬೆಳೆಸಿದ್ದರು. 2002ರಲ್ಲಿ ಬೆಂಗಳೂರಿನ ಈ ಮನೆಯನ್ನು ಕಟ್ಟುವಾಗ ಅವರು ಪಟ್ಟ ಶ್ರಮ, ಪ್ರತಿಯೊಂದು ಇಟ್ಟಿಗೆಯ ಮೇಲೆ ಅವರಿಗಿದ್ದ ಮಮಕಾರ ಎಲ್ಲವೂ ಈಗ ಕಣ್ಣಮುಂದೆ ಸುಳಿಯುತ್ತಿತ್ತು. ಆದರೆ, ನಿವೃತ್ತಿಯ ನಂತರ ಅವರಿಗೆ ಆವರಿಸಿದ್ದ ಒಂದು ಕ್ಷಣದ ಅನಿಶ್ಚಿತತೆ ಮತ್ತು ಅತಿಯಾಸೆ ಇಂದು ಅವರ ಇಡೀ ಬದುಕನ್ನೇ ಬುಡಮೇಲು ಮಾಡಿತ್ತು.

ಇಂದಿನ ಕಾಲದ ಅದ್ದೂರಿ ಮದುವೆಗಳ ಅಬ್ಬರ, ಸಾಮಾಜಿಕ ಜಾಲತಾಣಗಳಲ್ಲಿನ ಫೋಟೋಗಳ ರಂಗು ಮತ್ತು ಸಮಾಜದಲ್ಲಿನ ಸುಳ್ಳು ಪ್ರತಿಷ್ಠೆಯನ್ನು ನೋಡಿ, ಶೇಖರ್ ಅವರಿಗೆ ಒಂದು ರೀತಿಯ ಕೀಳರಿಮೆ ಕಾಡತೊಡಗಿತ್ತು. "ನನ್ನ ಮಗಳ ಮದುವೆ ಯಾವುದರಲ್ಲೂ ಕಡಿಮೆ ಇರಬಾರದು, ನನ್ನ ಇಷ್ಟು ವರ್ಷದ ಗಳಿಕೆ ಅವಳ ಮದುವೆಯ ವೈಭವಕ್ಕೆ ಸಾಲದೇನೋ?" ಎಂಬ ಅನಗತ್ಯ ಭೀತಿಯಲ್ಲಿ ಅವರು ಅಪಾಯಕಾರಿ ಹಾದಿ ಹಿಡಿದಿದ್ದರು. ತಮ್ಮ ಹಳೆಯ ಸ್ನೇಹಿತನೊಬ್ಬ ನೀಡಿದ ಹೆಚ್ಚಿನ ಲಾಭದ ಆಮಿಷಕ್ಕೆ ಒಳಗಾಗಿ, ಯಾವುದೋ ಅನಾಮಧೇಯ ಬ್ರೋಕರ್ ಮಾತುಗಳನ್ನು ಕುರುಡಾಗಿ ನಂಬಿದ್ದರು. ತಮ್ಮ ಜೀವಮಾನದ ಉಳಿತಾಯವನ್ನೆಲ್ಲ ಅನಿಶ್ಚಿತ ಷೇರುಗಳಲ್ಲಿ ಮತ್ತು ಹೆಚ್ಚಿನ ಬಡ್ಡಿ ನೀಡುವ ಸ್ಥಳೀಯ ಕೋ–ಆಪರೇಟಿವ್ ಬ್ಯಾಂಕ್‌ನಲ್ಲಿ ಹೂಡಿಕೆ ಮಾಡಿದ್ದರು.

ಆದರೆ ವಿಧಿಯಾಟ ಕ್ರೂರವಾಗಿತ್ತು. ಜಾಗತಿಕ ಮಾರುಕಟ್ಟೆಯ ಆಕಸ್ಮಿಕ ಕುಸಿತ ಮತ್ತು ಆ ಬ್ಯಾಂಕ್‌ನ ದೊಡ್ಡ ಮಟ್ಟದ ಅವ್ಯವಹಾರದ ಸುದ್ದಿಗಳು ಬೆಳ್ಳಂಬೆಳಗ್ಗೆ ಪತ್ರಿಕೆಗಳಲ್ಲಿ ಬಂದಾಗ ಶೇಖರ್ ಅವರ ಕಾಲಡಿ ಭೂಮಿ ಕುಸಿದಂತಾಗಿತ್ತು. ಹೂಡಿಕೆ ಮಾಡಿದ್ದ ಹಣ ಸಂಪೂರ್ಣವಾಗಿ ಕರಗಿಹೋಗಿತ್ತು. ಈಗ ಅವರ ಬಳಿ ಉಳಿದಿದ್ದು ಬರಿಗೈ, ಅಸಹಾಯಕತೆ ಮತ್ತು ತೀವ್ರ ಅಪರಾಧ ಪ್ರಜ್ಞೆ ಮಾತ್ರ.

ಶೇಖರ್ ಎಲ್ಲವನ್ನೂ ಕಳೆದುಕೊಂಡ ಶೂನ್ಯ ಭಾವದಲ್ಲಿ ಕಣ್ಣೀರು ಹಾಕುತ್ತಾ ಕುಳಿತಿದ್ದಾಗ, ಮಗಳು ಅನನ್ಯಾ ಎಂದಿನಂತೆ ಮುಗುಳ್ನಗುತ್ತಾ ಬಿಸಿ ಚಹಾ ಹಿಡಿದು ಕೋಣೆಯೊಳಗೆ ಬಂದಳು. ಅವಳ ನಿಷ್ಕಲ್ಮಶ ನಗು ಇಂದು ಶೇಖರ್ ಅವರಿಗೆ ಮುಳ್ಳಿನಂತೆ ಚುಚ್ಚುತ್ತಿತ್ತು. ತಂದೆಯ ಮುಖದ ಮೇಲಿದ್ದ ಬೆವರಿನ ಹನಿಗಳು ಮತ್ತು ತತ್ತರಿಸಿದ್ದ ದೃಷ್ಟಿಯನ್ನು ಕಂಡು ಅನನ್ಯಾ ಆತಂಕಗೊಂಡಳು.

"ಅಪ್ಪಾ, ಏನಾಗಿದೆ? ಯಾಕೆ ಹೀಗೆ ಕುಳಿತಿದ್ದೀರಿ? ಮದುವೆಯ ಕ್ಯಾಟರಿಂಗ್ ವ್ಯವಸ್ಥೆಗೆ ಅಡ್ವಾನ್ಸ್ ಹಣ ಕೊಡಬೇಕಿದೆ ಎಂದು ಅವರು ಫೋನ್ ಮಾಡಿದ್ದರು," ಎಂದು ಅವಳು ಮೆಲ್ಲಗೆ ನೆನಪಿಸಿದಾಗ ಶೇಖರ್ ಒಳಗಿನಿಂದ ತತ್ತರಿಸಿ ಹೋದರು. ತಡೆಯಲಾರದೆ ಬಿಕ್ಕಳಿಸುತ್ತಾ, "ಅನನ್ಯಾ, ನನ್ನನ್ನು ಕ್ಷಮಿಸು ಮಗಳೇ... ನಿನ್ನ ಮದುವೆಗಾಗಿ ನಾನು ಮಾಡಿದ ಹೂಡಿಕೆಯಲ್ಲಿ ದೊಡ್ಡ ತಪ್ಪಾಗಿದೆ. ನಾವು ಇಂದು ಎಲ್ಲವನ್ನೂ ಕಳೆದುಕೊಂಡು ಬೀದಿಗೆ ಬಂದಿದ್ದೇವೆ. ನಿನ್ನ ಅದ್ದೂರಿ ಮದುವೆಯ ಕನಸುಗಳನ್ನು ನಾನೇ ಮಣ್ಣು ಮಾಡಿದೆ," ಎಂದು ಅಳುತ್ತಾ ನಡೆದ ಘಟನೆಯನ್ನು ವಿವರಿಸಿದರು.

ಮಗಳು ಆ ಮಾತನ್ನು ಕೇಳಿ ಒಂದು ಕ್ಷಣ ಸ್ತಬ್ಧಳಾದಳು. ಮನೆಯ ಇಡೀ ಪರಿಸರ ಮೌನವಾಗಿತ್ತು. ಆದರೆ ಅವಳು ಕೇವಲ ಪದವೀಧರೆಯಲ್ಲ, ಸಂಸ್ಕಾರವಂತ ಹೆಣ್ಣುಮಗಳು. ತನ್ನ ತಂದೆಯ ಮುಖದಲ್ಲಿದ್ದ ಆ ನಿಸ್ಸಹಾಯಕತೆಯನ್ನು ಕಂಡ ಅವಳು, ತನ್ನ ದುಃಖವನ್ನು ನುಂಗಿ ಒಂದು ದೃಢ ನಿರ್ಧಾರಕ್ಕೆ ಬಂದಳು.

ಮರುದಿನವೇ ಅನನ್ಯಾ ತನ್ನ ಭಾವಿ ಪತಿ ವಿಕ್ರಮ್‌ನನ್ನು ಭೇಟಿಯಾದಳು. ವಿಕ್ರಮ್ ಒಬ್ಬ ಉನ್ನತ ಉದ್ಯೋಗಿಯಾಗಿದ್ದರೂ ಜೀವನದ ಮೌಲ್ಯಗಳನ್ನು ಅರಿತವನು. "ವಿಕ್ರಮ್, ನಮ್ಮ ಮದುವೆಯ ಬಗ್ಗೆ ನಾವು ಇಲ್ಲಿಯವರೆಗೆ ಕಂಡಿದ್ದ ಅದ್ದೂರಿ ಕನಸುಗಳನ್ನು ಈಗಲೇ ಬದಲಿಸಿಕೊಳ್ಳಬೇಕಿದೆ," ಎನ್ನುತ್ತಾ ತನ್ನ ತಂದೆ ಎದುರಿಸುತ್ತಿರುವ ಆರ್ಥಿಕ ಬಿಕ್ಕಟ್ಟನ್ನು ಅತ್ಯಂತ ಪಾರದರ್ಶಕವಾಗಿ ವಿವರಿಸಿದಳು. "ನನ್ನ ಅಪ್ಪ ತನ್ನ ಗೌರವ ಉಳಿಸಿಕೊಳ್ಳಲು ಈ ವಯಸ್ಸಿನಲ್ಲಿ ಮತ್ತೆ ಸಾಲದ ಸುಳಿಗೆ ಸಿಲುಕುವುದು ನನಗೆ ಇಷ್ಟವಿಲ್ಲ. ನಮಗೆ ಬೇಕಿರುವುದು ಸಮಾಜಕ್ಕೆ ತೋರಿಸುವ ಆಡಂಬರವೇ ಅಥವಾ ನಮ್ಮ ಕುಟುಂಬದ ಶಾಂತಿಯೇ?" ಎಂದು ನೇರವಾಗಿ ಪ್ರಶ್ನಿಸಿದಳು.

ವಿಕ್ರಮ್ ಅವಳ ಈ ಪ್ರೌಢಿಮೆ ಮತ್ತು ತಂದೆಯ ಮೇಲಿರುವ ಅಗಾಧ ಕಾಳಜಿಯನ್ನು ಕಂಡು ಬೆರಗಾದನು. ಅವಳ ಕೈಹಿಡಿದು ಸಮಾಧಾನ ಪಡಿಸುತ್ತಾ, "ಅನನ್ಯಾ, ನಾನು ನಿನ್ನನ್ನು ಮನಸಾರೆ ಪ್ರೀತಿಸಿದ್ದು ನಿನ್ನ ಗುಣಕ್ಕಾಗಿ, ನಿನ್ನ ಹಣಕ್ಕಲ್ಲ. ಈ ಕಷ್ಟದ ಸಮಯದಲ್ಲಿ ನಾವು ಅಪ್ಪನ ಜೊತೆ ಬೆನ್ನೆಲುಬಾಗಿ ಗಟ್ಟಿಯಾಗಿ ನಿಲ್ಲಬೇಕು. ಮದುವೆ ಎನ್ನುವುದು ಎರಡು ಕುಟುಂಬಗಳ ಪ್ರೀತಿಯ ಮಿಲನವೇ ಹೊರತು, ಆಸ್ತಿಪಾಸ್ತಿಯ ಪ್ರದರ್ಶನವಲ್ಲ," ಎಂದು ಭರವಸೆ ನೀಡಿದ. ವಿಕ್ರಮ್ ತನ್ನ ಪೋಷಕರಿಗೂ ವಾಸ್ತವ ಪರಿಸ್ಥಿತಿಯನ್ನು ತಿಳಿಸಿ, ಅತ್ಯಂತ ಸರಳ ಮದುವೆಗೆ ಅವರನ್ನು ಒಪ್ಪಿಸಿದ.

ನಿಗದಿತ ದಿನದಂದು ಮದುವೆಯು ಸುಸೂತ್ರವಾಗಿ ನಡೆಯಿತು. ಬೆಂಗಳೂರಿನ ಒಂದು ಸಣ್ಣ ಸಮುದಾಯ ಭವನದಲ್ಲಿ, ಯಾವುದೇ ಅಬ್ಬರ ಮತ್ತು ಆಡಂಬರವಿಲ್ಲದೆ ಶುಭಕಾರ್ಯ ನೆರವೇರಿತು. ಅಲ್ಲಿ ಬಂದಿದ್ದವರು ಕೇವಲ ಆತ್ಮೀಯರು ಮತ್ತು ಹಿತೈಷಿಗಳು ಮಾತ್ರ. ಶೇಖರ್ ಅವರ ಪತ್ನಿ ಆಷಾ ಕೂಡ ಮಗಳ ನಿರ್ಧಾರಕ್ಕೆ ಸಾಥ್ ನೀಡಿ, ಅದ್ದೂರಿ ರೇಷ್ಮೆ ಸೀರೆಗಳ ಬದಲಾಗಿ ಮನೆಯಲ್ಲಿದ್ದ ಸಾಂಪ್ರದಾಯಿಕ ಉಡುಪಿನಲ್ಲೇ ಮಗಳನ್ನು ಸಜ್ಜುಗೊಳಿಸಿದ್ದರು.

ಮದುವೆಯ ನಂತರ ಶೇಖರ್ ತಮ್ಮ ಅಳಿಯ ವಿಕ್ರಮ್ ಹೆಗಲ ಮೇಲೆ ಕೈಯಿಟ್ಟು ಗದ್ಗಿತ ಕಂಠದಿಂದ, "ನನ್ನನ್ನು ಕ್ಷಮಿಸು ವಿಕ್ರಮ್, ನಾನು ಅಂದುಕೊಂಡಂತೆ ಅದ್ದೂರಿಯಾಗಿ ಮದುವೆ ಮಾಡಲು ಸಾಧ್ಯವಾಗಲಿಲ್ಲ," ಎಂದರು. ಆಗ ವಿಕ್ರಮ್ ನಗುತ್ತಾ ಅವರ ಹೆಗಲ ಮೇಲೆ ಆತ್ಮೀಯವಾಗಿ ಕೈ ಇರಿಸಿದ. "ನೋಡಿ ಮಾವಯ್ಯ, ಹೊರಗಿನ ಅದ್ದೂರಿತನ ಕೇವಲ ನಾಲ್ಕು ದಿನಗಳ ಮಾತು. ಆದರೆ ನೀವು ನೀಡಿದ ಸಂಸ್ಕಾರ ಮತ್ತು ನಿಮ್ಮ ಮಗಳ ಈ ಗುಣ ಜೀವನಪರ್ಯಂತ ಇರುತ್ತದೆ. ಬ್ಯಾಂಕ್ ಬ್ಯಾಲೆನ್ಸ್‌ಗಿಂತ ನಿಮ್ಮ ಕುಟುಂಬದ ಈ ಪ್ರೀತಿ ನನಗೆ ಸಿಕ್ಕ ಅತಿದೊಡ್ಡ ಹೂಡಿಕೆ," ಎಂದನು.

ಅನನ್ಯಾ ಅಂದು ತನ್ನ ತಾಯಿಯ ಹಳೆಯ ರೇಷ್ಮೆ ಸೀರೆಯಲ್ಲಿ ದೇವತೆಯಂತೆ ಮಿನುಗುತ್ತಿದ್ದಳು. ಅವಳ ಕಣ್ಣಲ್ಲಿ ಅದ್ದೂರಿತನದ ಕೊರತೆಯ ಬದಲಾಗಿ, ತಂದೆಯನ್ನು ಸಂಕಷ್ಟದಿಂದ ಪಾರುಮಾಡಿದ ಅತೀವ ತೃಪ್ತಿ ಇತ್ತು. ಶೇಖರ್ ಅವರಿಗೆ ಅಂದು ಒಂದು ದೊಡ್ಡ ಜೀವನದ ಸತ್ಯ ಅರ್ಥವಾಯಿತು. ಸಂಪತ್ತು ಎಂಬುದು ಬಂದು ಹೋಗುವ ಅಲೆ; ಆದರೆ ನಿಜವಾದ ಶ್ರೀಮಂತಿಕೆ ಇರುವುದು ನಂಬಿಕಸ್ಥ ಸಂಬಂಧಗಳಲ್ಲಿ. ಬದುಕಿನ ಲೆಕ್ಕಾಚಾರದಲ್ಲಿ ಹಣದ ಅಂಕಣಗಳು ಬರಿದಾಗಬಹುದು, ಆದರೆ ಪ್ರೀತಿ, ತಾಳ್ಮೆ ಮತ್ತು ವಿಶ್ವಾಸದ ಹೂಡಿಕೆಗಳು ಮನುಷ್ಯನನ್ನು ಎಂದಿಗೂ ಕೈಬಿಡುವುದಿಲ್ಲ.

ಜೀವನದಲ್ಲಿ 'ಸರಳತೆ' ಎಂಬುದು ಕೇವಲ ಅನಿವಾರ್ಯತೆಯಲ್ಲ, ಅದೊಂದು ಸುಂದರ ಘನತೆ ಎಂಬ ಅರಿವು ಮೂಡಿದಾಗ ಶೇಖರ್ ಅವರ ಮನಸ್ಸು ನಿರಾಳವಾಯಿತು. ಅವರ ಕಣ್ಣಂಚಿನಲ್ಲಿ ಈಗ ಆನಂದಬಾಷ್ಪ ಒಸರುತ್ತಿತ್ತು.



ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email : Swamynathann@gmail.com

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,